DISCUSSION ON FACT FINDING COMMITTEE REPORT.

Mr. SPEAKER.—Now Sri Rajasekharamurthy may speak on the report. I may request him to be as brief as possible and not to cover the points that have already been covered by other Hon'ble members. No useful purpose would be served by repeating arguments.

Sri M. RAJASEKHARAMURTHY.—In my case, I request the Chair to kindly take a lenient view. You can give chance to as many members as possible.

Sri J. MOHAMED IMAM.—Sir, are we closing tomorrow?

Mr. SPEAKER. I intend calling the Session tomorrow morning as well as in the evening for discussing the Special Resolution and the Report.

Sri M. RAJASEKHARA MURTHY (Yelandur).—Sir, the question of re-drawing the political map of India has been engaging the attention of the Indian reformers and the constitutional pundits for the last 50 years. The demand for the linguistic provinces has become so much that it has almost become the part and parcel of Indian current political thought; particularly after the formation of Sind and Orissa the question has gathered some momentum. The framers of the Indian Constitution, while anticipating all these contingencies have made a provision in the Constitution for the formation of New States and for the adjustment of the territorial boundaries of the States and have rightly empowered the Parliament to form New States according to the needs of the people. Due to the continued pressure and demand brought upon the Government of India, the Government of India const tuted a High Power Commission to submit a report. It is at this juncture that the Government of Mysore have constituted a Committee known as the Seshadri Committee in order to collect, correlate and co-ordinate the relevant data connected with the formation of Karnatak in order to help the Legislature to come to a decision. Before going into the details of this Report, there are four important factors which must be borne in mind by the Legislature. First, this is not a State question. This is a national question. So, we must take into consideration the overall picture of India forgetting for a moment that we belong to Mysore State. Secondly, it is a problem for wise statesmanship not in administration, partly because it calls for courage on the part of the Government of India and partly because it calls for statesmanship and wisdom on the part of Government. Thirdly, power politics, communal considerations, personal conveniences and inconveniences and personal prejudices should be kept out of mind while considering this question. And lastly, Mysore should not be considered as the registered property of anybody. Mysore is part and parcel of Indian Union. Bearing these four factors in mind, we must proceed to discuss this matter. While discussing this subject, certain issues will arise. Firstly, whether there is any necessity for the reorganisation? If there is any necessity, what are the factors that must be taken into consideration? Whether the time is appropriate for the reorganisation of the States? Whether two Karnatakas are feasible? What should be the future of Hyderabad? And whether plebiscite should be resorted to or not? Now I will take up the first aspect, whether reorganisation is necessary.

Sir, the existing territorial boundaries are not based on any rational principle. They are partly due to the historic accident and partly due to the deliberate creation of the Britishers not only to maintain their iron grip over the Indian administration but also to perpetuate the imperialistic design of the Britishers. In these existing divisions people speaking the same language are kept in different administrative units which has been responsible for creating a heterogeneous, multi-lingual administrative units instead of homogeneous unilingual States in India.

1 P.M.

Take for example Bombay. It comprises three distinct regional groups speaking different languages, namely,

(SRI M. RAJASEKHARA MURTHY).

Gujarati, Marati and Kannada. Madras comprises people speaking four languages — Kannada, Malayalam, Telugu and Tamil. Hyderabad is the conglomeration of three distinct regional groups Telugu, Marati and Kannada. We are living to-day in a country which is having a federal form of Government, representing the might and glory of India with its constituent States enjoying internal autonomy. In a federation, the nature of a unit is of paramount importance. A unit in a federal form of Government must be as far as possible homogeneous and not heterogeneous in character.

As rightly pointed out by Professor D. R. Gadgil, Director of Gokhale Institute of Politics and Economics:

> "To treat the existing provinces as the Federating units would not only be meaningless but also positively harmful. A large number of these units are so composite in character as to be potential federations in themselves, and in a number of instances, there is no homogeneity of sentiment or interest between all their parts. If the federal structure is to be raised on a basis that is durable, the settling of provincial constitutions must be done by units which are homogeneous, which have a feeling of distinct identity among themselves and which represent a common way of thinking."

The concept of linguistic provinces even according to the Constitutional Pandits, is not adogma or a shibboleth but a political necessity and a logical pre-requisite of a federal form of Government. Since language indicates the common culture, the common tradition and the common way of thinking, a linguistic unit in a federal form of Government would be the most appropriate unit. For purpose of political organisations, homogeneity based on cultural and social homogeneity will be the most important factor. Social and cultural homegeneity exists in people who are speaking only the common language. Therefore, I emphasise that a linguistic unit would be the most appropriate unit in a federal form of Government and secondly, the existence of these heterogeneous multi-lingual units hampers the growth of democracy. If any democratic form of Government is to be successful, the business of the Government must be carried on in a language which all the people can understand and with which the Legislatures are conversant. It is not possible to expect the members of the Legislature to speak in all languages, particularly in a hetrogeneous country. Take for example Bombay. It is very difficult. In Bombay on the 11th September 1947 an absurd situation of that kind arose. The Speaker of the Legislative Assembly gave liberty to the members of the Legislature to speak in any recognised Indian language. The Minister concerned piloted the Bill in Marathi, the Parliamentary Secretary began to speak in Gujarati and one of the members began to put questions in Kannada. This absurd situation arose because Bombay is a multi-lingual area. By allowing these multi-lingual areas to form themselves into separate administrative units, such a thing could have been put an end to. Another principle of a democratic Government is that States in Indian administration must enjoy equal rights and privileges, but today Indian States are enjoying different kinds of status. The States in India today have been divided into three categories *viz.*, Part A, Part B and Part C States. This kind of division compares very well with the classificatoin of the British Empire as dominions, dependencies and crown colonies. This kind of alphabetical nomenclature is an anachronism in any democratic form of Government. This system can be abolished as far as possible by reorganising the States on a rational principle. So far as the administrative aspect is concerned, the existing unit renders the administration very difficult.

Referring to the Madras Presidency, as early as 1903 Mr. H. H. Risley, Secretary, Home Department wrote:

"The Government of Madras have repeatedly complained of the anxieties imposed upon their administration, of the great diversities of language, Oriya, Tamil, Telugu, Malayalam and Kanarese with which Madras civilians are called upon to cope and which render the transfer of officers from one part of the Presidency to another a matter, in any case, of great difficulty and often of positive detriment to the public interest. These disadvantages exercise an injurious effect not only upon the administration, but still more upon the people. Hence in dealing with a question of this kind, it may be that the true criterion of territorial redistribution should be sought not in race but in language."

Therefore, there is necessity for reorganisation of States and it must be on the basis of language. Language should be given more importance. Administrative convenience, geographical contiguity, financial stability and ecomonic self-sufficiency will have only secondary importance.

The next question is whether the time is appropriate and opportune to take up this question. I divide this into two periods : prior to independence and after. This question could not be satisfactorily dealt with prior to independence for certain reasons. First, we were labouring under the British bondage. India had not yet obtained independence. The British Government did not like to form these States on linguistic basis because they wanted to perpetuate their imperialistic design in our country It is quite evident from the partition of Bengal in 1905. In 1905 when Bengal was partitioned, it was done with the intention of keeping Bengal under check and not for administrative convenience. Secondly, there were 562 Princely States. These 562 States offered obstacle for the formation of linguistic provinces. Thirdly, most of the Committees formed contained people who were Hindi imperialists. They were very much afraid that the formation of linguistic units would affect the spread of Hindi. These three factors formed an obstacle in the formation of linguistic provinces. After 1947 there were certain other difficulties altogether different in nature. Firstly, soon after the partition of India, it brought in its train the refugee problem, there was the question of food control. Further the Kashmir question and the Hyderabad Police Action engaged the attention of Government. All these factors did not enable the Government of India to take this matter with earnestness. Now the Government of India have solved these problems most satisfactorily. India has attained her rightful place in the comity of nations and her words are being heard with increasing respect. In the home front she has made a remarkable achievement. Now the time is most appropriate for the formation of linguistic provinces.

The next question is, what should be the future of Hyderabad ? In my opinion Hyderabad must be disintegrated. It should not find a place in the political map of India. The Hyderabad Provincial Congress Committee, the Peoples Democratic Front, the Communist Party and the Hindu Mahasabha have all resolved that Hyderabad must be disintegrated. It contains three distinct regional groups—Telugu speaking people, Kannada speaking people and Marathi speaking people. These regional groups must be handed over to the neighbouring States,—Marathi speaking people should be given over to Bombay, Kannada speaking people should go to Mysore and Telugu speaking people should be handed over to Andhra. It is not desirable to keep any longer Hyderabad intact in the Indian map. Owing to changes in political situation both national and international, there is no necessity to keep Hyderabad as it is. And without disintegration of Hyderabad the question of formation of linguistic provinces in the south will not be complete.

The next question is, whether the two Karnatakas theory is a feasible proposition. My friend Sri Devaraj Urs was speaking with eloquence in support of two Karnatakas.

Sri D. DEVARAJA URS (Hunsur).—There can be two; I did not say there must be.

Sri M. RAJASEKHARA MURTHY.—He entirely admits the principles of linguistic provinces, but he says there can be two Karnatakas. If his argument for two Karnatakas is accepted, then for every one crore of population we will have to form a new State.

Sri D. DEVARAJA URS.—Why not?

Sri M. RAJASEKHARA MURTHY.—We will have to split up Uttar Pradesh into six States. That is not possible.

ಶ್ರೀ ಡಿ. ದೇವರಾಜ್ ಅರಸ್.—ಹಿಂದೆ ನಮ್ಮ ದೇಶವನ್ನು ಚಪ್ಪನ್ನಯುವತ್ತಾರು ಭಾಗಗಳನ್ನಾಗಿ ವಿಭಾಗ ಮಾಡಿತ್ತಂತೆ.

Sri M. RAJASEKHARA MURTHY.—Democracy is a very costly experiment. We cannot have one State for every one crore of population. If that argument is conceded, then we have to form 35 States for 36 crores of population, which cannot be done. It is however undesirable to have two Karnatakas *i.e.*, North Karnataka and South Karnataka, similar to North Korea and South Korea, with the river Tungabhadra as the 38th Parallel. I am opposed to that.

The next question is, whether the formation of linguistic States affects the national unity. My friend Sri T. N. Mudlagiri Gowda has raised an objection that the creation of linguistic States would inflame and revive the provincial feeling and destroy the feeling of nationalism and it will lead to balkanisation of India. I entirely disagree with him. It is an illconceived slogan blown into political arena by amateur and young politicians in an atmosphere of despair and dissatisfaction being afraid that they may sink into political insignificance. They are also afraid that they may become neglected commodities in the Karnatak political market. Such a fear is only imaginary and unfounded. It is no doubt true that India is full of various sub-nationalities, having well developed languages of their own, but there is a substratum of common language, common tradition and common cultural ties, which has developed amongst us a feeling of being one people, belonging to one nation. At any rate, nobody likes to break away from the Indian Union. Take for example the federations of other countries. Swiss federation we will take first. In Switzerland there are three distinct regional groups. They are Italians, Germans and French people. Each group occupies a distinct region. That in any way has not affected their national progress. Take for example Great Britain. It contains people speaking three different languages English, Welsh and Scotch. Has it in any way arrested their national progress? Take for example Canada. It represents two distinct regional groups—French and English. Has it in any way hindered the solidarity of the nation? Take for example Russia. So far as the multiplicity of languages and diversity of culture are concerned . . . .

(*Interruption*)

I am speaking of the Indian Union and comparing it with other federations and federal units.

Sri D. DEVARAJA URS.—He quotes Canada where there are two languages English and French. . .

Sri M. RAJASEKHARA MURTHY.—They are occupying distinct regional groups, each State for each language. There is no question of hindering the national solidarity.

Sri G. A. THIMMAPPA GOWDA (Arkalgud).—May I know the population of each group in Canada?

Sri M. RAJASEKHARA MURTHY.—I am not going into datails which is not necessary now. Take for example the Soviet Federation. So far as the multiplicity of languages and diversity of culture are concerned it compares well with India. This has in no way affected Russian Federation. Another thing that I would like to state is that in India there are about 28 States. Out of 28 States, 23 States in Northern India have been formed on linguistic principles. That has in no way hampered the national solidarity. It is only in South India that this question has to be settled immediately. So the argument that it affects national solidarity is a mere illusion and imaginary.

The next question is whether linguistic States would create provincial bitterness and ill-feeling. I submit that the formation of linguistic states will eliminate provincial jealousy. Take Madras. Prior to the separation of Andhra, there existed bitterness and ill-feeling. Now, after the separation, that is solved. Take Bombay. Bombay is a conglomeration of three languages, Gujarathi, Marathi and Kannada. There is bitterness and ill-feeling between the Gujarathis and Marathis and between the Marathis and Kannadigas. By forming distinct region for each language group this kind of rivalries can be eliminated. Therefore, ill-feeling and bitterness can be eliminated by forming linguistic states.

The next question is whether plebiscite should be adopted as a means of ascertaining the wishes of the people for the formation of such provinces. Now there is no necessity. We should not resort to it.

Sri G. A. THIMMAPPA GOWDA.—Why ?

Sri M. RAJASEKHARA MURTHY.—We are not afraid of it. In the general elections in 1951, in the election manifesto, this was one of the issues on which we fought the elections. Take the Andhra case and the composition of Andhra legislature. Prior to the formation of Andhra, the Congress members in the Andhra legislature were very small in number. Since the Government of India did not satisfy their desire for the formation of a separate province, many people did not vote for the Congress. Now after the separation of Andhra, let us look into the election results. We see that the Congress members in the State legislatures are in a large majority. This shows that the question of formation of linguistic States has got the support of the people. Take for example the bye-election in Bombay Karnataka. This bye-election was fought on linguistic basis. Those people who opposed the formation of linguistic provinces have failed in the bye-election.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆ ಪ್ರಯೋಗ ಇಲ್ಲೂ ನಡೆಯಲಿ. ಅದು ನಡೆದ ಮೇಲೆ ನೋಡೋಣ.

Sri M. RAJASEKHARA MURTHY.—The formation of linguistic province was one of the issues in the election manifesto itself. I was speaking of plebiscite, particularly plebiscite should not be resorted to in a country which contains people who are illiterate, because they may not be in a position to exercise their discretion in a proper manner. Therefore, the argument that we should resort . . . .

Sri D. DEVARAJA URS.—It is by the votes of these illiterates, as he puts it, he has been elected. Now he says they are illiterates and they should not be given the voting power.

Sri M. RAJASEKHARA MURTHY.—It equally applies to my Hon'ble friend also. I only said that plebiscite should not be resorted to on important matters which can only be dicided by statesmen, political reformers and constitutional pundits.

Therefore, Sir, I beg to submit that to argue in the Legislature that we should resort to plebiscite on a matter of this kind is nothing but a mid-summer madness. Sri Devaraja Urs also suggested that we must draw lines as in the case of America. He has not understood the political and linguistic future of America. The conditions in America are different from that of India. America is a unilingual State. It has got one language. India is a multilingual nation. When there are so many languages in India, it is but natural that each linguistic group must be given permission to have a separate administrative unit in order to have its own Government to suit its own desires and tastes.

My friend Sri Shivananje Gowda said that the demand for linguistic States is almost similar to that of the demand for Pakistan. I entirely disagree with him. The demand for Pakistan was a demand for a sovereign independent State, whereas the demand for linguistic States is only the demand of a people for the formation of a State on linguistic principle within the Indian union.

We shall next consider the advantages. We are going to get two hundred miles of coastal line. This will be

(SRI M. RAJASEKHARA MURTHY.)

helpful to develop the future Karnataka State. There are four harbours—Dharwar, Mulpe, Batkal and Mangalore—the Government of India appointed a committee under the chairmanship of Sri Kasturbhai Lallu Bhai, who have submitted a report for the development of these harbours. These harbours are very important from all points of view. So many wars have been fought by Russia during the Reign of Peter the Great and Catherine the Great just to have an access to the Black Sea and an outlet into the Mediterranean. America and England emerged as first rate naval powers because of their coast line. Sydney has become powerful, because it is situated on the coastal line. Madras and Bombay especially get eight and sixteen crores of rupees of revenue because of their situation near the coast line. When we are getting a coast lines for nothing at all, why should we not welcome these people when they come in with a huge coastal line ?

Let us consider industrial possibilities of future Karnataka. May I submit, Sir, that Karnataka has got a vast scope for the development of our industries ? Karnataka is the richest, the luckiest danghter of mother nature. She has been endowed with rich natural resources. The mineral belt stretching from South Kanara to Assam cuts the Karnataka at Bijapur and other Bombay Karnataka places. We can develop both large scale industries, like cement industry, iron and steel industry and other small scale industries like coir industry, fishing industry and so on. In course of time Karnataka is going to be the Petersburgh of India. Coming to Food production, there are a good number of projects . . .

MR. SPEAKER.—The Hon'ble Member may leave some points to other Hon'ble Members.

SRI M. RAJASEKHARA MURTHY.—I will come to the financial aspect of the question. It has been argued by the members of the Committee that these various Karnataka districts that are coming in are loaded heavily with debts. They have taken 1952-53 as the basic year for the consideration of the financial aspect. That was the first mistake that they have committed. From 1952-1957, it is a period of planning and during that period, the tempo of expenditure will be high and revenue will be normal. There will not be much difference in revenue. They should have taken three years' average as was done by committees appointed in previous years. If you take into consideration the other States of India, there is now no State having a surplus budget. Mysore is having a deficit to the tune of four crores for one crore of population. Non-Mysore Karnataka territories have also one crore of deficit for one crore of population. The financial position of Non-Mysore Karnataka is therefore much better than that of Mysore. So, for these various reasons, I submit that Karnataka State is going to be a viable State and it must be formed and the desires of the people must be fulfilled immediately.

*ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮಾನ್ಯ ಸಭಾಪತಿಗಳೇ, ಪ್ರಾಂತ್ಯ ಪುನರ್ವಿಂಗಡನಾ ಸಮಸ್ಯೆಯು ಬಹಳ ಕಷ್ಟವನ್ನು ನಮಗೆ ತಂದಿರುವುದಲ್ಲದೆ, ಜಟಿಲವಾಗಿಯೂ ಇದೆ. ಮುಂದೆ ದೇಶದಲ್ಲಿ ಇದು ಜಾರಿಗೆ ಬರುವಾಗ ಎಷ್ಟು ಪರಿಣಾಮ ಉಂಟಾಗಬಹುದು ಎಂಬುದಕ್ಕೆ ಸಾಕ್ಷೀಭೂತವಾಗಿ ಈ ಅಸೆಂಬ್ಲಿಯಲ್ಲಿ ಆಗತಕ್ಕ ಗೊಂದಲವೇ ಸಾಕಾಗಿದೆ. ಈ ಅಸೆಂಬ್ಲಿಯಲ್ಲಿ ನನ್ನ ಆಪ್ತರು ಎಷ್ಟೋ ಜನ ಇದ್ದಾರೆ.

ಶ್ರೀ ಹೆಚ್. ಎಂ. ಚಂದ್ರಶೇಖರಯ್ಯ (ಕಡೂರು).—ಮದುವೆ ಆಗುವ ಮೊದಲು ಗೊಂದಲಗಳಾಗುತ್ತವೆ. ಆಮೇಲೆ ಇರುವುದಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮದುವೆ ಆದ ಮೇಲೂ ಗಲಾಟೆಯಾಗುತ್ತದೆ. ಶ್ರೀ ಸೋಲೂರು ಸಿದ್ದಪ್ಪನವರು ನನಗೆ ಬಹಳ ಆಪ್ತರು, ನನ್ನ ಹಿತವನ್ನು ಕೋರತಕ್ಕಂಥವರು. ಆದರೆ, ನನಗೂ ಅವರಿಗೂ ಈ ವಿಷಯದಲ್ಲಿ ಹೊಂದಾಣಿಕೆ ಆಗುತ್ತಿಲ್ಲ. ಹೀಗೆ ವಿದ್ಯಾವಂತರಲ್ಲೇ—ಇಷ್ಟರಮಟ್ಟಿಗೆ ಘರ್ಷಣೆ ನಡೆಯುವಾಗ, ಇದು ಹಳ್ಳಿಯವರ ಮಟ್ಟದಲ್ಲಿ ಚರ್ಚೆಯಾಗುವ ಕಾಲದಲ್ಲಿ ಇನ್ನೆಷ್ಟು ಕ್ಲಿಷ್ಟ ಸಮಸ್ಯೆಯಾಗದು ಎಂದು ನನಗೆನ್ನಿಸುತ್ತದೆ. ಇಷ್ಟರವರೆಗ್ಯೆ ನಾನು ಸ್ವಲ್ಪ ಹಗುರವಾಗಿ ಮಾತನಾಡಿದೆ. Serious ಆಗಿ ಮಾತನಾಡಬೇಕಾದರೆ, ಈ ಸಮಸ್ಯೆಯು ನಾವು ಯೋಚಿಸುವಷ್ಟು ಹಗುರವಾದುದಲ್ಲ. ಇದು ಇಂಡಿಯಾ ದೇಶದ ಮಹಾನಾಯಕರನ್ನೂ, ಆಡಳಿತಗಾರರನ್ನೂ, ತಜ್ಞರನ್ನೂ, ಬಹಳ ಆಲೋಚನೆಗೆ ಈಡುಮಾಡಿದೆ. ಈ ಪ್ರಶ್ನೆ ಅವರ ಮುಂದೆ ಇವೊತ್ತು ಬಂದಿದ್ದಲ್ಲ; ಹತ್ತಾರು ವರ್ಷಗಳಿಂದಲೂ ಅವರ ಮುಂದಿದೆ. ಮುಖ್ಯ ಮಂತ್ರಿಗಳು ಮೊನ್ನೆ ತಾನೆ ಹೇಳಿದರು, ಯಾವ ಯಾವ ಪ್ರಶ್ನೆಗಳು ಬಂದರೂ ಅವುಗಳು ಬಂದಹಾಗೆ ಚಟ್‌ಪಟ್ ತೀರ್ಮಾನ ತೆಗೆದುಕೊಳ್ಳುತ್ತಿದ್ದೇವೋ ಆದರೆ ಈ ಪ್ರಶ್ನೆ ಬಂದಾಗ ಅನೇಕ ಕಾರಣಗಳಿಂದ ಇದು ವಿಪರೀತ ತಲೆನೋವು ಉಂಟುಮಾಡಿದೆ.

*Asterisk indicates that the remarks or speeches have not been revised by the Member concerned.

ಇವೊತ್ತಿನವರೆಗೂ ವೈಯಕ್ತಿಕ ಅಭಿಪ್ರಾಯವೆಂದು ಒಂದುಸಾರಿ ಹೇಳುವುದು, ಇನ್ನೊಂದುಸಾರಿ, composite State ಬೇಕೆಂದೂ. . . .

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಅದೆಲ್ಲಾ ಶ್ರೀ ತಿಮ್ಮಪ್ಪಗೌಡರಿಂದ ಉಂಟಾಗುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇನ್ನೊಂದುಕಡೆ ಶ್ರೀ ಚಂದ್ರಶೇಖರಯ್ಯನವರು ಇರಲೇಬೇಕು. ಹಿಂದೆ Representative Assembly ಯಲ್ಲಿ 1949ನೇ ಇಸವಿಯಲ್ಲಿ ಕರ್ಣಾಟಕ ಏಕೀಕರಣವಾಗಕೂಡದೆಂದು ವಿರೋಧಿಸಿದ್ದರು. ನಮ್ಮ ದೇಶದಲ್ಲಿ ಅನೇಕ ನಾಯಕರು ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಯೋಚನೆ ಮಾಡುತ್ತಿದ್ದಾರೆ. ಅದನ್ನು ಇನ್ನೂ ಬಿಡಿಸುವುದಕ್ಕಾಗಲಿಲ್ಲ. ನಾನು ಆಗಲೇ ಹೇಳಿದಹಾಗೆ, ಇಂಡಿಯಾ ದೇಶದಲ್ಲಿ ನಮ್ಮ ನಾಯಕರು ಎದುರಿಸಬೇಕಾಗಿರತಕ್ಕ ಅನೇಕ ಪ್ರಾಮುಖ್ಯ ಸಮಸ್ಯೆಗಳಲ್ಲಿ ಇದು ಮುಖ್ಯವಾದುದು. ಇದನ್ನು ಬರೀ ಆರ್ಥಿಕ ದೃಷ್ಟಿಯಿಂದ ನೋಡುವುದಕ್ಕಾಗುವುದಿಲ್ಲ. ಕರ್ಣಾಟಕ ಪ್ರಾಂತ್ಯದಲ್ಲಿ ಖನಿಜ ಸಂಪತ್ತು ಇದೆಯೇ, ರಸ್ತೆಗಳು ಹೆಚ್ಚಾಗಿವೆಯೇ, ಸ್ಕೂಲುಗಳು ಹೆಚ್ಚಾಗಿವೆಯೇ ಎಂಬುದು ಮುಖ್ಯವಾದರೂ ಕೂಡ, ಅವನ್ನು ಪ್ರಾಮುಖ್ಯವೆಂದು ತಿಳಿಯಬೇಕಾಗಿಲ್ಲ, ಅವಕ್ಕಿಂತಲೂ ಮುಖ್ಯವಾಗಿ, ನಾವು ರಾಜಕೀಯ ದೃಷ್ಟಿಯಿಂದಲೂ ಈ ಸಮಸ್ಯೆಯನ್ನು ನೋಡಬೇಕಾಗಿದೆ.

1-30 P.M.

ಇದು ಬಹಳ ಸುಲಭವಾಗಿ ಆಗುತ್ತದೆ, ಈ ವರ್ಷವೇ ಪ್ರಾಂತ್ಯ ವಿಂಗಡಣೆಯನ್ನು ಭಾಷೆಯ ಆಧಾರದಮೇಲಾಗಲಿ ಅಥವಾ ಇನ್ನಾವುದಾದರೂ ಆಧಾರಗಳನ್ನಿಟ್ಟುಕೊಂಡಾಗಲಿ ಮಾಡಬಹುದೆಂದು ನಮ್ಮ ಸ್ನೇಹಿತರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಿದರೆ, ನನ್ನ ಅಭಿಪ್ರಾಯದಲ್ಲಿ ಈ ಸಮಸ್ಯೆ ಅಷ್ಟೊಂದು ಸುಲಭವಾಗಿ ಕಾಣುವುದಿಲ್ಲ. ಅಂದಮಾತ್ರಕ್ಕೆ ಪ್ರಾಂತ್ಯ ವಿಂಗಡಣೆಯ ವಿಚಾರದಲ್ಲಿ ಈಗಿರುವ ರೀತಿಯಲ್ಲೇ ಪ್ರಾಂತ್ಯಗಳಿರಬೇಕು, ನಮ್ಮ ಮಾನ್ಯ ಸ್ನೇಹಿತರಾದ ಪಟ್ಟಾಭಿರಾಮರ್ಸರವರು ತಿಳಿಸಿದ ಐದಾರು ಕೋಟಿ ಪ್ರಜಾ ಸಂಖ್ಯೆಗಳುಳ್ಳ ದೊಡ್ಡ ಪ್ರಾಂತ್ಯಗಳಾದ ಯು. ಪಿ., ಬೀಹಾರ್ ಮುಂತಾದುವುಗಳು ಒಂದುಕಡೆ, ಕೆಲವೇ ಪ್ರಜೆಗಳನ್ನುಳ್ಳ ಕೊಡಗಿನಂಥ ಸಣ್ಣ ಪ್ರಾಂತ್ಯಗಳು ಇನ್ನೊಂದು ಕಡೆ ಈ ಪ್ರಜಾಪ್ರಭುತ್ವದಲ್ಲೂ ಇರಬೇಕೆಂಬುದನ್ನು ನಾನು ಒಪ್ಪುವುದಿಲ್ಲ. ಆದರೆ ನಾನು ಮೊದಲೇ ಹೇಳಿದಹಾಗೆ, ಪ್ರಾಂತ್ಯವಿಂಗಡಣೆಯ ವಿಚಾರದಲ್ಲಿ ಅನೇಕ ಎಡರು ತೊಡರುಗಳಿರುವುದರಿಂದ ಮತ್ತು ಅವುಗಳನ್ನು ಬಿಡಿಸಬೇಕಾದರೆ ಅನೇಕ ಕಷ್ಟಗಳನ್ನು ಎದುರಿಸಬೇಕಾಗಿ ಬರುವುದರಿಂದ, ಈ ಪ್ರಾಂತ್ಯ ವಿಂಗಡಣೆಯನ್ನು ಇನ್ನು 10-15 ವರ್ಷಗಳಕಾಲ ಬಿಟ್ಟು ಆಮೇಲೆ ಇಂಡಿಯಾ ಸರ್ಕಾರದವರಾಗಲಿ ಅಥವಾ ನಮ್ಮ ನಾಯಕರುಗಳೇ ಆಗಲಿ ಪ್ರಯತ್ನಪಟ್ಟರೆ ಒಳ್ಳೆಯದಾಗುತ್ತದೆ. ಕಾರಣಾಂತರದಿಂದ ಈಗ ನಾವು ಹೇಗೆ ಕರ್ಣಾಟಕ ಪ್ರಾಂತ್ಯವಾಗಬೇಕೆಂದು ಒಂದು ಉದ್ವೇಗದಿಂದ ಪ್ರಯತ್ನಪಡುತ್ತಿದ್ದೇವೋ ಹಾಗೆಯೇ ಆಂಧ್ರ ಪ್ರಾಂತ್ಯದವರೂ ಒಂದು ಸತತವಾದ ಚಳವಳಿ ಹೂಡಿದ್ದರಿಂದ ಕೇಂದ್ರ ಸರ್ಕಾರದವರಿಗಾಗಲಿ, ನಮ್ಮ ನಾಯಕರುಗಳಿಗಾಗಲಿ ಇಷ್ಟವಿಲ್ಲದಿದ್ದರೂ ಪ್ರಜಾಭಿಪ್ರಾಯಕ್ಕೊಳಗಾಗಿ ಆಂಧ್ರ ಪ್ರಾಂತ್ಯವನ್ನು ಮಾಡಬೇಕಾಯಿತು. ನನ್ನ ದೃಷ್ಟಿಯಲ್ಲಿ ಇದು ಮೊದಲನೆಯ ತಪ್ಪು ಹೆಜ್ಜೆ ಎಂದು ತಿಳಿದುಕೊಂಡಿದ್ದೇನೆ. ನಮ್ಮ ಸ್ನೇಹಿತರು ನನ್ನ ವಿಚಾರದಲ್ಲಿ ಏನೇ ತಿಳಿದುಕೊಳ್ಳಲಿ, ಇದು ಎಷ್ಟು ಸುಲಭವೆಂದು ನಾವು ತಿಳಿದುಕೊಂಡಿದ್ದೇವೋ ಅಷ್ಟು ಸುಲಭವಲ್ಲ; ಮುಂದೆ ಈ ಪುನರ್ವಿಂಗಡಣೆ ಮಾಡಿದ್ದಕ್ಕೆ ಉದ್ವೇಗದಲ್ಲಿ ಹೋದೆವು, ಆತುರಪಟ್ಟೆವು ಎಂದು ಪಶ್ಚಾತ್ತಾಪಪಡಬೇಕಾದ ಸಮಯ ಬಂದೀತೆಂದು ಹೇಳಬಯಸುತ್ತೇನೆ. ಈಗ ನಮ್ಮ ದೇಶ ಎದುರಿಸಬೇಕಾದ ಅನೇಕ ಸಮಸ್ಯೆಗಳನ್ನು ನಮ್ಮ ನಾಯಕರು ಬಹಳ ದಕ್ಷತೆಯಿಂದ ಬಿಡಿಸುತ್ತಿದ್ದಾರೆ. ದೇಶದ ಪ್ರಗತಿ ಕ್ರಮವಾಗಿ ಮುಂದೆ ಸಾಗುತ್ತಿದೆ. ಇನ್ನೂ ಅನೇಕ ಕ್ಲಿಷ್ಟವಾದ ಸಮಸ್ಯೆಗಳನ್ನು ನಾವು ಎದುರಿಸಬೇಕಾಗಿದೆ. ನಮ್ಮ ನಾಯಕರ ಆಲೋಚನೆ ಇವುಗಳ ಮೇಲಿದೆ. ಕಾಶ್ಮೀರದ ಸಮಸ್ಯೆ ಇನ್ನೂ ಬಿಡಿಸಲು ಸಾಧ್ಯವಾಗಿಲ್ಲ. ನಿರಾಶ್ರಿತರ ಸಮಸ್ಯೆಯೂ ಹಾಗೆಯೇ ಬಗೆಹರಿಯದೆ ನಿಂತಿದೆ. ಮೊನ್ನೆತಾನೆ ಅತ್ತಕಡೆಯಿಂದ ಸಾವಿರಗಟ್ಟಲೆ ನಿರಾಶ್ರಿತರು ನುಗ್ಗುತ್ತಿದ್ದಾರೆಂದು ಕೇಳಿಬರುತ್ತಿದೆ. ಆಹಾರದ ಪ್ರಶ್ನೆ ಬಗೆಹರಿದಿದೆಯೆಂದು ಹೇಳುತ್ತೇವೆ. ಆದರೆ ಶ್ರೀನಿವಾಸಯ್ಯಂಗಾರ್ಯರು ಮೊನ್ನೆ ಹೇಳಿದಹಾಗೆ, self-sufficiency ಬಂದಿಲ್ಲ. ಕಂಟ್ರೋಲನ್ನು ತೆಗೆದದ್ದರಿಂದ ಬಚ್ಚಿಟ್ಟಿದ್ದ ದವಸ ಹೊರಗೆ ಬಂದಿದೆ ಅಷ್ಟೆ. ಇನ್ನೂ ಸಾಕಾದಷ್ಟು ಬೆಳೆ ಮಾಡುತ್ತಿಲ್ಲವೆಂದೇ ಹೇಳಬಹುದಾಗಿದೆ.

ಈ ರೀತಿ ನಮ್ಮ ದೇಶದ ಮುಂದೆ ಅನೇಕ ಸಮಸ್ಯೆಗಳು ಇವೆ. ಅನೇಕ ವಿಧದಲ್ಲಿ ನಮ್ಮ ದೇಶವನ್ನು ಪ್ರಗತಿಗೆ ತರಬೇಕೆಂದು ಹೇಳಿ, ಐಶ್ವರ್ಯಯುತವಾದ ರಾಷ್ಟ್ರವನ್ನಾಗಿ ಮಾಡಬೇಕೆಂದು ಹೇಳಿ, ಜವಹರಲಾಲ್‌ರವರು ದೃಢ ಪ್ರತಿಜ್ಞೆಯಿಂದ ಹೆಜ್ಜೆಯಿಟ್ಟಿದ್ದಾರೆ. ನಮ್ಮ ದೇಶದ ಪ್ರತಿಯೊಂದು ಸಂಸ್ಥಾನದವರೂ, ಪ್ರತಿಯೊಂದು ಭಾಗದ ಜನರೂ ನಮ್ಮ ದೇಶವನ್ನು ಅಭಿವೃದ್ಧಿಪಡಿಸುವುದಕ್ಕೆ ಒಂದೇ ಸಮನೆ ದುಡಿಯಬೇಕಾದ ಕಾಲವಿದು. ಆದರೆ ಇಂದು ಎಲ್ಲ ಕಡೆಯಲ್ಲೂ ಪ್ರಾಂತೀಯ ಭಾವನೆ ಬೆಳೆದುಹೋಗಿದೆ. ಮಹಾರಾಷ್ಟ್ರದವರು ಮಹಾರಾಷ್ಟ್ರದ ದೃಷ್ಟಿಯಿಂದಲೂ, ಬಂಗಾಳಿಗಳು ಬಂಗಾಳದ ದೃಷ್ಟಿಯಿಂದಲೂ, ಬಿಹಾರಿಗಳು ಬಿಹಾರದ ದೃಷ್ಟಿಯಿಂದಲೂ ನಮ್ಮ ಸಮಸ್ಯೆಗಳನ್ನು ನೋಡುತ್ತಿದ್ದಾರೆಯೇ ಹೊರತು ಇಡೀ ದೇಶದ ದೃಷ್ಟಿಯಿಂದ ನೋಡುತ್ತಿಲ್ಲ. ನಾನು ಹಿಂದೆ ಪುಣೆಯಲ್ಲಿದ್ದಾಗ ಭಾಷಾ ವ್ಯಾಮೋಹ ಎಷ್ಟರಮಟ್ಟಿಗಿತ್ತೆಂಬುದರ ಅನುಭವ ನನಗುಂಟಾಗಿದೆ. ಆ ಮಹಾರಾಷ್ಟ್ರದ ಜನರು ಇತರ ಭಾಷೆಗಳ ಜನಗಳನ್ನು ಎಷ್ಟು ನಿಕೃಷ್ಟವಾಗಿ ಕಾಣುತ್ತಿದ್ದರು ! ತಾವು ಅಣ್ಣ ತಮ್ಮಂದಿರೆಂಬ ಭಾವನೆಯನ್ನೇ ಮರೆತು ಅನ್ಯ ಭಾಷೆಗಳನ್ನು ತುಚ್ಛವಾಗಿ ಕಾಣುತ್ತಿದ್ದರು. ಹೀಗಿರುವಾಗ ಇನ್ನು ಭಾಷೆಗಳಮೇಲೆ ಪ್ರಾಂತ್ಯ ವಿಂಗಡಣೆಯನ್ನೂ ಮಾಡಿಬಿಟ್ಟರೆ ಅದೇ ಭಾವನೆಯನ್ನು ಉಲ್ಬಣಿಸಿಕೊಂಡು ಹೋದಂತಾಗುತ್ತದೆ. ಮುಂದೆ ಇದೊಂದು ಆಂದೋಳನಕ್ಕೆ ಕಾರಣವಾಗುತ್ತದೆಂದು ಯಾರೇ ಆದರೂ ಊಹೆ ಮಾಡಬಹುದಾಗಿದೆ. ಇದರಿಂದಾಗಿ ನಾವು ಪಂಚವಾರ್ಷಿಕ ಯೋಜನೆಯನ್ನು ಹಾಕಿಕೊಂಡು ನಮ್ಮ ದೇಶವನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮುಂದುವರಿಸಬೇಕೆಂದು ಯಾವ ಆಸೆಯನ್ನಿಟ್ಟುಕೊಂಡಿದ್ದೇವೋ ಅದನ್ನು ಸಾಧಿಸುವುದರ ಕಡೆಗೆ ನಮ್ಮ ಗಮನ ಹೋಗದೆ ಬೇರೆ ಸಣ್ಣ ಘಟ್ಟಕಾರಣಗಳ ಕಡೆ ನಮ್ಮ ದೃಷ್ಟಿಯನ್ನು ತಿರುಗಿಸಿದಂತಾಗುತ್ತದೆ. ಈಗಿನ ಸಂದರ್ಭದಲ್ಲಿ ಅಂಥದಕ್ಕೆ ಅವಕಾಶ ಕೊಡುವುದು ಉಚಿತವಲ್ಲ. ಪ್ರಾಂತಗಳ

(ಶ್ರೀ ಜಿ. ಎ. ತಿಮ್ಮಪ್ಪಗೌಡ.)

ವಿಂಗಡಣೆಯ ಪ್ರಶ್ನೆ ಬಂತೆಂದರೆ ಜನಗಳ ಗಮನ ಬೇರೆಕಡೆಗೆ ತಿರುಗಿಯೇ ತಿರುಗುತ್ತದೆ. ಆಡಳಿತದಲ್ಲಿ ಅನೇಕ ಎಡರು ತೊಡರುಗಳು ಬಂದೇಬರುತ್ತವೆ. ಈ ಅಂಶವನ್ನು ಈ ವರದಿಯಲ್ಲಿಯೂ ತಿಳಿಸಿದ್ದಾರೆ. ಧಾರ್ ಕಮಿಟಿಯವರೂ ಇದನ್ನು ವಿಮರ್ಶೆ ಮಾಡಿದ್ದಾರೆ. ಆರ್ಥಿಕ ಮತ್ತು ಸಮಾಜಿಕ ಸಮಸ್ಯೆಗಳಿಗಿಂತ ಆಡಳಿತ ಸಮಸ್ಯೆ ಬಹಳಮಟ್ಟಿಗಿರುತ್ತದೆ. ಅದನ್ನು ಸರಿಪಡಿಸಬೇಕಾದರೆ ಎರಡು ಮೂರು ವರ್ಷಗಳು ಸರ್ಕಾರದ ಗಮನವೆಲ್ಲಾ ಅತ್ತಕಡೆ ಇರಬೇಕಾಗುತ್ತದೆ. ಹೀಗಾಗಿ ಯಾವರೀತಿಯ ಸ್ಫೂರ್ತಿಯಿಂದ ತದೇಕ ದೃಷ್ಟಿಯಿಂದ ದೇಶದ ಕೆಲಸ ಕಾರ್ಯಗಳನ್ನು ನಡೆಸಬೇಕೆಂದು ಕಾಂಕ್ಷೆಯುಳ್ಳವರಾಗಿದ್ದೇವೋ ಅದಕ್ಕೆ ತಣ್ಣೀರೆರಚಿದಂತಾಗುತ್ತದೆ. ನಮ್ಮ ದೃಷ್ಟಿಯೆಲ್ಲಾ ಬೇರೆ ಕಡೆಗೆ ಹೋಗಿರುತ್ತದೆ.

ಆದ್ದರಿಂದ ಈಗ ಈ ಪ್ರಾಂತ್ಯ ವಿಂಗಡಣಾ ಸಮಸ್ಯೆಗೆ ಕೈಹಾಕದಿರುವುದು ಬಹಳ ಯೋಗ್ಯವಾದುದು. ಇದನ್ನು ಹೇಳಿದರೆ ಜವಹರಲಾಲ್ ನೆಹರೂರವರ ಮಾತನ್ನೆಲ್ಲಾ ಹೇಳಿದರು ಎಂದು ಆಡಿಕೊಳ್ಳಬಹುದು. ಆದರೆ ಅವರು ಮಾಡುತ್ತಿರುವ ಭಾಷಣದ ಧಾಟಿಯನ್ನೂ ಪಾರ್ಲಿಮೆಂಟಿನಲ್ಲಿ ನಮ್ಮ ನಾಯಕರುಗಳು ಮಾಡುತ್ತಿರುವ ಭಾಷಣವನ್ನೂ ನೋಡಿದರೆ, ಯಾರೂಕೂಡ ಪ್ರಾಂತ್ಯ ವಿಂಗಡಣೆಯ ಸಮಸ್ಯೆಯನ್ನು ಸದ್ಯದಲ್ಲೇ ಆತುರವಾಗಿ ಬಿಡಿಸುವುದಕ್ಕೆ ಇಷ್ಟಪಡುತ್ತಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲದೆ ಜವಾಹಿರಲಾಲ್‌ರವರೂ ಕೂಡ, "ಇಷ್ಟೆಲ್ಲಾ ಎಡರು ತೊಡರುಗಳಿದ್ದರೂ ಸಹ ದೇಶಕ್ಕೆ ತೊಂದರೆಗಳುಂಟಾಗುತ್ತವೆಯೆಂದು ತಿಳಿದಿದ್ದರೂ ಕೂಡ ಪ್ರಜಾಭಿಪ್ರಾಯ ಹೆಚ್ಚಾಗಿ ಬಂದರೆ, ಪ್ರಜಾಭಿಪ್ರಾಯದ ಒತ್ತಡ ಬಂದರೆ ಪ್ರಜಾಭಿಪ್ರಾಯಕ್ಕನುಸಾರವಾಗಿ ಹೋಗಬೇಕಾಗುತ್ತದೆ" ಎಂದು ಹೇಳುವುದನ್ನು ನೋಡಿದರೆ ಅವರ ಮನಸ್ಸಿನ ಧೋರಣೆ ಅರ್ಥವಾಗುತ್ತದೆ. ಆದ್ದರಿಂದ ಸರಿಯಾದ ರೀತಿಯಲ್ಲಿ ಪ್ರಜಾಭಿಪ್ರಾಯ ರೂಢಿಸಬೇಕಾದದ್ದು ನಮ್ಮ ಕರ್ತವ್ಯ. ಆಗ 200 ವರ್ಷಗಳಿಂದ ನಾವು ಹೀಗೆಯೇ ವಾಸಮಾಡಿಕೊಂಡು ಬಂದಿದ್ದೇವೆ. ಹೀಗೆಯೇ ಇನ್ನೂ 10-15 ವರ್ಷಗಳು ಇಂಡಿಯಾ ದೇಶದ ಹಿತದೃಷ್ಟಿಯಿಂದ ಮುಂದಿನ ತೊಂದರೆಗಳ ದೃಷ್ಟಿಯಿಂದ ಸುಮ್ಮನಿರುವುದರಿಂದ ಏನೂ ಹೆಚ್ಚಿನ ನಷ್ಟವಾಗುವುದಿಲ್ಲ! ನಮ್ಮ ಮಿಕ್ಕೆಲ್ಲ ಸಮಸ್ಯೆಗಳೂ ತೀರ್ಮಾನವಾದಮೇಲೆ ಈ ಪ್ರಾಂತ್ಯ ವಿಂಗಡಣೆಯ ಪ್ರಶ್ನೆಗೆ ಕೈಹಾಕುವುದು ಬಹಳ ಯೋಗ್ಯವಾದ ರೀತಿಯೆಂದು ನಾನು ತಿಳಿಸಬಯಸುತ್ತೇನೆ. ಕೆಲವು ಕಾಲದಹಿಂದೆ ಮೈಸೂರು ವಿಸ್ತರಣೆಯಾಗಿದ್ದು ನಿಜ; ವಿಸ್ತರಣೆಯೂ ಆಗಿದೆ, ಕಡಮೆಯೂ ಆಗಿದೆ. ಅದಷ್ಟು ಪ್ರಾಮುಖ್ಯವಲ್ಲ. ಈಗಿರುವ ಮೈಸೂರಿನಲ್ಲಿ 200 ವರ್ಷಗಳಿಂದಲೂ ಇದ್ದೇವೆ. ಏನೋ ಒಂದುರೀತಿಯ ಆಡಳಿತಕ್ಕೆ ಒಗ್ಗಿದ್ದೇವೆ. ತಮಿಳರಾಗಲಿ, ತೆಲುಗರಾಗಲಿ ಎಲ್ಲರೂ ಸ್ನೇಹಮಯವಾದ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದೇವೆ.' ಇನ್ನು 10-15 ವರ್ಷ ನಿಧಾನ ಮಾಡಿದರೆ ಪ್ರಪಂಚವೇನೂ ಆಗುವುದಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಅವರೂ ಒಪ್ಪುತ್ತಾರೆ; ಸ್ವಲ್ಪ ನಿಧಾನಮಾಡಿ ಎಂದು ಹೇಳುತ್ತಾರೆ ಅಷ್ಟೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹೌದು; ಪ್ರಜಾಪ್ರಭುತ್ವದಲ್ಲಿ ವಿಪರೀತ ದೊಡ್ಡಪ್ರಾಂತ್ಯ ಒಂದುಕಡೆ, ವಿಪರೀತ ಸಣ್ಣಪ್ರಾಂತ್ಯ ಒಂದು ಕಡೆ ಇರುವುದು ಒಳ್ಳೆಯದಲ್ಲ. ನನ್ನ ವಾದವೇನೆಂದರೆ, ಇದು ಸಮಯೋಚಿತವಲ್ಲ ಎಂದಷ್ಟೆ. ಇನ್ನೂ ಸ್ವಾತಂತ್ರ್ಯ ಬಂದು 7 ವರ್ಷಗಳಾಗಿರುವುದರಿಂದ ಇಂಥ ಕಠಿಣವಾದ ಸಮಸ್ಯೆಯನ್ನು ಸ್ವಲ್ಪ ಕಾಲಬಿಟ್ಟು ತೆಗೆದುಕೊಳ್ಳುವುದು ಸೂಕ್ತವೆಂದು ತಿಳಿಸುತ್ತೇನೆ.

ಆವೇಳೆ, ಸಂಖ್ಯೆಯ ವಿಚಾರದಲ್ಲಿ ಒಂದೊಂದು ಪ್ರಾಂತದಲ್ಲಿ ಎಷ್ಟು ಜನ ಇರಬೇಕೆಂಬ ಪ್ರಶ್ನೆ ಬಂತು. ಅದುಮುಂದೆ ಯೋಚನೆ ಮಾಡಬೇಕಾದ ಪ್ರಶ್ನೆ. ಇವೊತ್ತಿನ ದಿವಸವೇ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದರೂ ಕೂಡ, ನಾವೆಲ್ಲಾ ನೋಡಿರುವ ಹಾಗೆ ಅಮೆರಿಕಾ ದೇಶದಲ್ಲಿ 35 ಲಕ್ಷ ಜನಗಳಿಗೆ ಮೇಲ್ಪಟ್ಟು ಯಾವ ಯೂನಿಟ್ಟಿನಲ್ಲೂ ಇಲ್ಲವೆಂದು ಹೇಳಬಹುದು. ಅದೇರೀತಿ ರಷ್ಯಾದಲ್ಲಿಯೂ 30 ಲಕ್ಷದಿಂದ ಒಂದು ಕೋಟಿಯವರೆಗೆ ಇದೆ; ಕೆನಡಾದಲ್ಲಿ ನೋಡಿದರೆ ಇನ್ನೂ ಕಡಿಮೆಯಿದೆ. ಹಾಗೆಯೇ ಯಾವ ಪ್ರಾಂತ್ಯವನ್ನೇ ನೋಡಲಿ, ಸಿಲೋನ್, ನಾರ್ವೆ, ಸ್ವೀಡನ್, ಸ್ವಿಟ್ಜರ್‌ಲೆಂಡ್ ಎಲ್ಲಿಯೂ ಹೆಚ್ಚಾಗಿಲ್ಲ. ನಮ್ಮ ದೇಶದಲ್ಲಾದರೋ ಅಸ್ಸಾಂನಲ್ಲಿ ಒಂದುಕೋಟಿ, ಒರಿಸ್ಸಾದಲ್ಲಿ 87 ಲಕ್ಷ, ಸೌರಾಷ್ಟ್ರದಲ್ಲಿ 35 ಲಕ್ಷ, ಮಧ್ಯಭಾರತ 7·1 ಕೋಟಿ, ಪೆಪ್ಸು 42 ಲಕ್ಷ—ಹೀಗಿದೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಅದನ್ನು ಸರಿಪಡಿಸಬೇಕೆಂದೇ ಈಗ ಇರುವುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದನ್ನೇಕೆ ಹೇಳುತ್ತಿದ್ದೇನೆಂದರೆ—ಮೈಸೂರಿನ ವಿಷಯದಲ್ಲಿ ಮಾತ್ರ ಅನುಕೂಲಸಿಂಧುವಾಗಿ ಹೇಳುತ್ತಿಲ್ಲ—ನಮ್ಮಲ್ಲಿ ಅನೇಕ ದೊಡ್ಡ ದೊಡ್ಡ ಪ್ರಾಂತ್ಯಗಳಲ್ಲಿ top heavy ಯಾಗಿರುವ ಆಡಳಿತವನ್ನು ಸರಿಮಾಡಬೇಕು ಎಂಬುದು. ಪ್ರಜಾಪ್ರಭುತ್ವ ಸರಿಯಾಗಿ ನಡೆಯಬೇಕಾದರೆ ಪ್ರಾಂತ್ಯವು unwieldy ಯಾಗಿದ್ದರೆ ಆಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಜನರು ಸರ್ಕಾರದೊಡನೆ ನೇರವಾಗಿ ಸಂಪರ್ಕವಿಟ್ಟುಕೊಂಡು ಅದರ ಜೊತೆಗೆ ಕೆಲಸ ಮಾಡಿದಹೊರತು ಇಲ್ಲದಿದ್ದರೆ ಯಶಸ್ವಿಯಾಗಿ ನಡೆಯುವುದಿಲ್ಲ. ಸಾಮಾನ್ಯವಾಗಿ ನಮಗೆ ತಿಳಿದಿರುವ ಹಾಗೆ ಈ ಅಸೆಂಬ್ಲಿಯಲ್ಲಿ 125 ಜನರಿಗಿಂತಲೂ ಹೆಚ್ಚಿಗೆ ಜನರಿದ್ದರೆ ಚೆನ್ನಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದೇ ರೀತಿ ಒಟ್ಟು ಈ ಓಟುದಾರರ ಸಂಖ್ಯೆ 75 ಸಾವಿರಕ್ಕಿಂತ ಜಾಸ್ತಿ ಆದರೆ ಆಗ ಈ ಚುನಾವಣಾ ಯೂನಿಟ್ಟು ಕೂಡ ಬಹಳ ದೊಡ್ಡದಾಗುತ್ತದೆ. ಆಗ ಚುನಾಯಿತ ಸದಸ್ಯರು ಎಲ್ಲರ ಸಂಪರ್ಕ ಇಟ್ಟುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಹೀಗಿರುವಾಗ ಈ ಒಂದು ಪ್ರಜಾಪ್ರಭುತ್ವದಲ್ಲಿ ಆಡಳಿತ ಯಶಸ್ವಿಯಾಗಿ ನಡೆಯಬೇಕಾದರೆ ಎರಡು ಕೋಟಿ ಜನಸಂಖ್ಯೆ ಇರತಕ್ಕಂಥ ರಾಷ್ಟ್ರವಾದರೆ ಅದು ಬಹಳ ದೊಡ್ಡದಾಗುತ್ತದೆ. ಈ ದಿವಸ ನಾನು ಹೇಳುವುದಾದರೆ, ಮದರಾಸ್ ಮತ್ತು ಬೊಂಬಾಯಿ ಪ್ರಾವಿನ್ಸುಗಳ ಪ್ರಜಾಸಂಖ್ಯೆ ಎರಡು ಕೋಟಿಗಳಿಗಿಂತಲೂ ಹೆಚ್ಚಾಗಿದ್ದುದರಿಂದಲೇ ಕೆಲವು ಸಣ್ಣಪುಟ್ಟ ಕೋಮುಗಳವರು ಸರ್ಕಾರದವರ ಕಣ್ಣಿಗೆ ಬೀಳದಂತಾಗಿ ಈ ದಿವಸ ಆ ಕೋಮುಗಳು ಇತರ ಮೆಜಾರಿಟಿ ಕೋಮುಗಳಷ್ಟು ಮುಂದುವರಿಯಲು ಸಾಧ್ಯವಾಗದೆ ಬಹಳ ಹಿಂದುಳಿಯಲು ಕಾರಣವಾಗಿದೆ. ಈ ಹಿಂದೆ ಅನೇಕವೇಳೆ ನಮ್ಮ ಮಾನ್ಯ ಸದಸ್ಯರಾದ ಶ್ರೀ ಟಿ. ಸಿ. ಬಸಪ್ಪನವರು ಮತ್ತು ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು ಎಷ್ಟೋಸಲ ಮಲೆನಾಡಿನ ವಿಚಾರವಾಗಿ ಮಾತನಾಡುತ್ತ ಆ ಮಲೆನಾಡಿನಲ್ಲಿ ರಸ್ತೆಗಳು ಸರಿಯಾಗಿಲ್ಲ, ಅನೇಕ ಹಳ್ಳಿ

ಗಳಲ್ಲಿ ಪಾಠಶಾಲೆಗಳಿಲ್ಲ, ಆಸ್ಪತ್ರೆಗಳಿಲ್ಲ, ಮಲೆನಾಡಿನವರ ಕಷ್ಟಸುಖಗಳನ್ನು ಕೇಳುವವರೇ ಇಲ್ಲದಂತಾಗಿದೆ ಎಂದು ಎಷ್ಟೋದಫ ಹೇಳಿದ್ದಾರೆ. ಆದರೆ ಈ ಅಭಿವೃದ್ಧಿ ಕಾರ್ಯಗಳ ವಿಚಾರ ತೆಗೆದುಕೊಂಡರೆ ಮೈದಾನ ಪ್ರದೇಶಗಳಲ್ಲಿರುವ ಈ ಚಿತ್ರದುರ್ಗ, ತುಮಕೂರು, ಬೆಂಗಳೂರು ಇತ್ಯಾದಿ ಸ್ಥಳಗಳು ಮುಂದುವರಿಯುತ್ತಿರುವ ಹಾಗೆ ಆ ನಮ್ಮ ಮಲೆನಾಡು ಮುಂದುವರಿಯುತ್ತಿಲ್ಲ.

Sri T. C. BASAPPA (Tarikere).—Is it to win over us?

Sri G. A. THIMMAPPA GOWDA.—I am only placing facts before you. I know I cannot win over you! ಹೀಗೆ ನಮ್ಮ ಚುನಾವಣೆ ಕ್ಷೇತ್ರಗಳು ದೊಡ್ಡದಾದಷ್ಟೂ ಸ್ಥಳದಿಂದ ಸ್ಥಳಕ್ಕೆ ದೂರ ಹೆಚ್ಚಾಗಿ ನಾವು ಆ ಜನರೊಡನೆ ನೇರವಾದ ಸಂಪರ್ಕ ಇಟ್ಟುಕೊಳ್ಳುವುದಕ್ಕೆ ಅವಕಾಶವಾಗುವುದಿಲ್ಲ. ಅಖಂಡ ಕರ್ಣಾಟಕ ಸ್ಥಾಪನೆಯಾಗಲಿ ಅಥವಾ ಆಗದೆ ಇರಲಿ, ಏನೇ ಆಗಲಿ ಈ ಪ್ರಜಾ ಸಂಖ್ಯೆ ಒಂದು ಕೋಟಿಗಿಂತ ಜಾಸ್ತಿಯಾದರೆ ಆಡಳಿತ ಯಶಸ್ವಿಯಾಗಿ ನಡೆಯಲಾರದು, ನಾವು ನಮ್ಮ ಪುರೋಭಿವೃದ್ಧಿ ಕೆಲಸಗಳನ್ನು ಚೆನ್ನಾಗಿ ನಡೆಸುವುದಕ್ಕೆ ಆಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಶ್ರೀಮಾನ್ ಟಿ. ಸಿ ಬಸಪ್ಪನವರು ಭಾಷಣ ಮಾಡುತ್ತ ನಾವು ಒಪ್ಪಲಿ ಅಥವಾ ಒಪ್ಪದೆ ಇರಲಿ ಕರ್ಣಾಟಕ ಬಂದೇ ಬರುತ್ತದೆ; ಅಖಂಡ ಕರ್ಣಾಟಕ ಸ್ಥಾಪನೆ ಆಗಿಯೇ ಆಗುತ್ತದೆ ಎಂದು ಹೇಳಿದರು. ಹಾಗೆ ಆಗುವುದಾಗಿದ್ದರೆ ನಾವೇಕೆ ಇಷ್ಟು ಈ ದಿವಸ ಚರ್ಚೆ ಮಾಡಬೇಕು? ಮುಂದೆ ಏನಾಗಬೇಕೋ ಅದೆಲ್ಲಾ ಆಗಲೇ ಬೇಕು, ಆಗ ಅದೆಲ್ಲಾ ಆಗಿಯೇ ಆಗುತ್ತದೆ. ಇದೇ ವಿಚಾರವನ್ನೇ ನಮ್ಮ ಕಾಂಗ್ರೆಸ್ ಸಂಸ್ಥೆಯವರು ಮೊದಲಿನಿಂದಲೂ ಹೇಳುತ್ತಿದ್ದಾರೆ. ಆದರೆ ವಿಚಾರ ಈ ರೀತಿ ಇರುವಾಗ ಶ್ರೀ ಕೆ. ಪಟ್ಟಾಭಿ ರಾಮರಾಯರವರು ಮಾತನಾಡುತ್ತ 'ನೀವುಗಳೆಲ್ಲರೂ ಇದನ್ನು ಒಪ್ಪಿಕೊಂಡಿದ್ದೀರಿ; ನಾನು ಹಿಂದೆ ಈ ಮೈಸೂರು ಕಾಂಗ್ರೆಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿದ್ದಾಗಲೇ ಈ ತತ್ವವನ್ನು ಒಪ್ಪಿಕೊಂಡಿದ್ದೇನೆ, ಕಾಂಗ್ರೆಸ್ ಸಂಸ್ಥೆಯವರು 1920ರಲ್ಲೇ ಈ ಭಾಷಾವಾರು ಪ್ರಾಂತ್ಯರಚನೆಗೆ ಒಪ್ಪಿಗೆಕೊಟ್ಟಿದ್ದಾರೆ. ಇತ್ತೀಚೆಗೆ ಕೂಡ ಅನೇಕ ಸಂದರ್ಭಗಳಲ್ಲಿ ನಮ್ಮ ಕಾಂಗ್ರೆಸ್ ಹಿರಿಯ ನಾಯಕರುಗಳು ಈ ವಿಚಾರವಾಗಿ ತಮ್ಮ ಅನುಮತಿಯನ್ನು ವ್ಯಕ್ತಪಡಿಸಿರುತ್ತಾರೆ' ಎಂದು ನಮ್ಮ ಆ ನಾಯಕರುಗಳಿಂತಲೂ ಅಧಿಕವಾಗಿ ಸ್ಪಷ್ಟವಾಗಿ ಹೇಳಿರುತ್ತಾರೆ. ಆಗಲಿ ಬಹಳ ಸಂತೋಷ. ಅನುಕೂಲವಾದರೆ ಹಾಗೆ ಮಾಡುವುದರಲ್ಲೇನೂ ತಪ್ಪಿಲ್ಲ. ಆದರೆ ಈ ಹಿಂದೆ ನಾವು ಈ ಒಂದು ತತ್ವವನ್ನೇ ಅಲ್ಲ, ಇನ್ನೂ ಎಷ್ಟೋ ತತ್ವಗಳನ್ನು ಅನುಮೋದಿಸಿದ್ದೆವು. ಆದರೆ ಈಗ ಏನಾಗಿದೆ? ಯಾವಾಗ ನಮಗೆ ಸ್ವಾತಂತ್ರ್ಯ ಬಂದು ಈ ದೇಶದ ಆಡಳಿತ ಜವಾಬ್ದಾರಿ ನಮ್ಮ ಆ ನಾಯಕರುಗಳ ಮೇಲೆ ಬಿತ್ತೋ ಆಗ ಈ ಅಭಿಪ್ರಾಯಗಳ ಬಗ್ಗೆ ಏನೇನು ಕಷ್ಟನಿಷ್ಠೂರುಗಳು, ತೊಂದರೆಗಳು ಇವೆ ಅನ್ನುವುದು ಈಗ ಅವರಿಗೆ ಗೊತ್ತಾಗಿದೆ. ಮಹಾತ್ಮ ಗಾಂಧೀಜಿಯವರು ಜೀವಂತರಾಗಿದ್ದಾಗಲೂ ಕೂಡ ಈ ಸಮಸ್ಯೆಗಳನ್ನೆಲ್ಲಾ ಅವರು ಬೇರೊಂದು ರೀತಿಯಲ್ಲಿ ಬಿಡಿಸಬೇಕೆಂದು ಹೇಳಿದ್ದರು. ಈ ಹಿಂದೆಯೇ ಈ ಸಮಸ್ಯೆಯನ್ನು ಬಿಡಿಸತಕ್ಕ ಬಗ್ಗೆ ಮಹಾತ್ಮ ಗಾಂಧಿಯವರ ಶಿಷ್ಯರಾಗಿದ್ದಂಥ ವಲ್ಲಭಭಾಯಿಪಟೇಲ್, ಪಟ್ಟಾಭಿ ಸೀತಾರಾಮಯ್ಯ ಮತ್ತು ಪಂಡಿತ ಜವಹರಲಾಲ್ ನೆಹ್ರೂ ಈ ಮೂರು ಜನಗಳ ಒಂದು ಸಮಿತಿಯನ್ನು ನೇಮಕಮಾಡಲಾಗಿತ್ತು. ಹೀಗೆ ಈ ಸಮಸ್ಯೆ ಅಷ್ಟು ಸುಲಭವಾದುದಾಗಿದ್ದರೆ, ಹಾಗೆ ಆ ದಿವಸ ಈ ಮೂವರ ಸಮಿತಿಯನ್ನು ನೇಮಕಮಾಡತಕ್ಕಂಥ ಅಗತ್ಯವೇ ಅವರಿಗೆ ಇರುತ್ತಿರಲಿಲ್ಲ. ನಮಗೂ ಕೂಡ ಈ ದಿವಸ ಈ ವಿಷಯವನ್ನು ಹೀಗೆ ಪುನರ್ವಿಮರ್ಶೆ ಮಾಡಬೇಕಾದಂಥ ಅಗತ್ಯ ಬೀಳುತ್ತಿರಲಿಲ್ಲ. ಹಾಗೆ ಹಿಂದೆ ಕಾಂಗ್ರೆಸ್ಸಿನವರು ಈ ವಿಚಾರದಲ್ಲಿ ಕಮಿಟ್‌ಮಾಡಿಕೊಂಡುಬಿಟ್ಟಿದ್ದಾರೆಂದು ಈ ದಿವಸ ಇದನ್ನು ಜಾರಿಗೇ ಕೊಡಬಹುದಾಗಿತ್ತು. ಹಾಗೆ ಕೊಟ್ಟುಬಿಡುತ್ತಿದ್ದರು. ಆದರೆ ಈ ಬಗ್ಗೆ ಈ ಮೂರು ಜನರು ಸೇರಿ ಒಪ್ಪಿಸಿರತಕ್ಕಂಥ ವರದಿಯಲ್ಲಿ ಒಂದು ಕಡೆ ಹೀಗೆ ಹೇಳಿದ್ದಾರೆ—ಅಂದರೆ ಆ ಜೆ. ವಿ. ಪಿ. ವರದಿಯಲ್ಲಿ ಹೀಗೆ ಹೇಳಿದ್ದಾರೆ:—

> "We feel that the conditions that have emerged in India since the advent of independence are such as to make us view the problem of linguistic province in a new light."

ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಅದೆಲ್ಲಾ ಹಿಂದಿನ ಮಾತಾಯಿತು. ಅವರು ಇತ್ತೀಚೆಗೆ ಏನು ಹೇಳಿದ್ದಾರೆಂಬುದನ್ನು ದಯವಿಟ್ಟು ಓದಿ ನೋಡಿ. ಆಗ ಅವರ ಅಭಿಪ್ರಾಯವೇನೆಂಬುದು ತಮಗೆ ಗೊತ್ತಾಗುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಾವು ಆ ದಿವಸ ಜವಹರಲಾಲ್ ನೆಹ್ರೂ ಅವರು ಏನು ಹೇಳಿದ್ದಾರೆಂಬುದನ್ನು ಹೇಳಿದಾಗ್ಯೂ ತಾವು ಈ ದಿವಸ ಅದನ್ನು ಒಪ್ಪುತ್ತಿಲ್ಲ. ಮಹಾತ್ಮಗಾಂಧಿಯವರಾದರೂ ಹಾಗೆ ಅನುಮತಿಯಿಲ್ಲದೆ ಇರತಕ್ಕಂಥ ಜನಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ರಾಜ್ಯವನ್ನು ಎಂದಿಗೂ ಮಾಡಬಾರದೆಂದು ಹೇಳಿದ್ದಾರೆ. ಅಂದರೆ ನಿಮಗೆ ಅನುಕೂಲವಾಗುವುದಾದರೆ ಇಟ್ಟುಕೊಳ್ಳಿ, ಅನಾನುಕೂಲವಾಗುದಾದರೆ ಬಿಟ್ಟುಬಿಡಿ ಎಂದು ಹೇಳಿದ್ದಾರೆ. ಈ ದಿವಸ ಈ ಅಸೆಂಬ್ಲಿ ಸದಸ್ಯರ ಅಭಿಪ್ರಾಯವೂ ಕೂಡ ಹಾಗೆಯೇ ಇದೆ. ಆದರೆ ಈಗ ಕೆಲವು ಸದಸ್ಯರು ಉದಾಹರಣೆಗೆ ಆ ಕೊಡಗಿನಂಥ 10-20 ಸಾವಿರ ಜನಗಳಿರತಕ್ಕಂಥ ಭಾಗವನ್ನಾದರೆ ಸೇರಿಸಿಕೊಳ್ಳಬಹುದೆಂದು ಹೇಳಿದ್ದಾರೆ. ಈ ದಿವಸ ನಮ್ಮ ಮೈಸೂರು ಸಂಸ್ಥಾನ ಈ ಸ್ಥಿತಿಯಲ್ಲಿರುವುದಕ್ಕೆ ಕಾರಣವೇನೆಂದರೆ, ಇಲ್ಲಿಯ ಪ್ರಜಾಸಂಖ್ಯೆ ಒಂದು ಕೋಟಿಯೊಳಗೆ ಇದ್ದು ಬಹಳ ದಿವಸಗಳಿಂದಲೂ ಒಂದು ಹಿಡಿತವಾದಂಥ ಚೌಕಟ್ಟಿನಲ್ಲಿ ಆಡಳಿತ ನಡೆಸಿಕೊಂಡು, ನಾವು ನಮ್ಮದೇ ಆದಂಥ ಒಂದು ವೈಶಿಷ್ಟ್ಯವನ್ನು ಬೆಳಸಿಕೊಂಡು ಬಂದಿದ್ದರಿಂದ ಹೀಗಿರುತ್ತದೆ. ಇದನ್ನು ನಾವು ಈ ದಿವಸ ಬದಲಾವಣೆ ಮಾಡಬೇಕಾಗಿದ್ದರೆ ನಾವು ಈ ಪ್ರಶ್ನೆಯನ್ನು ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ನಮ್ಮ ನಾಯಕರೂ ಕೂಡ ಇದನ್ನೇ ಹೇಳುತ್ತಿದ್ದಾರೆ. ಶ್ರೀಮನ್ಮಹಾರಾಜರವರೂ ಕೂಡ ತಮ್ಮ ಭಾಷಣದಲ್ಲಿ ಈ ಪ್ರಶ್ನೆಯಿಂದ ಬಹು ಭಾಗದ ಜನರಿಗೆ ಅನುಕೂಲವಾಗುವುದಾಗಿದ್ದರೆ ಮಾತ್ರವೇ ಇದನ್ನು ಮಾಡಬಹುದೆಂದು ಹೇಳಿರುತ್ತಾರೆ. ಇಷ್ಟೆಲ್ಲಾ ಇರುವಾಗ ಕೆಲವರು ಇದನ್ನು ಬಹಳ ಸುಲಭವಾಗಿ ಹೇಳುತ್ತಾರೆ, ಇದರಿಂದ ಬಹಳ ಸೌಲಭ್ಯಗಳುಂಟಾಗುತ್ತವೆಂದು. ಆದರೆ ಈ ದಿವಸ ಈ ಅಭಿಪ್ರಾಯಕ್ಕೆ ಶೇಕಡ 90ರಷ್ಟು ಜನರ ವಿರೋಧವಿದೆ ಎಂದು ಹೇಳು

(ಶ್ರೀ ಜಿ. ಎ. ತಿಮ್ಮಪ್ಪಗೌಡ)

ತ್ತಿದ್ದರೂ ಇನ್ನೂ ಶೇಕಡ 60ರಷ್ಟು ಜನರು ಏಕೀಕರಣವಾಗಬೇಕು ಎನ್ನತಕ್ಕವರಿದ್ದಾರೆ ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಈ ಅಖಂಡ ಕರ್ಣಾಟಕವಾಗಬೇಕೆಂಬ ಬಗ್ಗೆ ಶೇಕಡ 55ರಷ್ಟು ಜನ ಒಪ್ಪಿಗೆ ಕೊಟ್ಟು ಇನ್ನು ಶೇಕಡ 45ರಷ್ಟು ಜನ ಒಪ್ಪಿಗೆ ಕೊಡಪೆ ಹೋದರೆ ಆಗಲೂ ಇದಕ್ಕೆ ಬಹುಮತವಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ, ಇದು ಬಹುಜನರ ಸೌಕರ್ಯ ಮತ್ತು ಅವರ ಹಣೆ ಬರಹವನ್ನು ನಿರ್ಧರಮಾಡತಕ್ಕಂಥ ವಿಚಾರವಾಗಿದೆ. ಆದುದರಿಂದ ಈ ಸಮಸ್ಯೆಯನ್ನು ಬಿಡಿಸಬೇಕಾಗಿದ್ದರೆ ಭಾಷೆಯ ಆಧಾರದ ಮೇಲೆ ಅಲ್ಲದೆ ಮತ್ತೆ ಯಾವ ಆಧಾರದ ಮೇಲೆ ಬಿಡಿಸಲು ಪ್ರಯತ್ನಪಟ್ಟಾಗ್ಯೂ ಜನರ ಅಭಿಪ್ರಾಯವನ್ನಂತೂ ಪಡೆಯಲೇಬೇಕಾಗಿದೆ. ಹಿಂದೆ ನಾನು ಲಾ ಕಾಲೇಜಿನಲ್ಲಿ ಓದುತ್ತಿದ್ದಾಗ ಒಂದ್ಸಾವರ್ತಿ ಸಾವರ್‌ಕರ್ ಅವರು ಒಂದು ಮಾತನ್ನು ಹೇಳಿದ್ದರು, ಅದೀಗ ನನಗೆ ಜ್ಞಾಪಕಕ್ಕೆ ಬರುತ್ತಿದೆ.— ಆಗಿನ ಸನ್ನಿವೇಶದಲ್ಲಿ ದೇಶವಲ್ಲಿ ಹಿಂದೂ-ಮುಸ್ಲಿಂ ತಿಕ್ಕಾಟ ನಡೆಯುತ್ತಿತ್ತು. ಆಗ ಅವರು ಏನು ಹೇಳಿದರೆಂದರೆ—"ಈ ನಮ್ಮ ಇಂಡಿಯಾ ದೇಶದ ಚರಿತ್ರೆಯನ್ನು ನಾವು ನೋಡುವುದಾದರೆ ನಮ್ಮ ದುರ್ದೈವ ಎಷ್ಟೆಂದು ಹೇಳಿದರೂ ಸಾಲದಾಗಿದೆ. ಒಂದು ದೇಶದ ಆಡಳಿತವು ಯಾವಾಗ್ಲೂ ಆ ದೇಶದಲ್ಲಿರತಕ್ಕಂಥ ಮೆಜಾರ್ಟಿ ಕಮ್ಯೂನಿಟಿಯವರ ಅಭಿಪ್ರಾಯದಂತೆ ಅವರನ್ನು ಒಪ್ಪಿಸಿಕೊಂಡು, ಅವರ ಒಪ್ಪಿಗೆ ಪ್ರಕಾರ ಆಡಳಿತ ನಡೆಸಬೇಕಾದದ್ದು ಯುಕ್ತ; ಆ ರೀತಿ ಎಲ್ಲಾ ದೇಶಗಳಲ್ಲೂ ನಡೆಯುತ್ತಿರುವಾಗ ಈ ನಮ್ಮ ಇಂಡಿಯಾ ದೇಶದಲ್ಲಿ ನಾವು ಈ ಮೈನಾರಿಟಿ ಕೋಮಿನವರಿಗೆ ಅವರ ಒಪ್ಪಿಗೆ ಪಡೆದು ರಾಜ್ಯಾಡಳಿತ ನಡೆಸಬೇಕೆಂದು ಹೇಳುತ್ತಿರುವುದನ್ನು ನೋಡಿದರೆ ಬಹಳ ವಿಚಿತ್ರವಾಗಿದೆ. ಅಷ್ಟೇ ಏಕೆ, ನಾವು ತಲೆಬಗ್ಗಿಸುವಂಥ ವಿಚಾರವಾಗಿದೆ ಇದು" ಎಂದು ಹೇಳುತ್ತಿದ್ದರು. ಅದೇ ರೀತಿ ಈ ದಿವಸ ದೇಶದಲ್ಲಿ ಬಹು ಸಂಖ್ಯಾತರಾಗಿರತಕ್ಕಂಥ ಕೋಮಿನವರ ಅಭಿಪ್ರಾಯದ ಪ್ರಕಾರ ಈಗ ಈ ಭಾಷೆ ಆಧಾರದ ಮೇಲೆ ದೇಶ ಪುನರ್ವಿಂಗಡಣೆಯಾಗುವುದು ಬೇಡ, ನಮ್ಮ ಅಕ್ಕಪಕ್ಕದ ಜನರನ್ನು ನಮ್ಮ ದೇಶಕ್ಕೆ ಸೇರಿಸಿಕೊಳ್ಳಲು ಇದು ಸಕಾಲವಾಗಿಲ್ಲ ಎಂದು ಹೇಳುತ್ತಿರುವಾಗ, ಅದು ಹಾಗಲ್ಲ, ಅದು ಹೀಗಲ್ಲ ಎಂದು ಹೇಳುತ್ತಿರುವುದು ತುಂಬ ಶೋಚನೀಯವಾಗಿದೆ. ಈಗಲೂ ಕೂಡ ಶೇಕಡ 75ರಷ್ಟು ಜನರು ಇದು ಆಗಕೂಡದೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ದೇಶದಲ್ಲಿ ಈ ಬಗ್ಗೆ ಯಾವ ವಿಧವಾದ ಒಂದು ಪ್ರಚಾರ ಕೂಡ ಇಲ್ಲ. ಇದರಿಂದ ಮುಂದೆ ದೇಶಕ್ಕೆ ಏನೊಂದು ಭಯೋತ್ಪಾದನೆ ಇದೆಯೆಂಬ ಬಗ್ಗೆ ಜನರಿಗೆ ಯಾವ ತಿಳುವಳಿಕೆಯನ್ನೂ ಉಂಟುಮಾಡಿಲ್ಲ. ಈ ಪ್ರಾಂತ್ಯ ಪುನರ್ವಿಂಗಡಣೆಯ ವಿಚಾರದಲ್ಲಿ ನಮ್ಮ ನಾಯಕರುಗಳಿಗಾಗಲಿ ಅಥವಾ ಜನಗಳಿಗಾಗಲೀ ಯಾರೊಬ್ಬರ ಒಪ್ಪಿಗೆಯೂ ಇರುವುದಿಲ್ಲ. ಜನರನ್ನು ಕೇಳಿದರೆ ಅವರು ಅವರ ಆತ್ಮಸಾಕ್ಷಿಯಾಗಿ ಈಗ ನಮ್ಮ ಮೈಸೂರು ದೇಶ ಎಷ್ಟಿದೆಯೋ ಅಷ್ಟೇ ಇರಬೇಕೆಂದು ಹೇಳುತ್ತಾರೆ. ಜನಾಭಿಪ್ರಾಯ ಈ ರೀತಿ ಇದೆಯೆಂದು ನಾನು ಹೇಳುತ್ತೇನೆ.

ಶ್ರೀ ಟಿ. ಹನುಮಯ್ಯ (ಚಿತ್ರದುರ್ಗ—ಅನುಸೂಚಿತ ಜಾತಿಗಳು).—ಕೊಶ್ಚನ್?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹೌದು. ನೀವು ಆ ಚಿತ್ರದುರ್ಗ ಬಾರ್ಡರಿನಲ್ಲಿದ್ದೀರಿ. ನಿಮಗೆ ಬೇರೆ ಜನರ ನೋವು ಕಾಣಿಸುತ್ತಿಲ್ಲ. ಇದು enlightened self-interest ಎನ್ನುತ್ತೀರಿ. ನೀವು ಇತರರ ಅಭಿವೃದ್ಧಿ ಬಗ್ಗೆ ಹೊಟ್ಟೆಕಿಚ್ಚು ಪಡುವುದೂ ಬೇಕಾಗಿಲ್ಲ ಮತ್ತು ನಾವು ಅಂಥ ದಾನಶೂರಕರ್ಣರಾಗುವುದೂ ಬೇಡ. ಹೀಗೆ ರಾಜ್ಯಗಳ ಪುನರ್ವಿಂಗಡಣೆಯಾದಲ್ಲಿ ನಾವು ನಮ್ಮ ಕೆಲಸಕಾರ್ಯಗಳೇನಿವೆಯೋ ಮತ್ತು ನಮ್ಮ ನಾಡಿನ ಅಭಿವೃದ್ಧಿಸಾಧನೆಗಾಗಿ ನಾವು ಏನೇನು ಕೆಲಸಕಾರ್ಯಗಳನ್ನು ಕೈಕೊಳ್ಳಬೇಕಾಗಿದೆಯೋ ಅವುಗಳಿಗೆಲ್ಲಾ ಬಹಳ ಧಕ್ಕೆಯುಂಟಾಗುತ್ತದೆ. ಇಲ್ಲಿಯತನಕ ನಾವು ನಮ್ಮ ನಾಡಿನ ಮೇಲ್ಮೆಗಾಗಿ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡು ಅದರ ಪ್ರಕಾರ 4-5 ವರ್ಷಗಳಲ್ಲಿ ಇಂತಿಷ್ಟು ಕೆರೆಗಳ ರಿಪೇರಿಯಾಗಬೇಕು, ಇಂಥಿಂಥ ಸ್ಥಳಗಳಿಗೆ ಪಾಠಶಾಲೆಗಳನ್ನೊದಗಿಸಬೇಕು ಎಂಬುದಾಗಿ ಇತ್ಯಾದಿ ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತೇವೆ. ಹೀಗಿರುವಾಗ ಈ ರಾಜ್ಯಗಳ ಪುನರ್ವಿಂಗಡಣೆಯಾಗಬೇಕೆಂದು ಹೇಳಿದರೆ ಆಗ ನಮ್ಮ ಆದಾಯ ಕಮ್ಮಿಯಾಗಿ, ನಮ್ಮ ಖರ್ಚುವೆಚ್ಚಗಳ ಬಾಬುಗಳು ಜಾಸ್ತಿಯಾಗುತ್ತವೆ. ಆಗ ನಾವು ನಮ್ಮ ದೇಶದ ಅಭಿವೃದ್ಧಿಕಾರ್ಯಗಳನ್ನು 18-20 ವರ್ಷಗಳ ತನಕ ಹಿಂದಕ್ಕೆ ಹಾಕಬೇಕಾಗುತ್ತದೆ. ಅಂಗೈಲಿರುವ ಹುಣ್ಣಿಗೆ ಕನ್ನಡಿಬೇಕೇ ಎಂಬಂತೆ ನಾವು ನಮ್ಮ ಆದಾಯದಲ್ಲಿ ಸ್ವಲ್ಪ ಭಾಗವನ್ನು ಆ ಹಿಂದುಳಿದಿರುವಂಥ ಪ್ರದೇಶಗಳ ಬಗ್ಗೆ ಖರ್ಚು ಮಾಡಲೇಬೇಕಾಗುತ್ತದೆ. ಆಗ ನಮ್ಮ ಹಳ್ಳಿಗಾಡುಗಳ ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಬೇಕಾಗುತ್ತದೆ. ಇಂಥ ಕಷ್ಟಗಳೆಲ್ಲಾ ಸಾಮಾನ್ಯವಾಗಿ ನಮ್ಮ ಮಿತ್ರರಾದಂಥ ಶ್ರೀ ಸಿದ್ದಪ್ಪನವರಿಗೆ ಗೊತ್ತಾಗುವುದಿಲ್ಲ. ನಾಳೆದಿವಸ ಆ ಹಿಂದುಳಿದ ಪ್ರಾಂತ್ಯಗಳವರು 'ನಮಗೆ ಕೆರೆ ಮಾಡಿಸಿಕೊಡಿ, ಒಂದು ರಸ್ತೆ ಮಾಡಿಸಿ ಕೊಡಿ' ಎಂದು ಕೇಳಬಹುದು. ಆದರೆ ನೋಡತಕ್ಕವರಿಗೇನೋ ಈ ವಿಚಾರಗಳೆಲ್ಲಾ ಚಿಕ್ಕಪುಟ್ಟ ವಿಚಾರಗಳೆಂದು ಕಾಣುವುದಾದರೂ ನಾವು ಈ ಅಂಶಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳಲೇಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದಲೂ ನಾವು ಆಯಾ ಪ್ರಾಂತ್ಯದ ಜನರ ಅಭಿಪ್ರಾಯ ಪಡೆಯದೆ ಯಾವ ಕೆಲಸಕ್ಕೇ ಆಗಲಿ ಹೀಗೆ ಕೈಹಾಕುವುದು ಅಷ್ಟು ಬುದ್ಧಿವಂತಿಕೆಯ ಕೆಲಸವಲ್ಲವೆಂದು ನಾನು ಹೇಳುತ್ತೇನೆ. ಭಾಷೆಯ ಆಧಾರದ ಮೇಲೆ ರಾಜ್ಯಗಳನ್ನು ನಿರ್ಮಾಣಮಾಡತಕ್ಕ ವಿಚಾರದಲ್ಲಿ ನನಗೆ ಒಂದಂಶ ಹೀಗೆ ಹೊಳೆಯುತ್ತಿದೆ:—ಏನೆಂದರೆ, ಈ ರೀತಿಯ ಏರ್ಪಾಡಿನಿಂದ ನಮ್ಮ ದೇಶದ ಸ್ವಾತಂತ್ರ್ಯದ ಭದ್ರತೆಗೆ ಬಹಳ ಧಕ್ಕೆ ಬರುತ್ತದೆ. ಈ ಬರಿ ಭಾಷೆಯೊಂದರ ವ್ಯಾಮೋಹಕ್ಕೊಳಗಾದರೆ ಜಾತಿ ಮತಗಳಲ್ಲಿ ಅನೈಕ್ಯಮತ್ಯ ಉಂಟಾಗಿ, ಜಾತಿ ಕಲಹಗಳು ಬೆಳೆಯಲು ಅವಕಾಶವಾಗುತ್ತದೆ. ಹೀಗೆಲ್ಲಾ ಮಾಡುವುದರಿಂದ ನಮ್ಮ ಸ್ವಾತಂತ್ರ್ಯಕ್ಕೇ ಚ್ಯುತಿ ಬರಬಹುದೋ ಏನೋ ಎಂದು ನನಗೆನಿಸುತ್ತದೆ. ಈ ದಿವಸ ಆ ಪಾಕೀಸ್ಥಾನದಲ್ಲಿ ಜನರು ಒಂದು ಮತಾಂಧತೆಯಿಂದ ಕೂಡಿದವರಾಗಿರುವುದರಿಂದ ಅಥವಾ religion ಮೇಲೆ ಕಟ್ಟಿದಂಥ ರಾಜ್ಯದಲ್ಲಿರುವುದರಿಂದ ಅನೇಕ ಅನಾಹುತಗಳಾಗಲು ಕಾರಣವಾಯಿತು. ಹೀಗೆ ಯಾವ ಒಂದು ಭಾಷೆಯ ಆಧಾರದ ಮೇಲೆ ಆಗಲಿ ರಾಜ್ಯ ಕಟ್ಟುವುದರಿಂದ ಅನೇಕ ತೊಂದರೆಗಳುಂಟಾಗಲು ಕಾರಣವಾಗುತ್ತದೆ. ಇದೇ ರೀತಿಯಾಗಿ ಈ ದಿವಸ ಬೆಂಗಾಲ್ ಮತ್ತು ಒರಿಸ್ಸಾ ಇತ್ಯಾದಿ ದೇಶಗಳಲ್ಲಿ ಭಾಷೆಯ ವಿಚಾರವಾಗಿ ಆಗಾಗ್ಗೆ ಕಚ್ಚಾಟಗಳು ಆಗುತ್ತಲೇ ಇವೆ. ಹೀಗೆಲ್ಲಾ ಅವರು ಈ ದಿವಸ ಎಷ್ಟು ಫೆನಾಟಿಕಲ್ ಆಗಿ ವರ್ತಿಸುತ್ತಿದ್ದಾರೆಂಬುದನ್ನು ನಾವು ಕೇಳುತ್ತಿದ್ದೇವೆ. ಆದುದರಿಂದ ಹೀಗಾದರೆ

ಇನ್ನು ಮುಂದಿನ 10 ವರ್ಷಗಳಲ್ಲಿ ಅಥವಾ 20 ವರ್ಷಗಳಲ್ಲಿ ಏನಾಗಬಹುದೆಂಬುದನ್ನು ನಾವು ನಮ್ಮ ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ನಡೆಸಬೇಕಾದದ್ದು ಯುಕ್ತವೆಂದು ಭಾವಿಸುವ ಪಕ್ಷದಲ್ಲಿ ಈ ಭಾಷಾವಾರು ಪ್ರಾಂತ್ಯರಚನೆಗಳಾಗಲು ನಾವು ಯಾವಾಗ್ಲೂ ಅವಕಾಶಕೊಡಬಾರದೆಂದು ನನಗೆನಿಸುತ್ತದೆ. ಈಗ ಈ ಭಾಷೆಯ ಬೆಳವಣಿಗೆಗಾಗಿ ನಾವು ಅಷ್ಟೇನೂ ನಿಗಾ ಕೊಡಬೇಕಾಗಿಲ್ಲ ಎಂದು ಹೇಳುವುದಿಲ್ಲ. ಆದರೆ ಅಕ್ಕಪಕ್ಕದ ಪ್ರಾಂತ್ಯಗಳವರು ಅವರಿಗೆ ಭಾಷೆಯ ಅಭಿಮಾನವಿದ್ದರೂ ಬೇರೆ ರೂಪವಾಗಿ ಆಡಳಿತ ನಡೆಸಿಕೊಂಡು ಹೋಗುತ್ತಿದ್ದಾರೆ.

2 P.M.

ಈ ಭಾಷೆ ದೇಶದ ಸ್ವಾತಂತ್ರ್ಯಕ್ಕೆ ಮುಂದೆ ಒಂದು ಕುಂದಕ ತರಬಹುದೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು, ತತ್ಕಾಲದಲ್ಲಿ ಆಯಾ ಪ್ರಾಂತದ ಭಾಷೆಗಳು ಬೆಳೆದು, ಅವುಗಳಿಂದ ಆಯಾ ಪ್ರಾಂತ್ಯಗಳ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋದರೂ ಕೂಡ, ಮುಂದೆ permanent basisನ ಮೇಲೆ ಒಂದೇ ರಾಷ್ಟ್ರಭಾಷೆಯಾದ ಹಿಂದೀ ಭಾಷೆ ಇಂಡಿಯಾ ದೇಶದಲ್ಲೆಲ್ಲಾ ಹರಡಬೇಕಾಗಿದೆ. ದಕ್ಷಿಣ ಇಂಡಿಯಾದಲ್ಲಿ ಹಿಂದೀ ಭಾಷೆ 5 ವರ್ಷದೊಳಗೆ 10 ವರ್ಷದೊಳಗೆ ಕಡ್ಡಾಯವಾಗಿ ಕಲಿಯಬೇಕು. ಅದರ ಪ್ರಾಬಲ್ಯ ಎಲ್ಲಾ ಕಡೆಯೂ ಪ್ರಸಾರವಾಗಬೇಕು. ಪ್ರಾಂತಗಳ ಭಾಷೆಯ ಪ್ರಾಬಲ್ಯವನ್ನು ಹಿಂದಕ್ಕೆ ಇಡಬೇಕು ಮತ್ತು ಹಾಗೆ ಪ್ರಾಂತಗಳ ವಿಂಗಡನೆ ಮಾಡಬೇಕು. ಭಾಷೆಗಳ ಆಧಾರದಮೇಲೆ ಪ್ರಾಂತಗಳನ್ನು ಮಾಡಿಕೊಂಡರೆ ಏನಾಗುತ್ತದೆ ಎಂಬುದು ಡಿಲ್ಲಿಗೆ ಹೋದವರಿಗೆ ಅನುಭವವಿದೆ. ನಮ್ಮ ಸಭಾಪತಿಗಳಿಗೆ ಗೊತ್ತಿದೆ. ಒಂದೊಂದು ಭಾಷೆ ಮಾತನಾಡತಕ್ಕವರು ಒಂದೊಂದು ಕಡೆ ಕೂತುಕೊಂಡು ಅಲ್ಲಿ ಚರ್ಚೆಗೆ ಬರುವ ವಿಚಾರಗಳನ್ನು ಅವರವರ ಪ್ರಾಂತಗಳ ದೃಷ್ಟಿಯಲ್ಲಿ ನೋಡುತ್ತಾರೆ. ಹೀಗೆ ಪ್ರಾಂತೀಯ ಮನೋಭಾವನೆ ಬೆಳೆಯುತ್ತಾ ಹೋಗುತ್ತದೆ. ಅದಕ್ಕೆ ಅವಕಾಶ ಕೊಡಬಾರದು. ಬಲಯುತ ರಾಷ್ಟ್ರಗಳಾದ ಅಮೇರಿಕಾ ಮತ್ತು ಇಂಗ್ಲೆಂಡ್ ನ ಮಟ್ಟಕ್ಕೆ ಬರಬೇಕಾದರೆ ಆ ರೀತಿ ಒಂದೇ ಭಾಷೆಯನ್ನು ಇಟ್ಟುಕೊಳ್ಳಬೇಕು. ಹಾಗೆ ಮಾಡದೇ ಹೋದರೆ ರಾಷ್ಟ್ರಪ್ರೇಮವುಂಟಾಗುವುದಿಲ್ಲ. ಆಯಾ ಪ್ರಾಂತದ ಅಂಧಪ್ರೇಮ ಬೆಳೆಯುತ್ತಾ ಹೋಗುತ್ತದೆ. ನಾಳೆಯ ದಿವಸ ಕೇಂದ್ರ ಸರ್ಕಾರ ಅಸಮರ್ಪಕವಾಗಿ, ನಾನಾ ಕಾರಣಗಳಿಂದ ಸಡಿಲವಾದ ಪಕ್ಷದಲ್ಲಿ ಸರ್ಪಗಳು ಚುಚ್ಚುವಂತೆ ಚುಚ್ಚುವುದಕ್ಕೆ ಪ್ರಾರಂಭ ಮಾಡುತ್ತೇವೆ.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ತಾವು ಹಿಂದೀ ಮಾತನಾಡುವವರ ಜೊತೆಗೆ ಕುಳಿತುಕೊಳ್ಳುತ್ತಿದ್ದರೋ ಅಥವಾ ಕನ್ನಡ ಮಾತನಾಡುವವರ ಜೊತೆಗೆ ಕುಳಿತುಕೊಳ್ಳುತ್ತಿದ್ದರೋ ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇಂಗ್ಲೀಷ್ ಮಾತನಾಡುವವರ ಜೊತೆಗೆ ಕುಳಿತುಕೊಳ್ಳುತ್ತಿದ್ದೆ. ಕನ್ನಡ ಭಾಗಗಳು ಬಹಳ ದೂರದಲ್ಲಿದ್ದುದರಿಂದ ಆಡಳಿತ ಸಮರ್ಪಕವಾಗಿಲ್ಲದೆ ಇರುವುದರಿಂದ ಆಗ ನಮ್ಮ ಜೊತೆಗೆ ಸೇರಬೇಕೆಂದು ಹೇಳುತ್ತಿದ್ದರು. ಇವೊತ್ತಿನ ದಿವಸ ಸನ್ನಿವೇಶ ಬೇರೆಯಾಗಿದೆ. ಏನೂ ಅನುಕೂಲ ಮಾಡಿಕೊಡದಿದ್ದರೆ ಕೊಟ್ರ ಬಸವನಗೌಡರಂಥವರು ಸುಮ್ಮನೆ ಇರುವುದಿಲ್ಲ. ಧಾರವಾಡ, ಹುಬ್ಬಳ್ಳಿಯಲ್ಲಿ ಇದ್ದವರಿಗೆ ಹಿಂದೆ ತೊಂದರೆಯಾಗಿದ್ದುದು ನಿಜ. ಇವೊತ್ತಿನ ದಿವಸ ಪ್ರಜಾಪ್ರಭುತ್ವ ಇದೆ. ಭಯ ಏತಕ್ಕೆ ಇರಬೇಕು ? ಇಡೀ ಇಂಡಿಯಾ ದೇಶಕ್ಕೆ ಒಂದೇ ಒಂದು Constitution ಇವೊತ್ತಿನ ದಿವಸ ಇದೆ. ಪ್ರತಿಯೊಬ್ಬ ಪ್ರಜೆಯೂ ಇಂಡಿಯಾದ ನೇರವಾದ ಪ್ರಜೆಯಾಗಿದ್ದಾನೆ. ಎಲ್ಲಾ ಹಕ್ಕುಬಾಧ್ಯತೆಗಳೂ ಪ್ರತಿಯೊಂದು ಮೂಲೆ ಮೂಲೆಯಲ್ಲಿರುವ ಪ್ರತಿಯೊಂದು ಕೋಮಿನ ಪ್ರತಿಯೊಬ್ಬ ವ್ಯಕ್ತಿಗೂ ಒಂದೇ ವಿಧವಾಗಿ ಇದೆ. ಅಂಥ ಹಕ್ಕುಭಾಧ್ಯತೆಗಳನ್ನು ಚಲಾಯಿಸುವುದಕ್ಕೆ ನಮಗೆ ಹಕ್ಕು ಇದೆ. ನಮ್ಮ ಕನ್ನಡ ಬಂಧುಗಳು ಬಹಳ ಕಷ್ಟದಲ್ಲಿದ್ದಾರೆಂದು ವ್ಯಥೆಯಿಂದ ಹೇಳಿದರು. ಅವರು ಕಷ್ಟದಲ್ಲಿ ಇಲ್ಲ. ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದಾರೆ. ಬೊಂಬಾಯಿ ಪ್ರಾಂತದ ಕರ್ಣಾಟಕದವರು ಉಪಮಂತ್ರಿಗಳಾಗಿದ್ದಾರೆ, ಮದರಾಸಿನಲ್ಲಿಯೂ ಆ ರೀತಿ ಒಳ್ಳೆಯ ಹುದ್ದೆಗಳಲ್ಲಿ ಇದ್ದಾರೆ. ಕರ್ಣಾಟಕದಿಂದ ಇಬ್ಬರು ಮಂತ್ರಿಗಳು ಇದ್ದಾರೆ.

ಶ್ರೀ ಜೆ. ಮುಹಮ್ಮದ್ ಇಮಾಂ.—ಸಮುದ್ರದ ನೆಂಟಸ್ತನ ಉಪ್ಪಿಗೆ ಬಡತನ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸಮುದ್ರದ ಉಪ್ಪು ಪ್ರಸಿದ್ಧವಾದುದು. ಆದ್ದರಿಂದ ಅದರ ಭಯ ಕರ್ಣಾಟಕದವರಿಗೆ ಏನೂ ಇಲ್ಲ. ಅಕಸ್ಮಾತ್ತಾಗಿ ಪ್ರಾಂತಗಳ ಯಾವ ಭಾಗ ಹಿಂದುಳಿದಿದೆಯೋ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಕೋಟ್ಯಂತರ ರೂಪಾಯಿಗಳ ಸಹಾಯವನ್ನು ಕೇಂದ್ರದಿಂದ ತೆಗೆದುಕೊಂಡು ಮಾಡಬಹುದು. ಈ ಸಮಸ್ಯೆಯನ್ನು ಬಿಡಿಸಬೇಕಾದರೆ ಅನೇಕ ಎಡರು ತೊಡರುಗಳಿವೆ. ಇದು ಸಾಮಾನ್ಯವಾದ ಪ್ರಶ್ನೆಯಲ್ಲ. ಇಡೀ ದೇಶದ ಆಗು ಹೋಗುಗಳನ್ನು ನಿರ್ಧರಿಸಬೇಕಾಗಿದೆ. ಇದಕ್ಕೆ ಮೈಸೂರು ದೇಶದ ಬಹು ಸಂಖ್ಯಾತ ಜನರು ಮೊದಲಿನಿಂದಲೂ ವಿರೋಧವಾಗಿದ್ದಾರೆ. ಈ ಸಂದರ್ಭದಲ್ಲಿ ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಕೆಲವರು 1949ರಲ್ಲಿ ಪ್ರಚಾರ ನಡೆಸುತ್ತಿದ್ದರು. ಅದೇನೆಂದರೆ ಡಿಲ್ಲಿಯೊಳಗೆ Constitution ರಚನೆಯಾಗುತ್ತಿದೆ, ಮೈಸೂರನ್ನು ಏನಾದರೂ ಮಾಡಿ ಕರ್ಣಾಟಕದಲ್ಲಿ ಸೇರಿಸಿಬಿಡುತ್ತಾರೆಂದು ಹೇಳುತ್ತಿದ್ದರು. ಆಗ ಮೈಸೂರು Representative Assemblyಯಲ್ಲಿ ಒಂದು special resolutionನನ್ನು ನಮ್ಮ ಸ್ನೇಹಿತರಾದ ಶ್ರೀ ಬಿ. ಎನ್. ಗುಪ್ತರವರು ತಂದು ಸದ್ಯಕ್ಕೆ ಮೈಸೂರು ಇದ್ದಹಾಗೆ ಇರಬೇಕು, ಬೇರೆ ಪ್ರಾಂತದ ಜೊತೆಗೆ ಸೇರಿಸಕೂಡದು ಎಂದು ಒಂದು ನಿರ್ಣಯ ಮಾಡಿದರು. ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣನವರು ಅದರಮೇಲೆ ಮಾತನಾಡಿದ್ದಾರೆ. ಇನ್ನೂ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಆ ನಿರ್ಣಯ ಸರ್ವಾನುಮತದಿಂದ ಪಾಸಾಯಿತು. ಕೇವಲ ಒಬ್ಬರು ಮಾತ್ರ ವಿರೋಧಮಾಡಿದರು. ಕಾಂಗ್ರೆಸ್ ಸಂಸ್ಥೆಯ ವಿಚಾರ ಸ್ವಲ್ಪ ಹೇಳುತ್ತೇನೆ. ಶ್ರೀ ಟಿ. ಸಿ. ಬಸಪ್ಪನವರು ಈ ವಿಚಾರದಲ್ಲಿ ಒಂದು ಸಬ್ಜೆಕ್ಟ್ ಚರ್ಚೆಗೆ ತಂದರೆ ಅದಕ್ಕಲ್ಲಿ ಕೆಲವರು ಆಗಬಹುದು ಎಂತಲೂ ಇನ್ನು ಕೆಲವರು ಆಗಬಾರದು ಎಂತಲೂ ಹೇಳುತ್ತಾರೆ. ಈ ಕಾಂಗ್ರೆಸ್ ಎಂಬುದು disciplineಗೆ ಒಳಗಾಗಿದ್ದುದರಿಂದ ಪಾರ್ಟಿಯಲ್ಲಿ ಚರ್ಚೆಗೆ ಬರುವುದು Assemblyಯಲ್ಲಿ ಚರ್ಚೆಗೆ ಬರುತ್ತದೆ. ಹಿಂದಿನ Assemblyಯಲ್ಲಿ ಬಹುಮತ ಇದಕ್ಕೆ ವಿರೋಧವಾಗಿತ್ತು. ಆದರೆ ಈ ಕಾಂಗ್ರೆಸ್ಸಿನಲ್ಲಿ split ಬರಬಾರದು, ಭಿನ್ನಾಭಿಪ್ರಾಯ ಇರಬಾರದು. ಈ ಸಮಸ್ಯೆಯನ್ನು ಒಗ್ಗಟ್ಟಿನಿಂದ ಎಲ್ಲಾ ಕೋಮಿನವರೂ ಭೇದವಿಲ್ಲದೆ ಬಗೆಹರಿಸಬೇಕಾಗಿದೆ. ಶ್ರೀ ಸೋಲೂರು ಸಿದ್ದಪ್ಪನವರು ನನಗೆ ಅಣ್ಣತಮ್ಮಂದಿರು

(ಶ್ರೀ ಜಿ. ಎ. ತಿಮ್ಮಪ್ಪಗೌಡ.)

ಇದ್ದಹಾಗೆ. ಅವರು ನನ್ನನ್ನು ಮಂತ್ರಿಗಳನ್ನಾಗಿ ಮಾಡುತ್ತೇನೆಂದು ಹೇಳುತ್ತಿದ್ದರು ಮತ್ತು ನನ್ನ ಹಿತವನ್ನು ಕೋರತಕ್ಕವರು. ಅಂತಹವರ ಸ್ನೇಹಕ್ಕೆ ಭಂಗ ಬರಬಾರದು. ಅಷ್ಟುಮಟ್ಟಿಗೆ ನನ್ನ ವಿಷಯದಲ್ಲಿ ಆಶೆ ಇಟ್ಟುಕೊಂಡಿರುವವರು ಹೊಡೆದಾಡುವಂತಾಗಬಾರದು. ಶ್ರೀ ಪಟ್ಟಾಭಿರಾಮ್ಯರವರು ಖಚಿತವಾಗಿ ಹೇಳಲಿಲ್ಲ. ಕಾಂಗ್ರೆಸ್ ಸಂಸ್ಥೆಯಲ್ಲಿ split ಉಂಟಾಗಬಾರದೆಂದು ಪ್ರತಿಯೊಂದು ಸಾರಿಯೂ ಇದನ್ನು ತಳ್ಳಿಹಾಕಿಕೊಂಡು ಬಂದರು. ಈಗ ಈ ವಿಚಾರ ಖಚಿತವಾಗಿ ಬಂದಿರತಕ್ಕ ಕಾಲದಲ್ಲಿ ಎಲ್ಲರೂ ಕೂಡ openಆಗಿ ಮಾತನಾಡುವುದಕ್ಕೆ ಶುರು ಮಾಡಿದ್ದೇವೆ. ಬೇಕು, ಬೇಡ ಎಂದು ಭಾಷಣ ಮಾಡಿದ್ದೇವೆ. ಕೆಲವರು ತಟಸ್ಥರಾಗಿದ್ದಾರೆ. ಇದಕ್ಕೆ ಅನೇಕ ರಾಜಕೀಯ ಕಾರಣಗಳಿವೆ. ಮುಂದೆ election ಆಗಿ ಏಕೀಕರಣವಾಗಬಹುದು, ತಮಗೆ ಅಲ್ಲಿ ಸೀಟ್ ಕೊಡಬಹುದು ಎಂದು ಅವರು ಬಹಳ ಹುಷಾರಾಗಿದ್ದಾರೆ. ನಾನು ಬಹಳವಾಗಿ ಯೋಚನೆ ಮಾಡಿ ನೋಡಿದರಲ್ಲ ನನ್ನ ಅಲ್ಪಬುದ್ಧಿಗೆ ಈ ರೀತಿ ತೋಚುತ್ತದೆ. ಆಡಳಿತ ದೃಷ್ಟಿಯಿಂದಲೂ, ರಾಜಕೀಯ ದೃಷ್ಟಿಯಿಂದಲೂ ಮತ್ತು ಇಂಡಿಯಾ ದೇಶದ ಐಕ್ಯತೆಯ ದೃಷ್ಟಿಯಿಂದಲೂ ಇದು ಸಕಾಲವಲ್ಲ. ಈ ಪ್ರಾಂತ್ಯಗಳ ಪುನರ್ವಿಂಗಡಣೆಯನ್ನು ಮಾನ್ಯ ಮುಖಂಡರುಗಳು ದೇಶದ ನಾಯಕರುಗಳು ಮತ್ತು ದೇಶದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥವರು ಮತ್ತು ಫಸಲಾಲಿ ಸಮಿತಿಯವರು ದೀರ್ಘವಾದ ಆಲೋಚನೆ ಮಾಡುತ್ತಿದ್ದಾರೆ. ಮುಷ್ಕರ ಹೂಡುತ್ತೇವೆ, ಪ್ರಾಣ ಬಿಡುತ್ತೇವೆ, ಉಪವಾಸ ಮಾಡುತ್ತೇವೆ ಎಂದು ಹೇಳುವುದು ವಿಪರೀತವಾಗಿದೆ. ಇದು ಪ್ರಜಾಪ್ರಭುತ್ವದ ನೀತಿಗೆ ಅನುಸಾರವಾಗಿಲ್ಲ. ಈ ಎಲ್ಲ ಕಾರಣಗಳಿಂದಲೂ ಈ ಸಮಸ್ಯೆಯನ್ನು ಈಗ ತೆಗೆದುಕೊಳ್ಳಕೂಡದು. ಈಗ ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಹೋದರೆ ಅದರಿಂದ ಉಲ್ಬಣಾವಸ್ಥೆ ಉಂಟಾಗುತ್ತದೆ, ಕ್ಲಿಷ್ಟ ಸಮಸ್ಯೆಗಳು ಉಂಟಾಗುತ್ತವೆ, ದೇಶದ ಮುನ್ನಡೆಗೆ ಅಡ್ಡಿಯಾಗುತ್ತದೆ, ದೇಶದ ಆರ್ಥಿಕ, ಸಾಮಾಜಿಕ ರಾಜಕೀಯ, ಬೆಳವಣಿಗೆಗೆ ಕಲ್ಲು ಹಾಕಿದ ಹಾಗೆ, ಮುಳ್ಳು ಹಾಕಿದ ಹಾಗೆ ಆಗುತ್ತದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ಅಧ್ಯಕ್ಷರೇ, ಈ ಮಹಾ ಸಭೆಯ ಮಹನೀಯರುಗಳು ಮಾತನಾಡಿದುದನ್ನು ಚೆನ್ನಾಗಿ ಕೇಳಿದ್ದೇನೆ. ಕರ್ಣಾಟಕ ಏಕೀಕರಣವಾಗಬೇಕು. ಒಂದಲ್ಲ ಒಂದು ರೀತಿಯಲ್ಲಿ ಆಗಿಯೇ ಆಗುತ್ತದೆ ಎಂದು ನನ್ನ ಭಾವನೆ.

''ಧರಣಿ ಮಂಡಲ ಮಧ್ಯದೊಳಗೆ ಮೆರೆವದೈವತ್ತಾರು ಕರ್ಣಾಟ ದೇಶದಿ ಇರುವ ಕಾಳಿಂಗನೆಂಬ ಗೊಲ್ಲನ ಪರಿಯನಾನೆಂತು ಪೇಳ್ವೆನು'' ಎಂಬ ವಿಶಾಲ ಕರ್ಣಾಟಕವಾದರೆ, ನಮ್ಮ ಮಹಾರಾಜರು ಕರ್ಣಾಟಕ ಸಿಂಹಾಸನಾಧೀಶ್ವರರಾಗುತ್ತಾರೆ. ಆಗ ನಮ್ಮ ಭಾವನೆ ದೊಡ್ಡದಾಗುತ್ತದೆ, ದೇಶ ದೊಡ್ಡದಾಗುತ್ತದೆ, ಸಂಪತ್ತು ಹೆಚ್ಚುತ್ತದೆ, ದೇಶಾಭಿವೃದ್ಧಿಯಾಗುತ್ತದೆ. ದೇಶದಲ್ಲಿ ಆಡಳಿತ ಸೂತ್ರಗಳನ್ನು ವಹಿಸಿಕೊಂಡಿರುವವರು ಹೆಚ್ಚಿನ ವಿಶಾಲ ಮನೋಭಾವನೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ, ನಮ್ಮ ಶ್ರೀಮನ್ಮಹಾರಾಜರವರ ಧರ್ಮಕೀರ್ತಿಯು ಹೆಚ್ಚುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಹಿಂದೆ ನಮ್ಮ ರಾಜ್ಯ ತಿರುಪತಿ, ಕಂಚಿ, ಕಾಳಹಸ್ತಿ ದೇಶಗಳನ್ನೆಲ್ಲಾ ಒಳಗೊಂಡಿತ್ತು. ಟಿಪ್ಪುವಿನ ಕಾಲದಲ್ಲಿ ನಮ್ಮ ದೇಶ ಇದುವರೆಗೆ ಹಬ್ಬಿತ್ತು. ಕರ್ಣಾಟಕ ಏಕೀಕರಣದಿಂದ ನಮ್ಮ ದೇಶದಲ್ಲಿ ಸಂಪದಭಿವೃದ್ಧಿಯುಂಟಾಗುತ್ತದೆ ಮತ್ತು ಕೈಗಾರಿಕಾಭಿವೃದ್ಧಿ ಆಗುವುದಲ್ಲದೆ ಅರಣ್ಯಸಂಪತ್ತು ಹೆಚ್ಚಾಗುತ್ತದೆ ಮತ್ತು ಖನಿಜ ಸಂಪತ್ತು ಹೆಚ್ಚುತ್ತದೆ. ನಮಗೆ ಹೆಚ್ಚಿಗೆ ಎರೆಭೂಮಿ ಸಿಕ್ಕುತ್ತದೆ. ಸಾಹುಕಾರರ ಸಂಪರ್ಕ ಹೆಚ್ಚಾಗುತ್ತದೆ. ಅದರಿಂದ ಬೇಕಾದಷ್ಟು ದ್ರವ್ಯ ಸಂಪಾದನೆ ಮಾಡಬಹುದು. ನಮ್ಮ ದೇಶದಲ್ಲಿ ಹೆಚ್ಚಿನ ದ್ರವ್ಯ ಸಂಪಾದನೆ ಮಾಡಿ ದೇಶಕ್ಕೆ ಬೇಕಾದಷ್ಟು ಉತ್ಪತ್ತಿ ಮಾಡಲು ಕಾರಣವಾಗುತ್ತದೆ. ದೇಶ ಮುಂದುವರಿಯಬೇಕಾದರೆ ಜನರು ಸಂಕುಚಿತ ಮನೋಭಾವನೆಯನ್ನು ಬಿಟ್ಟು ದೂರದೃಷ್ಟಿಯಿಂದ ಮತ್ತು ಎಲ್ಲಾ ದೇಶಗಳನ್ನೊಳಗೊಂಡು ವಿಶಾಲ ದೃಷ್ಟಿಯಿಂದ ನೋಡಬೇಕೆಂಬುದೇ ನನ್ನ ಆಶಯ. ಯಾರೇ ಆಗಲೀ ಕರ್ಣಾಟಕಕ್ಕೆ ಬರುತ್ತಾರೆ ಎಂದು ಹೇಳಿದರೆ ಬೇಡ ಎಂದು ಹೇಳಕೂಡದು. ಜೊತೆಗೆ ಬರುತ್ತೇವೆ ಎಂದು ಹೇಳುವವರನ್ನು ಜೊತೆಗೆ ಕರೆಯದಿರುವುದು ಯಾವ ಧರ್ಮದಲ್ಲಾಗಲಿ ಯಾವ ನೀತಿಯಲ್ಲಾಗಲಿ ಯಾವ ಶಾಸ್ತ್ರದಲ್ಲಾಗಲಿ ಹೇಳಿಲ್ಲ. ಇನ್ನು ಅಕ್ಕಪಕ್ಕದವರನ್ನು ಸೇರಿಸಿಕೊಂಡು ನಮ್ಮ ದೇಶವನ್ನು ದೊಡ್ಡದು ಮಾಡಿಕೊಳ್ಳುವುದಕ್ಕೆ ಯೋಚನೆ ಮಾಡಬೇಕು. ಕರ್ಣಾಟಕ ಏಕೀಕರಣವಾದರೆ ನಾವು ಕೆಟ್ಟುಹೋಗುತ್ತೇವೆಂದು ಅನೇಕ ಸಂದರ್ಭಗಳಲ್ಲಿ ಬರೀ ಕೋಮುವಾರು ಭಾವನೆಯಿಂದ ಹೇಳುತ್ತಾ ಹೋಗುತ್ತಿದ್ದಾರೆ. ಇದು ಯಾವ ಜಾತಿಗೂ ಸಂಬಂಧಪಟ್ಟದ್ದು ಅಲ್ಲ. ಈ ವಿಷಯವನ್ನು ಒಂದು ವಿಶಾಲದೃಷ್ಟಿಯಿಂದ ನೋಡಬೇಕು. ಸಂಕುಚಿತ ಮನೋಭಾವನೆಯಿಂದ ನೋಡಕೂಡದು. ನನಗೆ ಶಂಖ ಹೇಳುವ ಮಾತು ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ,

''ಶರನಿಧಿ ಎನ್ನಯಪಿತ, ಹಿರಿಅಣ್ಣ ಚಂದ್ರ, ಮಹಾ
ಲಕ್ಷ್ಮಿ ಎನ್ನ ಅಗ್ರಜಳು, ಈರೇಳು ಭುವನವ ಸಲಹುವ
ಹರಿ ಎನಗೆ ಭಾವ, ಇನಿತಾಪ್ತರಿರಲಾಗಿ, ತಿರಿವವನ
ಬಾಯೊಳಗೆ ಸಿಲುಕಿ ಬಿಡಿಸುವವರಾರನು ಕಾಣೆನೆಂದು
ಶಂಖ ಬುಡುರುತ್ತಿಹುದು ಕೇಳ್ ಮುರಾರಿಲೇಶಾ ॥''

ಬ್ರಿಟಿಷರ ಕೈಯಿಂದ ನಮ್ಮ ದೇಶವನ್ನು ಬಿಡಿಸಿಕೊಂಡಿದ್ದೇವೆ. ನಮ್ಮ ದೇಶ ನಮ್ಮ ಕೈಯಲ್ಲಿದೆ. ಅಕ್ಕಪಕ್ಕದವರನ್ನು ಸೇರಿಸೋಣ. ನಮ್ಮ ಭಾವನೆ ವಿಶಾಲದೃಷ್ಟಿಯಿಂದ ಕೂಡಿರಲಿ. ಸಂಕುಚಿತಮನೋಭಾವದ ದೃಷ್ಟಿ ಬೇಡ. ಸಭೆಯ ಮುಂದೆ ಯಾವುದಾದರೂ ವಿಷಯ ಚರ್ಚೆಗೆ ಬಂದರೆ ಅದರಮೇಲೆ ನಮ್ಮ ಅಭಿಪ್ರಾಯವನ್ನು ಕೊಡುವಾಗ ನಾವು broad views ಇಟ್ಟುಕೊಂಡು ಯೋಚನೆ ಮಾಡಿ ನಮ್ಮ ಅಭಿಪ್ರಾಯವನ್ನು ಕೊಡಬೇಕು. ಇವೊತ್ತಿನದಿವಸ ಕನ್ನಡ ಭಾಷೆಯನ್ನು ಮಾತನಾಡುವವರೆಲ್ಲರೂ ನಮ್ಮ ಜೊತೆಯಲ್ಲಿ ಸೇರಬೇಕು ಎಂಬ ಪ್ರಶ್ನೆ ಬಂದಿದೆ. ಅದರಮೇಲೆ ಅನೇಕ ಮಹನೀಯರಿಂದ ಉಪಯುಕ್ತವಾದ ಸಲಹೆಗಳನ್ನು ಪಡೆಯಬಹುದು. ನಾವು ಅವರ ಸಲಹೆಗಳನ್ನು ಹಾಗೆ ಪಡೆದುಕೊಂಡು ದೇಶವನ್ನು ದೊಡ್ಡದಾಗಿಯೂ ಮಾಡಬಹುದು ನಮ್ಮ ದೇಶವನ್ನು ವಿಸ್ತಾರ ಮಾಡಿದಂತಾಗುವುದೇ ಅಲ್ಲದೆ ನಮ್ಮ ದೇಶಕ್ಕೆ ಅವಶ್ಯಕವಾಗಿ ಬೇಕಾದ ಬಂದರು ದೊರಕಿದಂತಾಗುತ್ತದೆ. ಕರ್ಣಾಟಕ ಏಕೀಕರಣವಾಗಿ ಬಟ್ಕಲ್ ರೇವು ನಮಗೆ ದೊರೆತರೆ ವಾಣಿಜ್ಯ ದೃಷ್ಟಿಯಿಂದ ಬಹಳ ಅನುಕೂಲವಾದಂತಾಗುತ್ತದೆ. ಈಗಿನ ದೇಶದ ರಚನೆ

ನೋಡಿದರೆ ಪಾವಗಡದ ಮಧ್ಯದಲ್ಲಿ ಮಡಕಶಿರವೆಂಬ ಒಂದು ಕೋನ ಇದೆ. ನಕ್ಷೆಯಲ್ಲಿ ನೋಡಿದರೆ ಶಿರಸ್ಸೆಲ್ಲೋ ಇದ್ದು ದೇಹಕ್ಕೂ ಅದಕ್ಕೂ ಸಂಬಂಧವಿಲ್ಲದಂತಿರುತ್ತದೆ. ಹೀಗಿರುವಾಗ ಮಡಕಶಿರವನ್ನು ಸೇರಿಸಿಕೊಳ್ಳುವುದು ಸೂಕ್ತವಲ್ಲವೇ? ಈಗ ಅನೇಕ ವಿಧಗಳಲ್ಲಿ ಮಡಕಶಿರಕ್ಕೆ ತೊಂದರೆಯಿರುವುದನ್ನು ಕಾಣುತ್ತಿದ್ದೇವೆ. ಒಂದು ಬಸ್ಸನ್ನೂ ಸಲೀಸಾಗಿ ಬಿಡುವುದಿಲ್ಲ. ಇಂಥ ಕಷ್ಟಗಳನ್ನು ತಪ್ಪಿಸಬೇಕಾದದ್ದು ಅಗತ್ಯ.

ಅಲ್ಲದೆ ಇನ್ನೊಂದು ದೃಷ್ಟಿಯಿಂದಲೂ ನೋಡಬಹುದು. ಹರಿಜನರಂತೂ ಕರ್ಣಾಟಕ ಏಕೀಕರಣಕ್ಕೆ ಎಂದೂ ವಿರೋಧವಾಗಿಲ್ಲ. ಆದಿಕರ್ಣಾಟರು ಆದಿಯಿಂದಲೂ ಕರ್ಣಾಟಕರೇ. ಆದ್ದರಿಂದ ಕರ್ಣಾಟಕವಾಗಬೇಕೆಂದು ಒತ್ತಾಯ ಮಾಡುವವರು ನಾವು. ಕರ್ಣಾಟಕ ಏಕೀಕರಣವಾಗುವುದರಲ್ಲಿ ನಮ್ಮಿಂದ ಯಾವ ಅಡ್ಡಿಯೂಬರಲಾರದು.

ಅಲ್ಲದೆ, ನಾವು ಸುಮ್ಮನೆ ವಿರೋಧಿಸಿದರೂ ನ್ಯಾಯವಾಗಿ ಆಗಬೇಕಾದ ಕರ್ಣಾಟಕ ಆಗಿಯೇ ಆಗುತ್ತದೆ. ಕರ್ಣಾಟಕದ ಪ್ರಶ್ನೆಯಿರಲಿ, ಜವಾಬ್ದಾರಿ ಸರ್ಕಾರ ತಾನಾಗಿಯೇ ಅದು ಬರುತ್ತದೆಂದು ಕನಸಿನಲ್ಲಾದರೂ ತಿಳಿದಿದ್ದೆವೆ? ಸುಮ್ಮನೆ ಹೋರಾಟ, ಚಳವಳಿ ನಡೆಯುತ್ತಿತ್ತು. 1936 ನೆಯ ಇಸವಿಯಿಂದ ಹೊಡೆದಾಟ ನಡೆಯಿತು. ಕೊನೆಗೆ ಒಂದು ದಿವಸ ರಾತ್ರಿಯೋರಾತ್ರಿ ಬ್ರಿಟಿಷರು ಬಿಟ್ಟು ಹೊರಟು ಹೋದರು. ಆಗ ಪ್ರತಿಯೊಬ್ಬರೂ ನಾನು ಹೇಳಲಿಲ್ಲವೇ, ನಾನು ಹೇಳಲಿಲ್ಲವೇ ಎಂದು ಹೇಳಿಕೊಳ್ಳುತ್ತಿದ್ದರು. ಹಾಗೆಯೇ ಕರ್ಣಾಟಕವಾದಮೇಲೆ ಎಲ್ಲಾ ಜನರೂ ಹಾಗೆಯೇ ಹೇಳುತ್ತಾರೆ. ಆದ್ದರಿಂದ ಕರ್ಣಾಟಕ ಏಕೀಕರಣವಾಗಬೇಕೆಂದು ನನ್ನ ಸಲಹೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ (ಚಿಂತಾಮಣಿ) — ಸ್ವಾಮಿ, ರಾಜ್ಯಗಳ ಪುನರ್ವಿಂಗಡಣೆಯ ಸಂಬಂಧದಲ್ಲಿ ಇದುವರೆಗೂ ಅನೇಕ ಭಾಷಣಗಳು ನಡೆದಿವೆ. ಈ ವಿಚಾರದಲ್ಲಿ, ಮೊದಲನೆಯದಾಗಿ ಸರ್ಕಾರದವರು ಶೇಷಾದ್ರಿಯವರ ಸಮಿತಿಯನ್ನು ರಚನೆ ಮಾಡಿ ಅಂಕಿ ಅಂಶಗಳನ್ನು ಕ್ರೋಢೀಕರಿಸಿ ನಮಗೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಬೇಕಾದದ್ದು ನನ್ನ ಕರ್ತವ್ಯ. ಏಕೆಂದರೆ ಮೈಸೂರು ದೇಶದ ಜನತೆಯ ಜವಾಬ್ದಾರಿಯನ್ನು ವಹಿಸಿಕೊಂಡಿರುವ ನಮ್ಮ ಸರ್ಕಾರ ಜನತೆಯ ಹಿತವನ್ನು ಕಾಪಾಡಲು ಈ ಕಮಿಟಿಯನ್ನು ಏರ್ಪಡಿಸಿ ಅವರಿಂದ ಅಂಕಿ ಅಂಶಗಳ ವರದಿಯನ್ನು ತರಿಸಿಕೊಟ್ಟು ಬಹಳ ಮಟ್ಟಿಗೆ ಸಹಾಯ ಮಾಡಿದೆ.

ಮೈಸೂರು ದೇಶವನ್ನು ವಿಸ್ತಾರ ಮಾಡಬೇಕೆಂದು ಒಂದು ಕಡೆ ಚರ್ಚೆಯಾಗುತ್ತಿದೆ, ಇನ್ನೊಂದು ಕಡೆ ಇಬ್ಭಾಗ ಮಾಡಬೇಕು ಎಂಬ ಪ್ರಶ್ನೆಯೂ ಬಂದಿದೆ. ಏಕೆಂದರೆ ಭಾಷೆಯ ಆಧಾರದ ಮೇಲೆ ದೇಶವನ್ನು ಕಟ್ಟಬೇಕೆಂದು ನಾವು ಯಾವಾಗ ಪ್ರಯತ್ನ ಪಡುತ್ತಿದ್ದೇವೋ ಆಗ್ಗೆ ಪ್ರದೇಶ ವಿಸ್ತಾರವಾಗುವ ಹಾಗೆ ಇಬ್ಭಾಗವಾಗಲೂಬೇಕು. ಕನ್ನಡ ರಾಜ್ಯ ಕಟ್ಟಿದರೆ ಬೇರೆ ಭಾಷೆ ಆಡತಕ್ಕವರಿಗೆ ಖಂಡಿತ ಇಲ್ಲಿ ಅನುಕೂಲಗಳು ದೊರೆಯುವುದಿಲ್ಲವೆಂಬುದು ಸ್ಪಷ್ಟವಾಗಿದೆ.

ಸಾಮಾನ್ಯವಾಗಿ ಇದುವರೆಗೂ ನಮ್ಮ ಮೈಸೂರು ದೇಶ ಬಹಳ ಮಟ್ಟಿಗೆ ಮುಂದುವರಿದಿದೆ, ಪ್ರಗತಿದಾಯಕವಾಗಿದೆಯೆಂದು ನಾವೆಲ್ಲಾ ಎಷ್ಟೋ ಸಂತೋಷಪಡುತ್ತಿದ್ದೇವೆ. ಎಲ್ಲಾ ಭಾಷೆಗಳನ್ನಾಡತಕ್ಕ ಜನರೂ ಒಗ್ಗಟ್ಟಿನಿಂದ ಇಷ್ಟು ದಿವಸವೂ ಇದ್ದೇವೆ. ಈಗ ಭಾಷೆಯ ಮೇಲೆ ರಾಜ್ಯ ಕಟ್ಟಬೇಕೆಂದರೆ ಆಗ ಖಂಡಿತವಾಗಿಯೂ ಬೇರೆ ಭಾಷೆಗಳನ್ನಾಡತಕ್ಕವರಿಗೆ ಅನಾನುಕೂಲವಾಗುತ್ತದೆಂದು ನಾನು ಭಾವಿಸುತ್ತೇನೆ.

ಎರಡು ಕರ್ಣಾಟಕಗಳಾಗಲಿ ಎಂದು ಇನ್ನು ಕೆಲವು ಸ್ನೇಹಿತರು ಅಭಿಪ್ರಾಯಪಟ್ಟರು. ಇದರಲ್ಲಿ ನನ್ನ ಅಭಿಪ್ರಾಯ ಇಷ್ಟೆ. ಮೈಸೂರ ಮೈಸೂರಿನ ಹಾಗೆಯೇ ಇರಲಿ, ಬೇರೆ ಕನ್ನಡ ಮಾತನಾಡುವ ಪ್ರದೇಶಗಳು ತಾವೇ ಒಂದುಗೂಡಿ ಒಂದು ಪ್ರಾಂತ್ಯವಾಗುವುದರಲ್ಲಿ ತಪ್ಪೇನಿದೆ? ಇಂಡಿಯಾ ದೇಶದಲ್ಲಿ ಎರಡು ಕರ್ಣಾಟಕಗಳು ಇವೆಯೆಂದು ಹೆಮ್ಮೆಪಡುವ ಸಂದರ್ಭ ಕೂಡ ಇದೆ. ಆಡಳಿತದ ದೃಷ್ಟಿಯಿಂದಲೂ ಇದು ಚೆನ್ನಾಗಿರುತ್ತದೆಂದು ಹೇಳುತ್ತೇನೆ. ಹಿಂದೆ ಆಂಧ್ರ ಪ್ರಾಂತ್ಯದ ಮಸೂದೆ ಬಂದಿದ್ದಾಗ ಶ್ರೀ ಪಟ್ಟಾಭಿರಾಮಯ್ಯರವರು ಈ ರೀತಿ ದೊಡ್ಡ ರಾಜ್ಯಗಳನ್ನು ಕಟ್ಟಲು ನಾನು ಒಪ್ಪುವುದಿಲ್ಲ, ಮಹಾತ್ಮ ಗಾಂಧಿಯವರ ಅಭಿಪ್ರಾಯ ಹೀಗಿರಲಿಲ್ಲ, ಆಡಳಿತದ ಹಿತದೃಷ್ಟಿಯಿಂದ ಚಿಕ್ಕ ಚಿಕ್ಕ ಯೂನಿಟ್ಟುಗಳಾಗಿರಬೇಕೆಂಬುದು ಅವರ ಅಭಿಪ್ರಾಯವಾಗಿತ್ತು ಎಂದು ವಾದಿಸಿದರು. ಈಗ ಈ ರೀತಿ ಅಭಿಪ್ರಾಯ ಕೊಡುತ್ತಾರೆ. ಇದು ನನಗೆ ಅರ್ಥವಾಗಲಿಲ್ಲ. ಆಡಳಿತ ಹಿತದೃಷ್ಟಿಯಿಂದ ರಾಜ್ಯಗಳು ಚಿಕ್ಕದಾಗಿದ್ದರೆ ಅಧಿಕಾರವರ್ಗದವರು ಜನರನ್ನು ಅರ್ಥ ಮಾಡಿಕೊಂಡು ಅವರಿಷ್ಟದಂತೆ ವಿಶ್ವಾಸದಿಂದ ರಾಜ್ಯ ನಡೆಸತಕ್ಕ ಅವಕಾಶವಿರುತ್ತದೆಂಬ ಅಭಿಪ್ರಾಯವೂ ಮಹಾತ್ಮಾಜೀಯವರಲ್ಲಿ ಮೂಡಿತ್ತೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಆ ಸನ್ನಿವೇಶ ಹೋಗಿ ದೊಡ್ಡ ಸಂಸ್ಥಾನ ಮಾಡಬೇಕೆಂಬ ವಾದ ಬರುತ್ತಿದೆ. ಇದು ನನಗೆ ಅರ್ಥವಾಗುತ್ತಿಲ್ಲ. ಅನೇಕ ಮಾನ್ಯ ಸ್ನೇಹಿತರು ಹೇಳಿದರು, ಕಾಂಗ್ರೆಸ್ ಅನೇಕ ಸಂದರ್ಭಗಳಲ್ಲಿ ಈ ತತ್ವವನ್ನು ಒಪ್ಪಿಕೊಂಡು ಭಾಷಾವಾರು ಪ್ರಾಂತ್ಯ ರಚನೆ ಮಾಡಬೇಕೆಂದು ನಿರ್ಣಯವನ್ನು ಕೂಡ ಮಾಡಿದೆ' ಈಗ ಅದರಂತೆ ನಡೆದುಕೊಳ್ಳಬೇಕಾದುದು ಯುಕ್ತವೆಂದು ಹೇಳಿದರು. ಆಗಿದ್ದ ಸಂದರ್ಭದಲ್ಲಿ ಇಂಥ ವಾಗ್ದಾನಗಳನೇಕವನ್ನು ಕಾಂಗ್ರೆಸ್ಸಿನವರು ಮಾಡಿದರು. ಅವೆಲ್ಲವನ್ನೂ ಈಗ ಕಾಂಗ್ರೆಸ್ಸಿನವರು ನಡೆಸಿಲ್ಲ. ಆಗಿನ ಕಾಲದಲ್ಲಿ ಇಂಗ್ಲಿಷರನ್ನು ಈ ರಾಜ್ಯದಿಂದ ಓಡಿಸಲು ಅನೇಕ ವಿಧವಾಗಿ ಸನ್ನಿವೇಶಕ್ಕೆ ತಕ್ಕಂತೆ ಭಾಷಣಗಳನ್ನು ಮಾಡಬೇಕಾಗಿತ್ತು. ಆ ರೀತಿ ಮಾಡಿ ಸ್ವಾತಂತ್ರ್ಯ ಸಂಪಾದನೆ ಮಾಡಿದರು. ಈಗ ಅದರಂತೆಯೇ ಎಲ್ಲದರಲ್ಲೂ ನಡೆಯುತ್ತಿಲ್ಲ. ಆದ್ದರಿಂದ ಈಗಿನ ಸಂದರ್ಭದಲ್ಲಿ ಆ ಭಾಷಣಗಳನ್ನು ಉದಹರಿಸಿ ನಮಗೆ ಯಾವುದು ಬೇಕೋ ಅದನ್ನು ಉಪಯೋಗಿಸಿಕೊಳ್ಳುವುದು ಚೆನ್ನಾಗಿಲ್ಲ. ಒಂದು ಉದಾಹರಣೆ ಹೇಳುವುದಾದರೆ ಶ್ರೀ ಇಮಾಂರವರು ವಿರೋಧಪಕ್ಷದ ನಾಯಕರಾಗಿ ವಾದ ಮಾಡುತ್ತಾ ಕಾಂಗ್ರೆಸ್ಸಿನ ತತ್ವವನ್ನು ಪ್ರತಿಯೊಂದು ಸಾರಿಯೂ ವಿರೋಧಿಸುತ್ತಿದ್ದವರು ಇದರಲ್ಲಿ ಮಾತ್ರ ಕಾಂಗ್ರೆಸ್ ತತ್ವವನ್ನು ಎತ್ತಿ ಹಿಡಿಯುತ್ತಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಕಾಂಗ್ರೆಸ್ ತತ್ವವೂ ನಮ್ಮ ತತ್ವವೂ ಒಂದೇ ಆಗಿದ್ದರೆ ನಾವೆಂದಿಗೂ ವಿರೋಧಿಸುವುದಿಲ್ಲ. ನಮ್ಮ ತತ್ವಕ್ಕೆ ವಿರೋಧವಾಗಿದ್ದರೆ ಮಾತ್ರ ವಿರೋಧಿಸುತ್ತೇವೆ ಅಷ್ಟೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಸಮಯ ಬಂದಾಗ ವಿರೋಧಿಸುವ ಮನೋಭಾವವೆಂದು ನಾನು ಹೇಳುತ್ತೇನೆ. ಶ್ರೀ ಪಟ್ಟಾಭಿರಾಮಯ್ಯರವರು ಇನ್ನೊಂದು ವಾದವನ್ನು ನಮ್ಮ ಮುಂದಿಟ್ಟರು.

(ಶ್ರೀ ಎಂ. ಸಿ. ಆಂಜನೇಯರೆಡ್ಡಿ.)

ಮೈಸೂರು ದೇಶ ಒಂದು ಚಿಕ್ಕ ದೇಶವಾಗಿದ್ದು 11-12 ಜನರು ಮಾತ್ರ ಇಲ್ಲಿಂದ ಪಾರ್ಲಿಮೆಂಟಿಗೆ ಹೋಗುತ್ತಿದ್ದರೆ ಅವರಿಂದ ಏನೂ ಸಾಧಿಸಲು ಸಾಧ್ಯವಾಗುವುದಿಲ್ಲ, ನಮ್ಮ ಜನಸಂಖ್ಯೆ ಎರಡು ಕೋಟಿಯಿದ್ದು ಹೆಚ್ಚು ಜನ ಇಲ್ಲಿಂದ ಹೋದರೆ ತಕ್ಕ ಮಟ್ಟಿಗೆ ಪ್ರಭಾವವನ್ನು ಬೀರಬಲ್ಲದು ಎಂದು ಹೇಳಿದರು. 500 ಜನ ಸದಸ್ಯರಿರತಕ್ಕ ಪಾರ್ಲಿಮೆಂಟಿನಲ್ಲಿ 11 ಜನ ಸದಸ್ಯರಿದ್ದು ಏನು ಸಾಧನೆ ಮಾಡುತ್ತಾರೋ 22 ಜನರಿದ್ದರೂ ಅದನ್ನೇ ಸಾಧನೆ ಮಾಡುತ್ತಾರೆ ಅಷ್ಟೆ.

ಆಮೇಲೆ, ಬೊಂಬಾಯಿಗೆ ಸೇರಿರತಕ್ಕ ಕರ್ಣಾಟಕದಲ್ಲಿ ಕನ್ನಡ ಮಾತನಾಡುವವರಿಗೆ ಬಹಳ ಅನಾನುಕೂಲವಾಗಿ ಕನ್ನಡಿಗರೆಂದರೆ ಬಹಳ ಉದಾಸೀನ ಮಾಡುತ್ತಾರೆಂದು ಇಲ್ಲಿ ಭಾಷಣಗಳಾದುವು. ಸ್ವಾಮಿ, ಈಗ ಪ್ರಜಾಸರ್ಕಾರ ಬಂದಿರುವಾಗ ನಮ್ಮ ರಾಜ್ಯಾಂಗದ ರೀತ್ಯಾ ಇಂತಹ ಅನ್ಯಾಯಗಳು ಏನೇ ಇರಲಿ ಅದನ್ನು ಪಾರ್ಲಿಮೆಂಟಿನಲ್ಲಿ ಎತ್ತಿ ಸಾಧನೆ ಮಾಡುವುದಕ್ಕೆ ಅವಕಾಶವಿದೆ. ಅಂಥ ಅನ್ಯಾಯಗಳಾಗುತ್ತಿದ್ದರೆ ಅದನ್ನು ಪಾರ್ಲಿಮೆಂಟಿನಲ್ಲಿ ತಂದು ತಕ್ಕ ಪರಿಹಾರ ಹೊಂದಬಹುದು. ಆದ್ದರಿಂದ ಆ ದೃಷ್ಟಿಯಿಂದ ಅನಾನುಕೂಲವಾಗಿದೆಯೆಂದು ನಾನು ಒಪ್ಪುವುದಿಲ್ಲ. ಬೊಂಬಾಯಿ ಒಂದು ದೊಡ್ಡ ಪ್ರಾಂತ್ಯವಾಗಿ ಇರುವುದರಿಂದ ಆಡಳಿತದಲ್ಲಿ ಸ್ವಲ್ಪ ಅನ್ಯಾಯ, ಅನಾನುಕೂಲಗಳಾಗಿರಬಹುದು. ಅಷ್ಟೇ ಹೊರತು ಕನ್ನಡ ಮಾತನಾಡುವವರೆಂದು ಹೇಳಿ ಯಾವ ಅನ್ಯಾಯವೂ ಅನಾನುಕೂಲವೂ ಆಗಿರುವುದಿಲ್ಲ. ಆ ರೀತಿ ಅನ್ಯಾಯಗಳಾಗಿದ್ದಿದ್ದರೆ ಅಲ್ಲಿ ಮಂತ್ರಿ ಉಪಮಂತ್ರಿ ಸ್ಥಾನಗಳಂತಹ ದೊಡ್ಡದೊಡ್ಡ ಪದವಿಗಳಿಗೆ ಕನ್ನಡಿಗರಿಗೆ ಅವಕಾಶವಾಗುತ್ತಿತ್ತೇನು ? ಆದಕಾರಣ ಅಂಥ ಪಕ್ಷಪಾತಗಳು ನಡೆಯುತ್ತಿರಲಾರವು. ಏನಿದ್ದರೂ ದೊಡ್ಡ ಪ್ರಾಂತ್ಯವಾಗಿರುವುದರಿಂದ ಜನರು ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲದೆ ತೊಂದರೆಯಾಗಬಹುದೇ ಹೊರತು ಅನ್ಯಥಾ ಆಗಿರಲಾರದೆಂದು ನಾನು ಭಾವಿಸುತ್ತೇನೆ. ಹೀಗಿರುವಾಗ ಕೇವಲ ಒಂದುಕೋಟಿ ಪ್ರಜಾಸಂಖ್ಯೆಯಿಟ್ಟುಕೊಂಡು ಸುವ್ಯವಸ್ಥಿತವಾಗಿ ಆಡಳಿತ ನಡೆಸಿಕೊಂಡು ಬರುತ್ತಿರುವ ನಮ್ಮ ಮೈಸೂರು ಸಂಸ್ಥಾನದಲ್ಲಿ ಈ ವಿಷಯವನ್ನು ಹಚ್ಚಿಕೊಂಡು ಒಬ್ಬರಿಗೊಬ್ಬರು ವಿರೋಧವಾಗಿ ಮಾತನಾಡುವ ಕಹಿಸನ್ನಿವೇಶ ಹೇಗೆ ಬಂದಿತೋ ಅರ್ಥವಾಗಲಿಲ್ಲ. ದೊಡ್ಡರಾಜ್ಯ, ದೊಡ್ಡ ಸಂಪತ್ತು ಸಿಕ್ಕುವ ಸಂದರ್ಭದಲ್ಲಿ ಅದನ್ನು ಬೇಡ ಎಂದು ಹೇಳುವುದು ಸಂಕುಚಿತ ಭಾವನೆಯೆಂದು ನಮ್ಮ ಮಿತ್ರರು ಹೇಳಿದರು. ನಾನು ಹೇಳುವುದಾದರೋ, ಚೆನ್ನಾಗಿರುವವರ ಮನಸ್ಸು ಕೆಡಿಸುವುದಕ್ಕೆ ಆ ಮಿತ್ರರೇಕೆ ಪ್ರಯತ್ನಪಡುತ್ತಾರೋ ಗೊತ್ತಿಲ್ಲ. ಅವರು ಹೇಳುವಂತೆ ಭಾಷೆಯಮೇಲೆ ಮೈಸೂರನ್ನು ದೊಡ್ಡದು ಮಾಡುವುದಕ್ಕೆ ಹೋದರೆ ಖಂಡಿತವಾಗಿ ತೆಲುಗು ಮಾತನಾಡುವ 20 ಲಕ್ಷ ಜನ ತೆಲುಗು ಪ್ರಾಂತ್ಯಕ್ಕೆ ಹೋಗಲೂ ಪ್ರಯತ್ನಪಡುತ್ತಾರೆ. ಆಂಧ್ರರು ಆಗಲೇ ಇದಕ್ಕಾಗಿ ಪ್ರಯತ್ನಪಡುತ್ತಲೂ ಇದ್ದಾರೆ. ಆ ಬಗ್ಗೆ ಒಂದು ನಕ್ಷೆಯನ್ನು ಕೂಡ ಮಾಡಿದ್ದಾರೆ. ಆದ್ದರಿಂದ ಕನ್ನಡಿಗರು ಕನ್ನಡ ಭಾಷೆಯಮೇಲೆ ಸಂಸ್ಥಾನ ಮಾಡಹೊರಟರೆ ಆಗ ತೆಲುಗರೂ ಬೇರೆ ಹೋಗುತ್ತಾರೆ.

ಈ ಎಲ್ಲ ದೃಷ್ಟಿಯಿಂದ ಮೈಸೂರು ಮೈಸೂರಾಗಿಯೇ ಇರಬೇಕು. ಯಾವರೀತಿಯಿಂದಲಾದರೂ ಮೈಸೂರನ್ನು ವಿಸ್ತರಿಸಬೇಕೆಂಬ ಅಗತ್ಯವಿದ್ದರೆ ಅದಕ್ಕೆ ಪ್ಲೆಬಿಸೈಟ್ ತೆಗೆದುಕೊಳ್ಳಬೇಕೆಂದು ನನ್ನ ಮಿತ್ರರು ಆಗಲೇ ಹೇಳಿದ್ದಾರೆ. ಅದಕ್ಕೆ ಕೆಲವರು ಜನತೆಗೆ ಈ ದೊಡ್ಡ ಪ್ರಶ್ನೆಯನ್ನು ತೀರ್ಮಾನಮಾಡತಕ್ಕ ಶಕ್ತಿಯಿಲ್ಲವೆಂದು ಅಭಿಪ್ರಾಯಪಟ್ಟರು. ಪ್ಲೆಬಿಸೈಟ್ ತೆಗೆದುಕೊಂಡಾಗ ವೋಟ್ ಕೊಡುವುದಕ್ಕೆ ಗೊತ್ತಾಗುವುದಿಲ್ಲವೆಂದು ಹೇಳಿದರು. ಆ ರೀತಿಯಾಗಿ ಗೊತ್ತಿಲ್ಲವೆಂದು ಒಪ್ಪುವುದಾದರೆ ಅಂಥ ಕೈಲಾಗದ ಜನರಿಂದ ಚುನಾಯಿತರಾಗಿ ಬಂದಿರುವ ನಾವುಗಳು ಪ್ರತಿನಿಧಿಗಳೆಂದು ಹೇಳಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಜನರಲ್ಲಿ ಮತ ತೆಗೆದುಕೊಂಡರೆ ಇವೊತ್ತು ಶೇಕಡ 80ರಷ್ಟು ಜನ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ಖಂಡಿತ ಹೇಳುತ್ತಾರೆ. ಆದ್ದರಿಂದ ಇಂಥ ದೊಡ್ಡ ಪ್ರಶ್ನೆಯು ಒಂದು ಕೋಟಿ ಜನಗಳ ಭವಿಷ್ಯವನ್ನು ರೂಪಿಸತಕ್ಕ ಪ್ರಶ್ನೆಯಾದ್ದರಿಂದ ಜನತೆಯು ಎದುರಿನಲ್ಲಿಯೇ ಇಟ್ಟು ಜನತೆಯ ಅಭಿಪ್ರಾಯದಮೇಲೆ ತೀರ್ಮಾನಮಾಡುವುದು ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ. ಮೈಸೂರು ಮೈಸೂರಾಗಿಯೇ ಉಳಿಯುವುದು ಸೂಕ್ತವೆಂದು ನಾನು ಹೇಳುತ್ತೇನೆ.

2-30 P.M.

*ಶ್ರೀ ಆರ್. ಅನಂತರಾಮ್ (ಚಾಮರಾಜಪೇಟೆ).- ಮಾನ್ಯ ಅಧ್ಯಕ್ಷರೇ, ಈಗಾಗಲೇ ನನ್ನ ಸ್ನೇಹಿತರುಗಳಪೈಕಿ ಕೆಲವರು ಈ ಏಕೀಕರಣದ ಬಗ್ಗೆ ಪರವಾಗಿಯೂ ಕೆಲವರು ವಿರೋಧವಾಗಿಯೂ ಈ ಶೇಷಾದ್ರಿಸಮಿತಿಯ ವರದಿಮೇಲೆ ಮಾತನಾಡಿದ್ದಾರೆ. ಈ ವಿಷಯ ಬಹಳ ದಿವಸಗಳಿಂದಲೂ ಚರ್ಚೆಯಾಗುತ್ತಿದೆ ಈ ವಿಷಯ ಬಹಳ ಪ್ರಾಮುಖ್ಯವಾದಂಥದು. ಈಗ ನಮ್ಮ ಕೇಂದ್ರ ಸರ್ಕಾರದವರು ಈ ನಾನಾಸಂಸ್ಥಾನಗಳನ್ನು ಪುನರ್ವಿಂಗಡಣೆ ಮಾಡತಕ್ಕ ಸಂಬಂಧವಾಗಿ ಒಂದು ಹೈಪವರ್ ಕಮಿಟಿಯನ್ನು ನೇಮಕ ಮಾಡಿದ್ದಾರೆ. ಹಾಗೆ ನೇಮಕ ಮಾಡಲ್ಪಟ್ಟಿರುವಂಥ ಸಮಿತಿಯವರು ಈಗಾಗಲೇ ಈ ಆಂಧ್ರ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಕನ್ನಡ ಪ್ರಾಂತ್ಯಗಳಲ್ಲಿ ಸಂಚಾರಮಾಡಿ ನಾನಾ ಜನರ, ಸಂಘಗಳ, ಸಂಸ್ಥೆಯವರ ಅಭಿಪ್ರಾಯಗಳನ್ನು ಶೇಖರಣೆ ಮಾಡಿಕೊಂಡು ಹೋಗಿದ್ದಾರೆ. ಉತ್ತರದೇಶದಲ್ಲಿ ಆ ಕಡೆ ಕೂಡ ಈ ಪುನರ್ವಿಂಗಡಣೆಯ ಬಗ್ಗೆ ಗಮನ ಕೊಟ್ಟಿದ್ದಾರೆ. ಆದ್ದರಿಂದ ಇದೊಂದು ಗಂಭೀರ ದೊಡ್ಡ ಸಮಸ್ಯೆ. ಇದನ್ನು ನಾವು ಬಹಳ ಕೂಲಂಕಷವಾಗಿ ವಿಮರ್ಶೆಮಾಡಬೇಕಾಗಿವೆ. ಈಗಾಗಲೇ ನನ್ನ ಕೆಲವು ಸ್ನೇಹಿತರು ಮೈಸೂರು ಈಗಿರುವಂಥ ಮೈಸೂರಾಗಿ ಉಳಿಯಬೇಕೆಂದು ಹೇಳಿದ್ದಾರೆ. ಮತ್ತೆ ಕೆಲವರು ಈ ಮೈಸೂರು ದೇಶದ ಅಕ್ಕಪಕ್ಕದಲ್ಲಿರುವ ಕನ್ನಡ ಮಾತನಾಡುವ ಜನಗಳಿರತಕ್ಕಂಥ ಪ್ರದೇಶಗಳೆಲ್ಲಾ ಒಟ್ಟಿಗೆ ಮೈಸೂರಿಗೆ ಸೇರಿ ಅಖಂಡ ಮೈಸೂರಾಗಬೇಕೆಂದು ಹೇಳಿದ್ದಾರೆ. ಈಗಿರತಕ್ಕಂಥ ಮೈಸೂರು ಕೇವಲ ಎಂಟು ಹತ್ತು ಜಿಲ್ಲೆಗಳಿಂದ ಕೂಡಿದ್ದಾಗಿದೆ. ಈ ಹಿಂದೆ ಇದ್ದಂಥ ಮೈಸೂರೋ, ಆಗ ಇದಕ್ಕೆ ಇಡೀ ಕರ್ಣಾಟಕ ಪ್ರದೇಶವೆಲ್ಲಾ ಸೇರಿ ಒಂದು ದೊಡ್ಡ ರಾಜ್ಯವಾಗಿತ್ತು. ಹೀಗೆ ಒಂದು ದೊಡ್ಡ ರಾಜ್ಯವಾಗಿದ್ದಂಥ ಆಗಿನ ಅಖಂಡ ಕರ್ಣಾಟಕ ಪ್ರಾಂತ್ಯವನ್ನೂ ಇತ್ತೀಚೆಗೆ 2-3 ಭಾಗವಾಗಿ ಹರಿದು ಹಂಚಿಬಿಟ್ಟಿದ್ದಾರೆ. ಕಾರಣವೇನೆಂದರೆ ಕರ್ಣಾಟಕದ ಭಾವನೆಯುಳ್ಳಂಥ ಮತ್ತು ವಾತ್ಸಲ್ಯವುಳ್ಳಂಥ ಜನಗಳು ಯಾರೂ ಉಳಿಯಬಾರದೆಂಬ ಭಾವನೆಯಿಂದಲೂ ಇದನ್ನು ಹರಿದು ಹಂಚಿಬಿಟ್ಟರು.

ಇಂಗ್ಲೀಷಿನವರು ಇಲ್ಲಿ ಆಡಳಿತ ಮಾಡುತ್ತಿದ್ದಾಗ, ಅವರನ್ನು ಇಲ್ಲಿಂದ ದೇಶಬಿಟ್ಟು ಹೊರಡಿ ಎಂದು ಹೇಳುತ್ತಿದ್ದಾಗ ನಾವೆಲ್ಲರೂ ಈ ಅಖಂಡ ಕನ್ನಡ ನಾಡಿನ ವೈಭವವನ್ನು ಎಷ್ಟುಸಾರಿ ನಾವುನಾವುಗಳೇ ಮಾತನಾಡಿಕೊಂಡಿಲ್ಲ? ಆ ದಿವಸ ಹಾಗೆ ಆ ದೇಶವನ್ನು ಆ ಇಂಗ್ಲೀಷರು ಹರಿದು ಹಂಚಿದಕಾರಣದಿಂದ ನಮ್ಮನ್ನು ಬಿಟ್ಟು ಅಗಲಿ ಹೋದ ನಮ್ಮ ಅಣ್ಣತಮ್ಮಂದಿರುಗಳನ್ನೆಲ್ಲಾ ಪುನಃ ನಾವುಗಳು ಒಟ್ಟಾಗಿ ಕೂಡಿಸಬೇಕೆಂದು ಎಷ್ಟುಸಾರಿ ಮಾತನಾಡಿಕೊಂಡಿಲ್ಲ? ಹೀಗೆಲ್ಲಾ ನಾವುಗಳೇ ಈ ಸ್ವಾತಂತ್ರ್ಯ ಬರುವ ಮುನ್ನ ಕನ್ನಡ ಬಂಧುಗಳೆಲ್ಲಾ ಒಂದಾಗಬೇಕೆಂದು ಹೇಳುತ್ತಿದ್ದಂಥವರು, ಈಚೆಗೆ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಈ ರಾಜ್ಯಗಳ ಪುನರ್ವಿಂಗಡಣೆ ಆಗಬೇಕೆಂದು ಕೆಲವರೂ ಆಗಬಾರದೆಂದು ಕೆಲವರೂ ವಾದಮಾಡಲು ಪ್ರಾರಂಭಿಸಿದ್ದಾರೆ. ಈ ಹಿಂದೆ ಅಂದರೆ ಭಾರತಕ್ಕೆ ಸ್ವಾತಂತ್ರ್ಯ ಬರುವ ಮುನ್ನ ನಮ್ಮ ಹಿಂದೂಸ್ಥಾನದಲ್ಲಿ ಸುಮಾರು 560 ಚಿಕ್ಕಪುಟ್ಟ ಸಂಸ್ಥಾನಗಳಿದ್ದುವು. ಚಿಕ್ಕಪುಟ್ಟ ಸಂಸ್ಥಾನಗಳನ್ನೆಲ್ಲಾ ಒಟ್ಟುಕೂಡಿಸಿ ಅಲ್ಲಲ್ಲೇ ಒಂದೊಂದು ದೊಡ್ಡ ದೇಶವನ್ನು ಮಾಡಬೇಕೆಂಬ ಆಸೆ ಆ ನಮ್ಮ ಸರ್ದಾರ್ ವಲ್ಲಭಾಯಿ ಪಟೇಲರಿಗೆ ಇತ್ತು. ಅದೇ ರೀತಿಯಾಗಿ ಈ ಹಿಂದೆ ಅವರು ಕೆಲವು ದೇಶಗಳನ್ನು ಒಂದರಲ್ಲೊಂದು ವಿಲೀನೀಕರಣಮಾಡಿದರು. ಆದರೆ ಏನೋ ಕೆಲವು ಬೇರೆ ಕಾರ್ಯಕಲಾಪಗಳ ದೃಷ್ಟಿಯಿಂದ ಆಗ ಈ ಮದ್ರಾಸ್, ಟ್ರಾವಂಕೂರ್, ಕೊಚಿನ್, ಹೈದ್ರಾಬಾದ್ ಮತ್ತು ಕಾಶ್ಮೀರ ಇತ್ಯಾದಿ ಕೆಲವುಗಳನ್ನು ವಿಲೀನೀಕರಣ ಮಾಡುವ ಪ್ರಶ್ನೆಯನ್ನು ಮುಂದಕ್ಕೆ ಹಾಕಿದರು. ಹರಿದು ಹಂಚಿದ್ದಂಥ ಪ್ರದೇಶಗಳು ಅಂದರೆ ಆಗಿನ ಬ್ರಿಟಿಷ್ ಇಂಡಿಯಾದಲ್ಲಿ ಸೇರಿದ್ದ ನಾನಾಭಾಷೆಯ ಪ್ರದೇಶಗಳನ್ನು ಆಯಾ ಭಾಷೆ ಆಧಾರದ ಮೇಲೆ ಪುನರ್ವಿಂಗಡಣೆ ; ಮಾಡಬೇಕೆಂಬ ಉದ್ದೇಶ ಅವರಿಗೆ ಬಹಳವಾಗಿತ್ತು. ಹಾಗೆ ಮಾಡಿದ್ದರೆ ನಮಗೆ ಬಹಳ | ಒಳ್ಳೆಯದಾಗುತ್ತಿತ್ತು. ಆದರೆ ಆದಿವಸ ಅವರು ಈ ಪ್ರಶ್ನೆಯನ್ನು ಕೈಬಿಟ್ಟಿದ್ದರಿಂದ ಈ ದಿವಸ ಆ ಕಾಶ್ಮೀರದ ಪ್ರಶ್ನೆ ಹಾಗೆಯೇ ಉಳಿದಿದೆ. ಭಾಷೆಯ ಆಧಾರದಮೇಲೆ ಈ ಹರಿದು ಹಂಚಿರುವಂಥ ಪ್ರದೇಶಗಳೆಲ್ಲಾ ಪುನಃ ಒಂದಾಗಬೇಕೆಂದು ಅನೇಕರು ಹೇಳುತ್ತಿದ್ದಾರೆ. ಅಂತೂ ಹಾಗೆ ಈ ವಿಲೀನೀಕರಣ ಆಗಲೇಬೇಕಾಗಿದೆ. ಈ ಹಿಂದೆಯೇ ಅಂದರೆ ದೇಶಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲೇ ಈ ವಿಲೀನೀಕರಣ ಪ್ರಶ್ನೆಯನ್ನು ಅವರು ನೆರವೇರಿಸಿದ್ದಿದ್ದರೆ ಇತ್ತೀಚೆಗೆ ಹೈದರಾಬಾದಿನಲ್ಲಿ ನಡೆದಂಥ ಪೋಲೀಸ್ ಆಕ್ಷನ್ ಇತ್ಯಾದಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದ ಪ್ರಶ್ನೆಯಾಗಲಿ ಅಥವಾ ಹೀಗೆ ಈ ದಿವಸ ಕೆಲವರು ಇದಾಗಬೇಕು, ಮತ್ತೆ ಕೆಲವರು ಇದಾಗಬಾರದು ಎಂದು ಹೇಳಿ ವಾದ ಮಾಡತಕ್ಕಂಥ ಸಂದರ್ಭಗಳು ಒಂದೂ ಇಲ್ಲದೆ ಇವೆಲ್ಲಾ ನಿರ್ಮೂಲವಾಗಿ ಹೋಗುತ್ತಿದ್ದುವು. ಆದರೆ ಆ ದಿವಸ ಆ ಸರ್ದಾರ್ ಪಟೇಲರು ಕೆಲವನ್ನು ಮಾತ್ರ ವಿಲೀನಿಕರಣ ಮಾಡಿ ಮತ್ತೆ ಕೆಲವನ್ನು ಹಿಂದಕ್ಕೆ ಹಾಕಿದರು. ಆ ಒಂದುಕಾರಣದಿಂದ ಈ ನಮ್ಮ ಮೈಸೂರು ಇತ್ಯಾದಿ ಇನ್ನೂ ಕೆಲವು ಭಾಗಗಳು ಹೀಗೆ ಉಳಿಯಲು ಅವಕಾಶವಾಯಿತು. ಆದರೆ ಸರ್ದಾರ್ ವಲ್ಲಭಾಯಿ ಪಟೇಲರು ನಮ್ಮ ಮೈಸೂರಿನ ಪ್ರಶ್ನೆಯನ್ನು ಏತಕ್ಕಾಗಿ ಹಿಂದಕ್ಕೆ ಹಾಕಿದರು ಎಂದರೆ ಇಲ್ಲಿಯ ಪ್ರಜೆಗಳು ಹೇಗೂ ಮುಂದುವರಿಯುತ್ತಿದ್ದಾರೆ, ಇಲ್ಲಿಯ ಮಹಾರಾಜರೂ ಕೂಡ ಪುರೋಗಾಮಿಗಳಾಗಿದ್ದಾರೆ ಎನ್ನುವಂಥ ಒಂದು ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಪ್ರಶ್ನೆಯನ್ನು ಕೆಲವು ದಿನಗಳ ತನಕ ಹಿಂದಿಟ್ಟರು. ಆದರೆ ಅವರಲ್ಲಿ ಈ ರಾಜ್ಯಗಳನ್ನು ಭಾಷಾವಾರು ಆಧಾರದಮೇಲೆ ಪುನರ್ವಿಂಗಡಣೆ ಮಾಡಬೇಕೆಂಬ ಆಸೆ ತುಂಬ ಇತ್ತು. ಹಾಗೆಯೇ ಅವರು ಮಾಡುತ್ತಲೂ ಇದ್ದರು. ಆದರೆ ಅವರು ಅಷ್ಟರಲ್ಲೇ ಕಣ್ಮರೆಯಾಗಿ ಹೋದರು. ಅದಕಾರಣ ಈಗಲೂ ಕೂಡ ಅವರ ಆಸೆಯ ಪ್ರಕಾರವೇ ನಾವೂಸಹ ಈದಿವಸ ಈ ದೇಶಗಳನ್ನೆಲ್ಲಾ ಭಾಷೆಯ ಆಧಾರದಮೇಲೆಯೇ ಪುನರ್ವಿಂಗಡಣೆ ಮಾಡಬೇಕಾಗಿದೆ. ನಮ್ಮ ದೇಶಕ್ಕೆ ಈ ಸ್ವಾತಂತ್ರ್ಯ ಬಾರದ ಮುನ್ನ ಮತ್ತು ಈ ದೇಶಕ್ಕೆ ಇಂಗ್ಲೀಷರು ಬಾರದಮುನ್ನ ದೇಶ ಹೀಗಿತ್ತೆಂಬ ವಿಚಾರದಲ್ಲಿ ಚಾರಿತ್ರಿಕ ಹಿನ್ನೆಲೆಯೂ ಕೂಡ ಸರ್ವರಿಗೂ ತಿಳಿದಿದ್ದೇ ಆಗಿದೆ. ಈ ಹಿಂದೆ ದೇಶಕ್ಕೆ ಸ್ವಾತಂತ್ರ್ಯ ಬಂದ ತಕ್ಷಣವೇ ಹಿಂದೂದೇಶದ ರಾಜ್ಯಾಂಗ ರಚನೆಗೋಸ್ಕರವಾಗಿ ಶ್ರೀ ಬಾಬೂ ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಲಾಗಿತ್ತು. ಆಗ ಈ ದೇಶಗಳನ್ನೆಲ್ಲಾ ಭಾಷಾ ಆಧಾರದಮೇಲೆ ಪುನರ್ವಿಂಗಡಣೆ ಮಾಡಬೇಕೆಂಬ ವಿಚಾರ ಆ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ಆಗ ಈ ದೇಶವನ್ನು ಪುನಃ ಭಾಷಾವಾರು ಆಧಾರದಮೇಲೆ ನಿರ್ಮಾಣಮಾಡಬೇಕೆಂಬ ತೀರ್ಮಾನಕ್ಕೆ ಬಂದು, ಆಗ ಈ ಉದ್ದೇಶಕ್ಕಾಗಿಯೇ ಮತ್ತೊಂದು ಸಮಿತಿಯನ್ನು ಸಹ ಆಗ ಏರ್ಪಾಡುಮಾಡಿದರು. ಅದೇರೀತಿಯಾಗಿ ಈ ರಾಜ್ಯಗಳ ಪುನರ್ವಿಂಗಡಣೆ ಕೂಡ ಆಗಬೇಕೆಂದು ಆ ರಾಜ್ಯಾಂಗದಲ್ಲಿ ಕೂಡ ಒಂದು ಕ್ಲಾಜನ್ನು ಅಡಕ ಮಾಡಿರುತ್ತಾರೆ. ಆ ಕಾನೂನಿಗನುಗುಣವಾಗಿಯೇ ಆಗ ಧಾರ್‌ಸಮಿತಿ ಎಂಬ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆ ಧಾರ್‌ಸಮಿತಿಯವರು ಕೆಲವುಕಾಲ ಕುಳಿತು ಈ ಬಗ್ಗೆ ಅನೇಕ ವಿಚಾರಗಳನ್ನೆಲ್ಲಾ ಆಲೋಚನೆಮಾಡಿ ಸರ್ಕಾರಕ್ಕೆ ಒಂದು ರಿಪೋರ್ಟನ್ನು ಕೊಟ್ಟಿರುತ್ತಾರೆ. ಆದರೆ ಆಗ ಆ ಮೊದಲನ ಸಮಿತಿಯವರು ಭಾಷೆಯ ಆಧಾರದಮೇಲೆ ದೇಶವನ್ನು ತಾತ್ಕಾಲಿಕವಾಗಿ ಸದ್ಯಕ್ಕೆ ಪುನರ್ವಿಂಗಡಣೆ ಮಾಡುವುದು ಬೇಡ ಎಂದು ಹೇಳಿದ್ದರು. ಆದರೆ ಅವರು ಈ ಮೈಸೂರಿನ ವಿಚಾರದಲ್ಲಿ ಬೇರೆ ರೀತಿಯಾಗಿ ಹೇಳಿದ್ದಾರೆ. ಈ ನಮ್ಮ ಮೈಸೂರ ನೆರೆನಾಡಿನೊಡನೆ ಸೇರಿದರೆ ಬಹಳ ಸುಲಭವಾಗಿ ಕರ್ಣಾಟಕಪ್ರಾಂತ್ಯ ನಿರ್ಮಾಣವಾಗುತ್ತದೆ ಎಂದು ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ಅವರು ತಮ್ಮ ವರದಿಯಲ್ಲಿ ಏನು ಹೇಳಿದ್ದಾರೆಂಬುದನ್ನೇ ಓದಿಬಿಟ್ಟರೆ ಬಹಳ ಚೆನ್ನಾಗಿರುತ್ತೆಂದು ನನ್ನ ಮನಸ್ಸಿಗೆ ಹೊಳೆಯುತ್ತದೆ. ಆದುದರಿಂದ ನಾನೀಗ ಅದನ್ನು ಓದುತ್ತೇನೆ. The Dhar Commission submitted its report on 10-12-48, wherein it said :

> "If Mysore had been willing to join the Union, it could easily have formed a nucleus round which the Kannada speaking districts of Madras and Bombay could be brought together and reared into an administratively convenient Province. . . ."

ನಾನು ಹೀಗೆ ಈ ವಿಚಾರಗಳನ್ನೆಲ್ಲಾ ಒತ್ತಿಒತ್ತಿ ಏತಕ್ಕಾಗಿ ಓದಿ ಹೇಳುತ್ತಿದ್ದೇನೆ ಎಂದರೆ ಈಗಾಗಲೇ ಮಾತನಾಡತಕ್ಕಂಥ ನನ್ನ ಕೆಲವು ಮಾನ್ಯಸ್ನೇಹಿತರು

(ಶ್ರೀ ಆರ್. ಅನಂತರಾಮನ್.)

ಗಳು ಅವರ ತೀರ್ಮಾನವನ್ನು ಗೌರವಿಸಬೇಕೆಂಬ ದೃಷ್ಟಿಯಿಂದಲೂ ಮತ್ತು ಹೀಗೆ ದೇಶ ವಿಶಾಲವಾದರೆ ಆಡಳಿತ ದೃಷ್ಟಿಯಿಂದ ತೊಂದರೆಯಾಗುತ್ತದೆ, ಆದ ಕಾರಣ ಹೀಗೆ ದೇಶ ವಿಶಾಲವಾಗುವುದು ಬೇಡ ಎಂದು ವಾದಿಸುವುದು ಸರಿಯಾದದ್ದಲ್ಲ ಎನ್ನುವುದನ್ನು ಸೂಚಿಸಲೂ ನಾನು ಈ ವಾಕ್ಯಗಳನ್ನು ಒತ್ತಿ ಹೇಳುತ್ತಿದ್ದೇನೆ: ಆ ವರದಿಯಲ್ಲಿ ಹೀಗೆ ಹೇಳಿದ್ದಾರೆ.—

> "It can be easily formed into an administratively convenient province, but the Mysore State does not appear to be yet ready to merge itself in Karnataka province and we cannot say whether public opinion or Government policy is prepared to merge Union territory into the Indian State."

ಈಗ ನಾವು ಈ ಸಮಸ್ಯೆಯನ್ನು ಇನ್ನೊಂದು ದೃಷ್ಟಿಯಿಂದ ನೋಡಿದಾಗ್ಯೂ ಕೂಡ ಈ ಪುನರ್ವಿಂಗಡಣೆ ಅಗತ್ಯವೆಂದೇ ಕಾಣುತ್ತದೆ. ಈ ಹಿಂದೆ ಇಂಡಿಯಾ ದೇಶದಲ್ಲಿ ವಿಂಗಡಿಸಲಾಗಿದ್ದಂಥ ಕೆಲವು ಭಾಗಗಳನ್ನು ಬ್ರಿಟಿಷ್ ಸ್ಟೇಟ್‌ಗಳೆಂದು ಕರೆಯಲಾಗುತ್ತಿತ್ತು. ಆ ಬ್ರಿಟಿಷ್ ಸ್ಟೇಟ್‌ಗಳ ಸ್ಥಾನಮಾನಗಳು ಈ ದೇಶೀಯ ಸಂಸ್ಥಾನಗಳಿಗಿಂತಲೂ ಹೆಚ್ಚಿನದಾಗಿತ್ತು. ಆಗ ನಾವು ಈ ರೀತಿ ಭಿನ್ನಭೇದಗಳಿಡುವುದು ಸರಿಯಾದುದಲ್ಲ ಎಂದು ಹೇಳುತ್ತಿದ್ದೆವು. ಧಾರ್ ಸಮಿತಿಯವರು ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣಕ್ಕೆ ಸಾಕಷ್ಟು ಉತ್ತೇಜನ ತೋರಿಸದೆ ಹೋದುದರಿಂದ ಆಗ ಮತ್ತೊಂದು ಸಮಿತಿಯನ್ನು ಅಂದರೆ ಜೆ. ವಿ. ಪಿ. ಎನ್ನತಕ್ಕಂಥ ಒಂದು ಸಮಿತಿಯನ್ನು ನೇಮಕ ಮಾಡಲಾಯಿತು. ಈ ಸಮಿತಿಯು ಜವಹರ್‌ಲಾಲ್ ನೆಹ್ರೂರವರೂ ಮತ್ತು ವಲ್ಲಭಾಯಿ ಪಟೇಲರೂ ಮತ್ತು ಪಟ್ಟಾಭಿ ಸೀತಾರಾಮಯ್ಯನವರೂ—ಹೀಗೆ ಮೂರು ಜನಗಳಿಂದ ಕೂಡಿದ್ದಾಗಿತ್ತು. ಈ ಮೂವರ ಸಮಿತಿಯ ವರದಿಯಲ್ಲಿ ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣದ ಬಗ್ಗೆ ಏನು ಹೇಳಿರುತ್ತಾರೆಂಬ ಅಂಶವನ್ನು ತಾವೆಲ್ಲರೂ ಈಗಾಗಲೇ ಓದಿರುತ್ತೀರಿ. ಈ ಮೂರು ಜನಗಳಿಂದ ಏರ್ಪಾಡಾಗಿರತಕ್ಕಂಥ ಸಮಿತಿಯವರು ಸರ್ಕಾರಕ್ಕೆ ತಾ॥ 10-12-1948 ರಲ್ಲಿ ಒಂದು ವರದಿಯನ್ನೊಪ್ಪಿಸಿದ್ದಾರೆ. ಈ ವರದಿಯಲ್ಲಿ ಅವರು ಆಂಧ್ರಪ್ರಾಂತ್ಯ ಕೂಡಲೇ ನಿರ್ಮಾಣವಾಗಬೇಕೆಂದು ಒಪ್ಪಿಕೊಂಡಿದ್ದಾರೆ. ಆಗ ಅವರು ಆಂಧ್ರ ಪ್ರಾಂತ್ಯವನ್ನು ಹೇಗೆ ನಿರ್ಮಾಣ ಮಾಡಿದರೋ ಅದೇ ರೀತಿ ಇನ್ನುಳಿದ ಬೇರೆಬೇರೆ ಭಾಷೆಗಳ ವಿಚಾರದಲ್ಲಿ ಸಹ ಬೇರೆಬೇರೆ ಯಾವ ಪ್ರಾಂತ್ಯ ನಿರ್ಮಾಣಗಳನ್ನು ಮಾಡೋಣವೆಂತಲೇ ಆ ವರದಿಯಲ್ಲಿ ಹೇಳಿದ್ದಾರೆ. 1946ನೆಯ ಇಸವಿ ನವೆಂಬರ್ ತಿಂಗಳು ತಾರೀಖು 2 ರಲ್ಲೋ ಅಥವಾ 3ರಲ್ಲೋ ಬೆಂಗಳೂರಿನಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನ ಜರುಗಿತು. ಅದು ಶ್ರೀಮಾನ್ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ದಿವಸ ಶ್ರೀಮಾನ್ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಈ ಅಖಂಡ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ಬಗ್ಗೆ ಒಂದು ಠರಾವು ಪಾಸಾಗಿರುತ್ತದೆ. ಆ ಠರಾವು ಬಹಳ ಮಹತ್ವಪೂರಿತವಾದದ್ದು. ಏತಕ್ಕೆಂದರೆ ನಾನೂ ಸಹ ಆ ದಿವಸ ಆ ಅಧಿವೇಶನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದೆ. ಆ ದಿವಸ ಭಾರಿ ಮಳೆ ಬಂದು ಜನಗಳು ಆ ಸಭೆಯಲ್ಲಿ ನಿಲ್ಲುವುದಕ್ಕೆ ಅಸಾಧ್ಯವಾಗಿತ್ತು. ಅಂಥ ಭಾರಿ ಮಳೆ ಬರುತ್ತಿದ್ದಾಗ್ಯೂ ಆ ಸ್ಥಳ ಬಿಟ್ಟು ಒಬ್ಬರೂ ಕದಲಲಿಲ್ಲ. ಆ ದಿವಸ ಜನರ ಮನಸ್ಸಿನಲ್ಲಿ ಅಂಥ ಒಂದು ದೃಢನಿಶ್ಚಯವಿದ್ದು ಈ ಸಮಸ್ಯೆಯನ್ನು ಬಗೆಹರಿಸಿದ್ದಾರೆ. ಅಲ್ಲಿ ನೆರೆದಿದ್ದಂಥ ಮಹಾ ಜನಸಂದಣಿಯಲ್ಲಿ ಪ್ರತಿಯೊಬ್ಬರಿಗೂ ನಮ್ಮ ಮೈಸೂರಿಗೆ ಅತಿ ಶೀಘ್ರವಾಗಿ ಜವಾಬ್ದಾರಿ ಸರ್ಕಾರ ಬಂದೇ ಬರುತ್ತದೆ, ಅದು ಬಂದತಕ್ಷಣವೇ ಈ ಭಾಷಾವಾರು ಪ್ರಾಂತ್ಯಗಳನ್ನು ನಿರ್ಮಾಣ ಮಾಡಲೇಬೇಕೆಂಬ ಒಂದು ದೃಢವಾದಂಥ ನಿಶ್ಚಯ ಮನಸ್ಸು ಆ ಜನರಲ್ಲೆಲ್ಲಾ ಇದ್ದಿತೆಂಬುದು ಕಂಡುಬರುತ್ತಿತ್ತು. ಆದುದರಿಂದಲೇ ಆ ದಿವಸ ಅಂಥ ದೊಡ್ಡ ಮಳೆ ಬರುತ್ತಿದ್ದಾಗ್ಯೂ ಜನರು ಅಲ್ಲೇ ಕುಳಿತು ಆ ಠರಾವನ್ನು ಪಾಸ್ ಮಾಡಿದರು ಮತ್ತು ಆ ದಿವಸವೇ ಆದಷ್ಟು ಬೇಗೆ ಈ ಅಖಂಡ ಕರ್ಣಾಟಕ ಸ್ಥಾಪನೆಯಾಗಲೇಬೇಕೆಂದು ಸರ್ವರೂ ಏಕ ಕಂಠದಿಂದ ನುಡಿದಿದ್ದಾರೆ. ಆ ದಿವಸ ಆ ಸಭೆಯಲ್ಲಿ ಬಹಳ ಜನಗಳು ಸೇರಿದ್ದರು. . . .

ಶ್ರೀ ಜೆ. ಮಹಮ್ಮದ್ ಇಮಾಂ.—ಹಾಗಿದ್ದರೆ ಆ ದಿವಸ ಆ ಸಭೆಯಲ್ಲಿ ಶ್ರೀ ಹುಚ್ಚಮಾಸ್ತಿಗೌಡರೂ ಇದ್ದರೆ? ಅವರೂ ಕೂಡ ಈ ಠರಾವಿಗೆ ಓಟ್ ಮಾಡಿದರೋ?

ಶ್ರೀ ಆರ್. ಅನಂತರಾಮನ್.—ಹೌದು. ಅವರೂ ಮಾಡಿದ್ದಾರೆ. ಅನಂತರ ಬೀರೂರಿನಲ್ಲಿ ಒಂದು ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನ ಜರುಗಿತು. ಆ ಅಧಿವೇಶನಕ್ಕೆ ನಾನೂ ಹೋಗಿದ್ದೆ. ಅಲ್ಲಿ ಇನ್ನೂ ಅನೇಕ ಮಾನ್ಯ ಸ್ನೇಹಿತರುಗಳೆಲ್ಲರೂ ಸೇರಿದ್ದರು. ಆ ಅಧಿವೇಶನದಲ್ಲಿ ಸಹ ಈ ಅಖಂಡ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ಬಗ್ಗೆ ಒಂದು ಠರಾವು ಬಂದು ಆ ಅಧಿವೇಶನದಲ್ಲಿ ಸಹ ಅದನ್ನು ಸರ್ವಾನುಮತದಿಂದ ಅನುಮೋದಿಸಲಾಗಿರುತ್ತದೆ. ಆಗಲೂ ಕೂಡ ಆ ಅಧಿವೇಶನದಲ್ಲಿ ಸೇರಿದ್ದ ಮಹನೀಯರೆಲ್ಲರೂ ಏಕಕಂಠದಿಂದ ಆ ಠರಾವಿಗೆ ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿರುತ್ತಾರೆ. ಇತ್ತೀಚೆಗೆ ನಮ್ಮ ಕಾಂಗ್ರೆಸ್ ಅಧ್ಯಕ್ಷರಾದಂಥ ಶ್ರೀಮಾನ್ ಎಸ್. ಚೆನ್ನಯ್ಯನವರು ಇಡೀ ಕರ್ಣಾಟಕದಲ್ಲೆಲ್ಲಾ ಹೋಗಿ ಅಲ್ಲಿ ತಿರುಗಾಡಿ ನೋಡಿಕೊಂಡು ಬಂದಿದ್ದಾರೆ. ಈ ಬಗ್ಗೆ ಅವರಾಗಲೇ ತಮ್ಮ ವರ್ಕಿಂಗ್ ಕಮಿಟಿಯಲ್ಲಿ ಒಂದು ತೀರ್ಮಾನಕ್ಕೆ ಬಂದಿರುತ್ತಾರೆ. ಈ ಹಿಂದೆಯೇ ಈ ಕಾಂಗ್ರೆಸ್ ಸಂಸ್ಥೆ ಯಾವ ಒಂದು ತತ್ವವನ್ನು ಅನುಮೋದಿಸಿ ಅದಕ್ಕನುಸಾರವಾಗಿ ಠರಾವುಗಳನ್ನು ಪಾಸ್ ಮಾಡಿರುತ್ತದೆಯೋ ಆ ಪ್ರಕಾರ ನಾವೀದಿವಸ ನಾವೆಲ್ಲರೂ ನಮ್ಮ ಆ ಹಿಂದಿನ ಮಾತಿನ ಪ್ರಕಾರ ನಮ್ಮ ವಚನವನ್ನು ಉಳಿಸಿಕೊಳ್ಳಲೇಬೇಕಾಗಿದೆ. ಅದರಂತೆ ನಾವು ಈ ದಿವಸ ನಡೆಯಲೇಬೇಕಾಗಿರುತ್ತೆಂದು ಅವರು ತಿಳಿಸಿಬಿಟ್ಟಿದ್ದಾರೆ. ಈ ವಿಚಾರವಾಗಿ ನಾನು ಈಗ ಅಷ್ಟು ಲಂಬಿಸಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇಷ್ಟೇ ಅಲ್ಲದೆ ನಮಗೆ ಸ್ವಾತಂತ್ರ್ಯ ಬಂದ ತರುವಾಯ ನಮ್ಮ ರಾಜ್ಯಾಂಗ ನಿರ್ಮಾಣ ಸಭೆಯು ಕೆಲಸ ಮಾಡುತ್ತಿದ್ದಾಗ ಸಹ ಆ ಸಭೆಯಲ್ಲಿ ಬಹಳ ಜವಾಬ್ದಾರಿಯುತರಾದಂಥ ಸದಸ್ಯರುಗಳಿದ್ದರು. ಆಗಲೂ ಕೂಡ ನಮ್ಮ ಈ ಮೈಸೂರು ರಾಜ್ಯಾಂಗಸಭೆಯಲ್ಲಿ ಈ ಬಗ್ಗೆ ಒಂದು ಠರಾವನ್ನು ತಂದು ನಮ್ಮ ಮೈಸೂರಿಗೆ ಅಕ್ಕಪಕ್ಕದಲ್ಲಿರುವ ನೆರೆಹೊರೆಯ ಕನ್ನಡ ಭಾಗಗಳು ನಮ್ಮ ಮೈಸೂರಿಗೆ ಸೇರಲು ಇಷ್ಟಪಡುವುದಾದರೆ ಅವರು ಸೇರಲು ಯಾವ ಅಭ್ಯಂತರವೂ ಇರಬಾರದೆಂದು ಆ ದಿವಸವೇ ಅದನ್ನು ಅನುಮೋದಿಸಿದ್ದಾರೆ. ಅದರಂತೆ ರಾಜ್ಯಾಂಗದಲ್ಲಿ ಒಂದು ಅವಕಾಶವನ್ನು

ಕೂಡ ಕಲ್ಪಿಸಿರುತ್ತಾರೆ. ಈ ವಿಚಾರ ತಮಗೆಲ್ಲರಿಗೂ ತಿಳಿದದ್ದೇ ಆಗಿದೆ. ಇದಾದ ತರುವಾಯ 1952 ರಲ್ಲಿ ಮಹಾಚುನಾವಣೆಗಳು ನಡೆಯಬೇಕಾಗಿ ಬಂದಂಥ ಕಾಲದಲ್ಲಿ ಎ.ಐ.ಸಿ.ಸಿ. ಯವರ ತೀರ್ಮಾನಕ್ಕನುಸಾರ ವಾಗಿ, ಆ ಎಲೆಕ್ಷನ್ ಮ್ಯಾನಿಫೆಸ್ಟೊದಲ್ಲಿ ಈ ಭಾಷಾ ವಾರು ಪ್ರಾಂತ್ಯಗಳ ನಿರ್ಮಾಣದ ಬಗ್ಗೆ 18ನೆಯ ಪುಟದಲ್ಲಿ ಹೀಗೆ ಹೇಳಿದ್ದಾರೆ. ಆಗ ನಾನು ಇಲ್ಲಿ ಮೇಯರ್ ಆಗಿದ್ದೆ. ಆಗ ಇಲ್ಲಿಗೆ ಕರ್ಣಾಟಕದಿಂದ ಶ್ರೀಮಾನ್ ಕಾರಂತ ವೆಂಕಟರಾಯರು, ಶ್ರೀಮಾನ್ ಎಸ್. ನಿಜಲಿಂಗಪ್ಪನವರು ಇತ್ಯಾದಿ ಅನೇಕ ಮಾನ್ಯ ಸದಸ್ಯರುಗಳು ಬಂದಿದ್ದರು. ಅವರೆಲ್ಲರೂ ಕರ್ಣಾ ಟಕ ಪ್ರಾಂತ್ಯವಾಗಲೇಬೇಕೆಂದು ಹೇಳಿದ್ದಾರೆ. ಆದರೆ ಈಗತಾನೆ ಕೆಲವರು ನನ್ನ ಸ್ನೇಹಿತರು ಇಲ್ಲಿ ಮಾತ ನಾಡುತ್ತ "ಇದೆಲ್ಲಾ ಸುಳ್ಳು, ಕಾಂಗ್ರೆಸ್ ಸಂಸ್ಥೆಯ ವರು ಈ ವಿಚಾರವಾಗಿ ಎಂದೂ ಕಮಿಟಿ ಮಾಡಿ ಕೊಂಡಿಲ್ಲ" ಎಂದು ಹೇಳಿದ್ದಕ್ಕಾಗಿ ನಾನೀಗ ಈ ತಪಶೀಲುಗಳನ್ನೆಲ್ಲಾ ಹೇಳಬೇಕಾಗಿಬಂತು.

Election Manifesto—page 15

> "A demand for redistribution of provinces on a linguistic basis has been persistently made in the south and west of India. The Congress expressed itself in favour of linguistic provinces many years ago. A decision on this question ultimately depends upon the wishes of the people concerned. While linguistic reasons have an undoubtedly a certain cultural and other importance, there are other factors also such as economic, administrative and financial, which have to be taken into consideration. Where such a demand represents the agreed views of the people concerned, the necessary steps prescribed by the Constitution including the appointment of a Boundary Commission should be taken."

ಜನತೆಯ ಅಭಿಪ್ರಾಯಬೇಕು ಎಂದು ಹೇಳು ತ್ತಿದ್ದಾರೆ. ಇದು ದೊಡ್ಡ ಸಮಸ್ಯೆ ಎಂದು ಮಾನ್ಯ ಸಭೆಯಲ್ಲಿ ಪ್ರತಿಯೊಬ್ಬರೂ ಒಪ್ಪಬೇಕು. ತಮ್ಮ ನ್ನೆಲ್ಲಾ ಎದುರುಹಾಕಿಕೊಂಡು ಕೆಲಸ ಮಾಡಬೇಕಲ್ಲ ಎಂದು ಸ್ನೇಹಿತರು ಹೇಳಿದ್ದಕ್ಕೋಸ್ಕರ ಇದನ್ನು ಹೇಳು ತ್ತಿದ್ದೇನೆ. ಒಂದು ಸಮಿತಿಯನ್ನು ನೇಮಿಸಿ, ಅಂಕಿ ಅಂಶಗಳನ್ನು ಶೇಖರಿಸಿದಮೇಲೆ ಈ ಸಭೆಯಲ್ಲಿ ಚರ್ಚಿಸುವುದು ಒಳ್ಳೆಯದು ಎಂದು ಈ ಸಭೆಯ ಸದಸ್ಯರು ಅಭಿಪ್ರಾಯಪಟ್ಟುದರ ಪರಿಣಾಮವಾಗಿ ಶೇಷಾದ್ರಿ ಸಮಿತಿಯನ್ನು ನಮ್ಮ ಸರ್ಕಾರದವರು ನೇಮಿಸಿದರು. ಈ ಸಮಿತಿಯಲ್ಲಿರುವ ನಿಪುಣರು ಕರ್ಣಾಟಕದ ಅನೇಕ ಭಾಗಗಳಿಗೆ ಹೋಗಿ ಅಂಕಿ ಅಂಶಗಳನ್ನು ತಿಳಿದುಕೊಂಡು ಬಂದರು. ಆದರೆ ಇನ್ನೂ ಹೆಚ್ಚಿಗೆ ಅಂಕಿಅಂಶಗಳನ್ನು ತಿಳಿದುಕೊಳ್ಳ ಬಹುದಾಗಿತ್ತು ಎಂದು ಶ್ರೀ ಕಂಠೀ ಮತ್ತು ಇತರ ಸ್ನೇಹಿತರು ಹೇಳಿದರು. ಈ ಸಂದರ್ಭದಲ್ಲಿ ಕರ್ಣಾಟಕ Provincial Congress ಕಮಿಟಿಯವರು ಒಂದು memorandum ಕೊಟ್ಟಿದ್ದಾರೆ. ಅವರೂ ಒಂದು ಕಮಿಟಿಯನ್ನು ನೇಮಿಸಿದ್ದರು. ಆ ಕಮಿಟಿಯನ್ನು ಅವರು ಕೇಳಿದೆ ಹೋದರು. ಅವರೂ ಸಹ ನಾವು ಬೇಕಾದರೆ ಅಷ್ಟು ಅಂಕಿಅಂಶಗಳನ್ನು ತಿಳಿಸುವುದಕ್ಕೆ ಪ್ರಯತ್ನಮಾಡುತ್ತೇವೆ, ನಮ್ಮ ಸಹಕಾರವನ್ನು ಕೊಡುವುದಕ್ಕೆ ಸಿದ್ಧರಾಗಿದ್ದೇವೆ ಎಂದು ಹೇಳಿದರು. ಆದರೆ ಮಾನ್ಯ ಸ್ನೇಹಿತರು ಅವರನ್ನು ಕೇಳಲಿಲ್ಲ. ಈ ಕಮಿಟಿ ಅಲ್ಲದೆ ಇನ್ನೂ ಎಷ್ಟೋ ಕಮಿಟಿಗಳು ಕರ್ಣಾ ಟಕ ಏಕೀಕರಣ ವಿಚಾರವಾಗಿ ಕೆಲಸಮಾಡುತ್ತಿವೆ. ಇವರು ಅವರ ಹತ್ತಿರ ಸಹ ಮಾತುಕತೆ ನಡೆಸಿದ್ದರೆ ಎಷ್ಟೋ ಅಂಕಿಅಂಶಗಳನ್ನು ತಿಳಿದುಕೊಳ್ಳಬಹು ದಾಗಿತ್ತು. ಬೊಂಬಾಯಿ, ಹೈದರಾಬಾದ್ ಮತ್ತು ಇತರ ಸರ್ಕಾರದವರೊಡನೆ ನೇರವಾಗಿ ಪತ್ರವ್ಯವ ಹಾರ ನಡೆಸಿ ಎಂಟು ಹತ್ತು ಕಡೆ ಒಂದು ತಿಂಗಳು ಪ್ರವಾಸಮಾಡಿ ಒಂದು ವರದಿ ಕೊಟ್ಟಿದ್ದಾರೆ. ಅವರು ಮನಸ್ಸು ಮಾಡಿದ್ದರೆ ಇನ್ನೂ ಹೆಚ್ಚಿನ ಅಂಕಿಅಂಶಗಳನ್ನು ಕೊಡಬಹುದಾಗಿತ್ತು. ಅವರು ಮನಸ್ಸು ಮಾಡಿಲ್ಲ. ಆದಾಗ್ಯೂ ಚಿಂತೆ ಇಲ್ಲ. ಕೊಟ್ಟಿರುವ ವರದಿಯ ಜೊತೆ ಯಲ್ಲಿ ಕರ್ಣಾಟಕ Provincial Congress ಸಮಿತಿ ಯವರು ಕೊಟ್ಟಿರುವ memorandum ಇದೆ. ಅದನ್ನು ನಾವು ಈ ವರದಿಯ ಜೊತೆಯಲ್ಲಿ ಓದಿದರೆ ವಿಚಾರಗಳು ತಿಳಿಯುತ್ತವೆ. ಕೆ.ಪಿ.ಸಿ.ಸಿ. ಏರ್ಪಡಿಸಿದ ಸಮಿತಿಗೆ ನಾನೂ ಒಬ್ಬ ಸದಸ್ಯನು. ಶ್ರೀ ಪಿ. ಆರ್. ರಾಮಯ್ಯನವರೂ ಒಬ್ಬರು. ನಾವು ಒಂದೆರಡು ಮೀಟಿಂಗ್‌ಗಳಲ್ಲಿ ಭಾಗವಹಿಸಿದ್ದೆವು, ಅಲ್ಲಿಯ ಜನರು memorandum ತಯಾರುಮಾಡಿದ್ದಾರೆ. ಅಂಕಿ ಅಂಶಗಳನ್ನು ಕೂಡಿಸುವುದಕ್ಕೆ ನೂರಾರು ಜನ ಉತ್ಸಾಹದಿಂದ ಕೆಲಸಮಾಡಿದ್ದಾರೆ, ಎಲ್ಲರೂ ಸರ್ಕಾರ ದವರೊಡನೆ ನೇರವಾಗಿ ಸಂಬಂಧ ಇಟ್ಟುಕೊಂಡು ಅಂಕಿಅಂಶಗಳನ್ನು ಸಂಗ್ರಹಿಸಿ memorandum ತಯಾರು ಮಾಡಿದ್ದಾರೆ. ಅದರಲ್ಲಿ ಎಷ್ಟೋ ಸತ್ಯವಾದ ವಿಚಾರಗಳಿವೆ. ಕೆಲವು ಸ್ನೇಹಿತರು ಅದು ಸಮರ್ಪಕ ವಾಗಿಯಾಗಿಲ್ಲವೆಂದು ಹೇಳುತ್ತಾರೆ. ಆದರೆ ರಿಪೋರ್ಟ್ ಚೆನ್ನಾಗಿದೆ. ಅದನ್ನು ಅನೇಕ ಮಾನ್ಯ ಸದಸ್ಯರು ಓದಿದ್ದಾರೆ. ಅದರಲ್ಲಿ ಈ ಏಕೀಕರಣ ಪ್ರಶ್ನೆಯ ಹಿನ್ನೆಲೆ ಕೊಟ್ಟಿರುವುದಲ್ಲದೆ historical ಮತ್ತು ಆರ್ಥಿಕ ವಿಚಾರದಮೇಲೆ ಬಹಳ ಚನ್ನಾಗಿ ಚರ್ಚೆ ಮಾಡಿದ್ದಾರೆ. ಈ ವಿಚಾರ Reorganisation ಸಮಿತಿಯವರು ಬಂದಂಥ ಸಂಬಂಧದಲ್ಲಿ ಒಂದು ಉತ್ತಮವಾದ memorandum ಕೊಡುವುದರಲ್ಲಿ ಎಷ್ಟೋ ಕ್ಲಿಷ್ಟ ಸಮಸ್ಯೆಗಳನ್ನು ವಿವರಿಸಿ ಅವುಗಳ ಪರಿಹಾರದಲ್ಲಿ ಅನುಕೂಲಮಾಡಿಕೊಡಬೇಕೆಂದು ಮಾಡಿ ದ್ದಾರೆ. ಇದನ್ನೂ ಸಹ ನಾವು ಗಮನಕ್ಕೆ ತಗೆದು ಕೊಳ್ಳಬೇಕಾದದ್ದು ನಮ್ಮ ಮುಖ್ಯ ಕರ್ತವ್ಯವಾಗಿದೆ. ಈಗ ಮೈಸೂರು ಏತಕ್ಕೆ ಇದ್ದ ಹಾಗೆ ಇರಬಾರದು, ಇತರ ದೇಶಗಳು ಬೇಕಾದರೆ ಪ್ರಾಂತಗಳನ್ನು ಮಾಡಿ ಕೊಳ್ಳಲಿ ಎಂದು ನಮ್ಮ ಸ್ನೇಹಿತರು ಹೇಳುತ್ತಾರೆ. ಉದಾಹರಣೆಗೆ ಮಹಾರಾಷ್ಟ್ರದವರನ್ನು ತಗೆದು ಕೊಳ್ಳಿ, ಅವರು ಮಹಾರಾಷ್ಟ್ರವಾಗಬೇಕೆಂದು ಹೊಡೆ ದಾಡುತ್ತಿದ್ದಾರೆ. ಅಲ್ಲಿ ಪಾರ್ಟಿಯವರೂ ಪ್ರತಿ ಯೊಬ್ಬ ಗಂಡಸೂ, ಹೆಂಗಸೂ ಒಗ್ಗಟ್ಟಿನಿಂದ ಸೇರಿ ಕೊಂಡು ಮಹಾರಾಷ್ಟ್ರಪ್ರಾಂತಕ್ಕೋಸ್ಕರ ಹೊಡೆ ದಾಡುತ್ತಿದ್ದಾರೆ. ಆಂಧ್ರ ದೇಶ ನೋಡಿ. ಅಲ್ಲಿ ಎಲ್ಲಾ ಪಾರ್ಟಿಗಳೂ ವಿಶಾಲ ಆಂಧ್ರವಾಗಬೇಕು, ಹೈದರಾ ಬಾದ್ ಒಡೆಯಬೇಕು, ಹೈದರಾಬಾದನ್ನು ರಾಜಧಾನಿ ಯನ್ನಾಗಿ ಮಾಡಬೇಕು, ಅಕ್ಕಪಕ್ಕದ ಪ್ರದೇಶಗಳನ್ನು

(ಶ್ರೀ ಆರ್. ಅನಂತರಾಮನ್.)

ಸೇರಿಸಬೇಕು ಎಂದು ಹೇಳುತ್ತಿದ್ದಾರೆ. ಕೇರಳ ಪ್ರಾಂತವಾಗಬೇಕು ಎಂದು ಕೆಲವರು ಹೇಳುತ್ತಿದ್ದಾರೆ. ತಮಿಳುನಾಡು ಏಕಪ್ರಾಂತವಾಗಿ ಉಳಿಯಬೇಕು ಎಂದು ಆಶೆಪಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮೈಸೂರು ಇದ್ದ ಹಾಗೆ ಇರುತ್ತದೆಯೇ, ಹೆಚ್ಚಿಸುವುದಕ್ಕೆ ಅವಕಾಶವಾಗುವುದಿಲ್ಲವೇ, ಅಥವಾ ಕಮ್ಮಿಯಾಗುವುದಕ್ಕೆ ಅವಕಾಶವಾಗುವುದಿಲ್ಲವೇ ಎಂಬುದನ್ನು ಯೋಚನೆಮಾಡಬೇಕು. ನಾವು ಸುಮ್ಮನೆ ಇದ್ದರೂ ವಿಶಾಲ ಮೈಸೂರು ಅಥವಾ ಕರ್ಣಾಟಕವಾಗಬಹುದು. ಹೈದರಾಬಾದ್ ಒಡೆಯುವ ಸಮಯ ಬಂದರೆ ಅಲ್ಲಿಯ ಮೂರು ಡಿಸ್ಟ್ರಿಕ್ಟುಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕು ? ಬೊಂಬಾಯಿನಲ್ಲಿರುವ ಮೂರು ಕರ್ಣಾಟಕ ಡಿಸ್ಟ್ರಿಕ್ಟುಗಳನ್ನು ಇಲ್ಲಿ ಇಡಬೇಕು. ಮದರಾಸಿನಲ್ಲಿರುವ ಒಂದೆರಡು ಡಿಸ್ಟ್ರಿಕ್ಟುಗಳು ಎಲ್ಲಿ ಹೋಗಬೇಕು ? ಇದು ದೊಡ್ಡ ಸಮಸ್ಯೆ. ಅಕ್ಕಪಕ್ಕದಲ್ಲಿ ತಮ್ಮ ತಮ್ಮ ಭಾಷೆಗಳನ್ನು ಆಧಾರವಾಗಿಟ್ಟುಕೊಂಡು ಪ್ರಾಂತ್ಯಗಳನ್ನು ರಚನೆ ಮಾಡಬೇಕು ಎಂದು ಹೇಳುತ್ತಿರುವಾಗ ಮೈಸೂರಿನಲ್ಲಿ ಕೆಲವರು ಬೇಡ ಎಂದು ಹೇಳದೆ ಇದ್ದರೂ ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಸಮಂಜಸವಾಗಿ ಉತ್ತರ ಕೊಟ್ಟು ಅವರ ಮನಸ್ಸನ್ನು ನಮ್ಮ ಕಡೆ ಒಲಿಸಿಕೊಳ್ಳಬೇಕು. ಕೆಲವರು ವಿರುದ್ಧ ಅಭಿಪ್ರಾಯಕೊಟ್ಟರೆ ಅವರು ನಮ್ಮ ಶತ್ರುಗಳೆಂದು ತಿಳಿಯಬಾರದು. ಅವರು ನಮ್ಮ ಅಣ್ಣತಮ್ಮಂದಿರು, ವಿವೇಕ ದೃಷ್ಟಿಯಿಂದ ಮತ್ತು ದೂರದೃಷ್ಟಿಯಿಂದ ನೋಡಿದರೆ ಮೈಸೂರು ಇದ್ದಹಾಗೆ ಇರಬೇಕೆಂದು ಹೇಳಲು ನಮ್ಮ ಮನಸ್ಸು ಒಪ್ಪುವುದಿಲ್ಲ. ಯಾವಾಗಲೂ ತೆರೆದ ಮನಸ್ಸು ಇರಬೇಕು. ಕರ್ಣಾಟಕ ಪ್ರಾಂತ ಬೇಡ, ಬೇಕು ಎಂಬ ಮನಸ್ಸು ಮಾಡಿಕೊಂಡು ಬರಬಾರದು. ಚರ್ಚೆಯಾದಮೇಲೆ ಇದು ಸರಿಯೋ ಅದು ಸರಿಯೋ ಎಂದು ವಿಮರ್ಶೆಮಾಡಿ ತೆರೆದ ಮನಸ್ಸಿನಿಂದ ಒಪ್ಪಿಕೊಳ್ಳೋಣ. ಬೆಂಗಳೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳು ಬೇಕು ಎಂದು ಆಂಧ್ರದ ಮಂತ್ರಿಮಂಡಲ ಮತ್ತು ಎಲ್ಲಾ ಪಾರ್ಟಿಗಳೂ ಕೇಳುತ್ತಿದ್ದಾರೆ. ಮೈಸೂರು ಇದ್ದ ಹಾಗೆ ಇರಬೇಕು. ಯಾವ ಭಾಗವನ್ನೂ ಬಿಟ್ಟುಕೊಡುವುದಕ್ಕೆ ಸಿದ್ಧವಾಗಿಲ್ಲ. ಮೈಸೂರನ್ನು ಉಳಿಸಿಕೊಳ್ಳಬೇಕು. ಇತರ ಪ್ರಾಂತಗಳಿಂದ ಬರತಕ್ಕ ಕನ್ನಡಿಗರನ್ನೂ ಸೇರಿಸಿಕೊಳ್ಳಬೇಕು. ವಿಶಾಲ ಆಂಧ್ರವಾಗಲಿ ಅಥವಾ ಮಹಾ ರಾಷ್ಟ್ರವಾಗಲಿ, ಕೇರಳವಾಗಲಿ ಅದು ಅವರ ಹಣೆಬರಹ ಎಂದು ನಾವು ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ಈ ಸಂದರ್ಭದಲ್ಲಿ ನಾವು ಬಹಳ ಹುಷಾರಾಗಿರಬೇಕು. ಮೈಸೂರಿನ ಒಂದು ಹಳ್ಳಿಯನ್ನೂ ಕಳೆದುಕೊಳ್ಳುವುದಕ್ಕೆ ನಾವು ಸಿದ್ಧರಾಗಿಲ್ಲ. ಸುತ್ತುಮುತ್ತಲಿರುವ ಕರ್ಣಾಟಕದ ಬಂಧುಗಳು ಸೇರುತ್ತೇವೆಂದು ಹೇಳಿದರೆ, ಅದನ್ನು ನಿರಾಕರಿಸಕೂಡದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅವನ್ನು ಹೇಗೆ ಉಳಿಸಿಕೊಳ್ಳುತ್ತೀರಿ ?

ಶ್ರೀ ಆರ್. ಅನಂತರಾಮನ್.—ಸುಮ್ಮನೆ ಇರುವುದು ಬೇಡ. ವಿರೋಧಿಸಿ ಇಲ್ಲವೇ ಅನುಮೋದಿಸಿ ಮಾತನಾಡಬೇಕು. ನಾವೆಲ್ಲ ಒಂದು ಮುಕ್ತಕಂಠದಿಂದ ಮೈಸೂರು ಇದ್ದಹಾಗೆಯೇ ಇರಬೇಕು ಎಂದು ಹೇಳಬೇಕು. ಇಲ್ಲವೇ ಮೈಸೂರು ಪ್ರಾಂತಕ್ಕೆ ಅಣ್ಣತಮ್ಮಂದಿರನ್ನು ಸೇರಿಸಿಕೊಳ್ಳಬೇಕು ಮತ್ತು ಮೈಸೂರಿನಿಂದ ಒಂದು ಹಳ್ಳಿಯನ್ನು ತೆಗೆಸಿಕೊಳ್ಳುವುದಕ್ಕೆ ಅವರಿಗೆ ಹಕ್ಕಿಲ್ಲ ಎಂದು ದೃಢಮನಸ್ಸಿನಿಂದ ಹೇಳಬೇಕು. ಕಾಂಗ್ರೆಸ್ಸಿನವರು ಇಂಡಿಯಾ ದೇಶಕ್ಕೆ ಸ್ವಾತಂತ್ರ್ಯ ಬರಬೇಕೆಂದು ಹೋರಾಡಿದರು. ಸತ್ಯಾಗ್ರಹಮಾಡುತ್ತಿದ್ದರು. ಮುಸ್ಲಿಂ ಲೀಗಿನವರು ಸುಮ್ಮನೆ ನಿಂತುಕೊಳ್ಳುತ್ತಿದ್ದರು. ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿದವರಿಗೆ ಮುಂದಕ್ಕೆ ಯಾವ ಸ್ಥಿತಿ ಆಯಿತು ಎಂದರೆ ಪಾಕೀಸ್ತಾನ ಮತ್ತು ಹಿಂದೂಸ್ಥಾನ ಎಂದು ಎರಡು ರಾಷ್ಟ್ರಗಳಾದವು. ನಾವುಗಳು ಈಗ ಬಹಳ ಹುಷಾರಿನಲ್ಲಿರಬೇಕ , ಮೈಸೂರಿನ ಯಾವ ಭಾಗವನ್ನೂ ಕಳೆದುಕೊಳ್ಳುವುದಕ್ಕೆ ಒಬ್ಬರೂ ಸಿದ್ಧರಾಗಿರಕೂಡದು. ಕೆಲವರು ನಮ್ಮ ಸ್ನೇಹಿತರು ಎರಡು ಕನ್ನಡ ಪ್ರಾಂತಗಳು ಏತಕ್ಕೆ ಆಗಕೂಡದು. ಮೈಸೂರು ಇದ್ದಹಾಗೆ ಇರಲಿ, ಇತರರನ್ನು ಸೇರಿಸಿ ಇನ್ನೊಂದು ಪ್ರಾಂತವನ್ನು ಮಾಡೋಣ ಎಂದು ಹೇಳುತ್ತಾರೆ. ದಕ್ಷಿಣದಲ್ಲಿರತಕ್ಕ ಕೊಡಗು, ಮಂಗಳೂರು, ಕೊಳ್ಳೇಗಾಲ, ಮೈಸೂರಿಗೆ ಸೇರಿಸೋಣ, ಉತ್ತರ ಕರ್ಣಾಟಕದವರನ್ನು ಬೇರೆ ಪ್ರಾಂತ್ಯ ಮಾಡೋಣ ಎನ್ನುತ್ತಾರೆ. ಆಗ ಉತ್ತರ ಕರ್ಣಾಟಕದಲ್ಲಿ 60-70 ಲಕ್ಷ ಜನಸಂಖ್ಯೆ ಆಗುತ್ತದೆ. 60-70 ಲಕ್ಷ ಜನರಿಗೋಸ್ಕರ ಒಂದು ಪ್ರಾಂತ ಮಾಡುವುದಕ್ಕೆ ಆಗುತ್ತದೆಯೇ ? ಈಗ A, B ಮತ್ತು C ಸಂಸ್ಥಾನಗಳಿವೆ. ಸಂಸ್ಥಾನಗಳನ್ನೆಲ್ಲಾ ಸಮಾನವಾಗಿ ಹಂಚಿ ಒಂದೊಂದು ಪ್ರಾಂತಕ್ಕೆ ಎರಡು ಮೂರು ಕೋಟಿ ಪ್ರಜೆಗಳಿರುವಂತೆ ಪ್ರಾಂತರಚನೆ ಮಾಡಬೇಕು ಎಂದು ಹೇಳುತ್ತಾರೆ. ಅಂಥ ಸಂದರ್ಭದಲ್ಲಿ 60-70 ಲಕ್ಷವಿರುವ ಸಂಸ್ಥಾನಗಳನ್ನು ಏರ್ಪಡಿಸುವುದಕ್ಕೆ ಆಗುತ್ತದೆಯೇ ? ಹುಬ್ಬಳ್ಳಿಯನ್ನೋ, ಧಾರವಾಡವನ್ನೋ ರಾಜಧಾನಿಯಾಗಿ ಮಾಡಿದರೆ ಎಷ್ಟು ಖರ್ಚಾಗುತ್ತದೆ ? ಇಂಡಿಯಾ ಸರ್ಕಾರದವರು ಕರ್ನೂಲನ್ನು ರಾಜಧಾನಿ ಮಾಡಬೇಕಾದರೆ, 3-4 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರು. ಹೀಗೆ ಒಂದು ರಾಜಧಾನಿ, ಇನ್ನೊಂದು ಮಂತ್ರಿ ಮಂಡಲ, ಒಂದು Public Service Commission, ಒಂದು ಹೈಕೋರ್ಟ್ ಮಾಡುತ್ತಾ ಹೋದರೆ ಎಷ್ಟು ದುಡ್ಡು ಖರ್ಚಾಗುತ್ತದೆ ? ಹಾಗೆ ಮಾಡುತ್ತಾ ಹೋದರೆ ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಒಂದು ಪ್ರಾಂತ ಮಾಡಿ ಎಂದು ಕೇಳುವ ಸಂದರ್ಭ ಬರುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. 2½ ಕೋಟಿ ಅಥವಾ ಮೂರು ಕೋಟಿ ಪ್ರಜಾಸಂಖ್ಯೆಯಿರುವ ಒಂದು ಪ್ರಾಂತ್ಯ ಮಾಡಿದರೆ ಆಗ ಅದು ಒಂದು viable unit ಆಗುತ್ತದೆ. ಒಬ್ಬ ದೊಡ್ಡ ಸ್ನೇಹಿತರು " ಇಷ್ಟು ದೊಡ್ಡ ಪ್ರಾಂತವಾದರೆ ರಾಜ್ಯ ಆಳುವುದಕ್ಕೆ ಆಗುವುದಿಲ್ಲ. ರಾಜಧಾನಿ ಬಹಳ ದೂರದಲ್ಲಿರುತ್ತದೆ. ಅಲ್ಲಿಗೆ ಜನಗಳು ಬರಬೇಕಾದರೆ ಬಹಳ ಕಷ್ಟವಾಗುತ್ತದೆ " ಎಂದು ಹೇಳಿದರು. ಈ ವಿಚಾರವಾಗಿ ಎಲ್ಲರೂ ಮಾತನಾಡಿದ್ದಾರೆ. ಈಗಿನ ನಾಗರಿಕತೆಯಲ್ಲಿ ದೂರದ ಪ್ರಶ್ನೆಯೇ ಬರುವುದಿಲ್ಲ. ಈಗ Aeroplanes ನಲ್ಲಿ ಅರ್ಧ ಗಂಟೆ, ಒಂದು ಗಂಟೆಯಲ್ಲಿ ಎಲ್ಲಿಗೆ ಬೇಕಾದರೂ ಹೋಗಬಹುದು, ದೂರದ ಪ್ರಶ್ನೆಯೇ ಬರುವುದಿಲ್ಲ. ಮುಖ್ಯವಾಗಿ ನಮ್ಮ ಮನಸ್ಸು ಹತ್ತಿರವಿರಬೇಕು, ಮನಸ್ಸೊಂದು ಹತ್ತಿರವಿದ್ದರೆ ರಾಜಧಾನಿ ಎಷ್ಟು ದೂರವಿದ್ದರೂ ಏನೂ ಅನಾನುಕೂಲವಾಗುವುದಿಲ್ಲ. ದೆಹಲಿ ಎಷ್ಟು ದೂರವಿದೆ? ಕನ್ಯಾಕುಮಾರಿವರೆಗೆ ರಾಜ್ಯಭಾರ ಮಾಡುವುದಿಲ್ಲವೇ? ಆಡಳಿತದಲ್ಲಿ ದಕ್ಷತೆ ಇಲ್ಲವೇ? ಆದ್ದರಿಂದ ರಾಜಧಾನಿ ಎಷ್ಟು ದೂರದಲ್ಲಿದ್ದರೂ administration group ಮಾಡಬಹುದು. ಮದರಾಸಿನವರು ಬಳ್ಳಾರಿಯನ್ನು ಒಂದು administration group ಮಾಡಿದ್ದರು. ಅಲ್ಲಿ

ಕೆಲವು ಅಧಿಕಾರಿಗಳು ಕೆಲಸ ನಡೆಸುತ್ತಿದ್ದರು. ಮದರಾಸ್ ನೇರವಾಗಿ ಆಡಳಿತ ನಡೆಸುತ್ತಿರಲಿಲ್ಲ. ಆದ್ದರಿಂದ ದೂರದ ಪ್ರಶ್ನೆ ಬರುವುದಿಲ್ಲ. ಮನಸ್ಸು ಹತ್ತಿರವಿರಬೇಕು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕೆಲವು ಸ್ನೇಹಿತರು ಬೆಂಗಳೂರು 10-20-30 ವರ್ಷಗಳ ಮೇಲೂ ರಾಜಧಾನಿಯಾಗಿ ಇರುತ್ತದೆಯೇ ಎಂದು ಕೇಳಿದರು. ನಾವು ನಾಳೆ ಬದುಕಿರುತ್ತೇವೆ ಎಂದು ಹೇಳುವುದಕ್ಕಾಗುತ್ತದೆಯೇ? 100 ವರ್ಷಗಳಿಗೆ ದೆಹಲಿಯಂತೆ ಈಗ ಬೆಂಗಳೂರು ರಾಜಧಾನಿಯೋ, ಹೈದರಾಬಾದ್ ರಾಜಧಾನಿಯೋ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಮುಂದಿನ ಜನಾಂಗಕ್ಕೆ ಮತ್ತು ಮುಂದಿನ ಪರಿಸ್ಥಿತಿಗೆ ಅನುಗುಣವಾಗಿ ಬಂದ ಸದಸ್ಯರಿಗೆ ಸೇರಿದ ವಿಚಾರ. ಬೆಂಗಳೂರು ಬಿಟ್ಟು ಹೊರಗಡೆ ರಾಜಧಾನಿಮಾಡುವುದಕ್ಕಾಗುತ್ತದೆಯೇ? ಬೆಂಗಳೂರು ಪಟ್ಟಣದಲ್ಲಿ ಹವಾ ಚೆನ್ನಾಗಿರುತ್ತದೆ. ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಿದ ಪಾರ್ಲಿಮೆಂಟ್‌ಹೌಸ್ ಮತ್ತು ಎಷ್ಟೋ ಇತರ ಕಟ್ಟಡಗಳು ಇಲ್ಲವೆ. ಧಾರವಾಡ, ದಾವಣಗೆರೆ ಅಥವಾ ಹುಬ್ಬಳ್ಳಿಯನ್ನೋ ರಾಜಧಾನಿಯಾಗಿ ಮಾಡಿದರೆ 20 ಕೋಟಿ ರೂಪಾಯಿಗಿಂತಲೂ ಹೆಚ್ಚು ದುಡ್ಡನ್ನು ಕಟ್ಟಡಗಳಿಗಾಗಿ ಇಡಬೇಕಾಗುತ್ತದೆ. ಆಗ ಸದಸ್ಯರು ಕಣ್ಣುಮುಚ್ಚಿಕೊಂಡು ಕೈಕಟ್ಟಿಕೊಂಡು ಅದನ್ನೇ ರಾಜಧಾನಿಯನ್ನಾಗಿ ಮಾಡಿ ಎಂದು ಹೇಳುವುದಕ್ಕಾಗುತ್ತದೆಯೇ? ಒಂದು ರಾಜಧಾನಿ ಬದಲಾವಣೆ ಮಾಡಬೇಕಾದರೆ ಒಗ್ಗಟ್ಟಿನಿಂದ ಕೆಲಸಮಾಡಬೇಕಾಗುತ್ತದೆ. ಆದ್ದರಿಂದ ಮಾನಸ್ಸಿಗೆ ತೋರಿದರೆ ಕೂಡಲೇ ರಾಜಧಾನಿ ಬದಲಾವಣೆ ಮಾಡುವುದಕ್ಕಾಗುತ್ತದೆಯೇ ಎಂಬುದನ್ನು ಯೋಚನೆಮಾಡಬೇಕು. ಇದೂ ಅಲ್ಲದೆ ನಮ್ಮ ಸ್ನೇಹಿತರು, ಕೆ.ಪಿ.ಸಿ.ಸಿ. ಸಮಿತಿಯವರು ಬೆಂಗಳೂರು ರಾಜಧಾನಿಯನ್ನಾಗಿ ಉಳಿಸುವುದಕ್ಕೆ ಒಪ್ಪಿಕೊಂಡಿದ್ದಾರೆ. ಇನ್ನು ರಾಜರ ಪ್ರಶ್ನೆ. ಇವೊತ್ತು ರಾಜರು ಇರಬಹುದು, ನಾಳೆ ಹೋಗಬಹುದು, ಅಥವಾ ನಾಳೆ ಅವರು ಗವರ್ನರ್ ಆಗಿ ಬರಬಹುದು. Reorganisation of States ಮಾಡಿದಮೇಲೆ ರಾಜರು ಇರುತ್ತಾರೆಯೇ ಎಂದು ಹೇಳುವುದಕ್ಕಾಗುವುದಿಲ್ಲ, ಮೈಸೂರಿನ ವೈಶಿಷ್ಟ್ಯ ಇರುತ್ತದೆಯೇ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಹೋಗುವ ಕಾಲ ಬಂದಿದೆ. Socialistic pattern of society ಬಂದರೆ ರಾಜರುಗಳು ಹೋಗುತ್ತಾ ಇರಬೇಕು. ಜನತೆಯೇ ರಾಜರು ಆಗಬೇಕು. ಸಾರ್ವಭೌಮತ್ವ ಅವರ ಕೈಯಲ್ಲಿ ಇರಬೇಕು.

3 P.M.

ಸಾರ್ವಭೌಮತ್ವ ಅವರ ಕೈಯಲ್ಲಿದೆ. ಅದು ಶಾಶ್ವತವಾಗಿ ಇದ್ದರೆ, ನಮ್ಮ ಮಹಾರಾಜರೇ ರಾಜಪ್ರಮುಖರಾಗಿರುತ್ತಾರೆಂದೂ ಹೇಳುವುದಕ್ಕಾಗುವುದಿಲ್ಲ. ನಮ್ಮ younger elements ಏನು ಹೇಳುತ್ತಾರೋ ಹೇಳುವುದಕ್ಕೆ ಸಾಧ್ಯವಿಲ್ಲ. ಸಮಾನ ಭಾವನೆ ಬಂದಾಗ, ಒಂದು ದೇಶದಲ್ಲಿ ರಾಜಪ್ರಮುಖರಿರುವುದು, ಇನ್ನೊಂದು ದೇಶದಲ್ಲಿ ಗವರ್ನರ್ ಇರುವುದು ಸಾಧ್ಯವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಅದು discrimination ಮಾಡಿದ ಹಾಗಾಗುತ್ತದೆ. ಆದ್ದರಿಂದ ಮಹಾರಾಜರಿದ್ದರೇನೋ ನಮಗೆ ಸಂತೋಷ. ಆದರೆ ಮುಂದೇನಾಗುತ್ತದೆಯೋ ಗೊತ್ತಿಲ್ಲ.

ಇನ್ನೊಂದು ದೊಡ್ಡ ಪ್ರಶ್ನೆಯೇನೆಂದರೆ, ಈಗ ನಮಗೆ ಬರುವ ಕರ್ಣಾಟಕ, ಅಂಕಿ ಅಂಶಗಳನ್ನು ನೋಡಿದರೆ, ಎಲ್ಲಾ ಭಾಗಗಳಲ್ಲೂ ಹಿಂದುಳಿದಿದೆ, ವೈದ್ಯ, ರಸ್ತೆ, ವಿದ್ಯಾಭ್ಯಾಸ ಯಾವುದೊಂದು ಸರಿಯಿಲ್ಲ, ಈ ರಿಪೋರ್ಟಿನಲ್ಲಿ ಕೂಡ ಸರಿಯಿಲ್ಲವೆಂದು ತಿಳಿಸಿದ್ದಾರೆ ಎಂದು ಕೆಲವರು ಹೇಳಿದರು. ಒಂದು ವೇಳೆ ಅದು ಸರಿಯೆಂದು ಒಪ್ಪಿಕೊಂಡರೂ, ಅವರು ಅಂಥ ಹೀನಸ್ಥಿತಿಯಲ್ಲಿರುವಾಗ ಅವರ ಸಹಾಯಕ್ಕೆ ನಾವು ಹೋಗಬೇಕಾದದ್ದು ಧರ್ಮ. ಹೈದರಾಬಾದಿನಿಂದ ಮೂರು ಡಿಸ್ಟ್ರಿಕ್ಟುಗಳು ಬರಲಿವೆ. ಅವು ಜಹಗೀರಿಗಳಾಗಿದ್ದುವು. ಈಗ ನಮ್ಮಲ್ಲಿ ಯಳಂದೂರು ಜಹಗೀರಿ, ಶೃಂಗೇರಿ ಜಹಗೀರಿಗಳಿದ್ದಹಾಗೆ. ಆ ಜಹಗೀರ್‌ದಾರರುಗಳು ಜನರ ಕಷ್ಟಸುಖಗಳನ್ನು ಕೇಳದೆ ಅವು ಹಿಂದುಳಿದಿವೆ. ರಾಜರುಗಳಿದ್ದವರು ಎಷ್ಟೋ ಮಟ್ಟಿಗೆ ಜನರ ಕಷ್ಟಸುಖಕ್ಕೆ ನೆರವಾದರೂ ಬಂದಂಥ ಹಣವನ್ನು ತೆಗೆದುಕೊಂಡು ತಾವು ಪರದೇಶಗಳಿಗೆ ಹೋಗಿ ಸುಖವಾಗಿದ್ದರು. ಅಂಥ ಪ್ರದೇಶಗಳು ಈಗ ಕರ್ಣಾಟಕದಲ್ಲಿ ವಿಲೀನವಾಗಲವೆ. ಆದ್ದರಿಂದ ನ್ಯಾಯವಾಗಿಯೇ ಆ ದೇಶಗಳು ಬಹಳ ಹಿಂದುಳಿದಿವೆ. ಅವುಗಳನ್ನು ನಮ್ಮ ಸಮಕ್ಕೆ ತರುವುದಕ್ಕೆ ಪ್ರಯತ್ನಪಡುವುದು ನಮ್ಮ ಮುಖ್ಯ ಕರ್ತವ್ಯ. ನಮ್ಮ ಸ್ನೇಹಿತರು ಹೇಳಬಹುದು, ಈಗಾಗಲೇ ಮೈಸೂರಿನಲ್ಲಿ 4 ಕೋಟಿ ರೂಪಾಯಿಗಳ ಡಿಫಿಸಿಟ್ ಇದೆ, ಇನ್ನು ಅವರೂ ನಮ್ಮೊಡನೆ ಬಂದು ಸೇರಿದರೆ 5-6 ಕೋಟಿ ಡಿಫಿಸಿಟ್ ಬರುತ್ತದೆ, ನಾವು ಇನ್ನೂ ಹಿಂದೆ ಬೀಳುತ್ತೇವೆಂದು. ಇದಕ್ಕೆ ನಾನು ಹೇಳುವುದು ಇಷ್ಟೆ; ಹೇಗಿದ್ದರೂ ಈ planning period ನಲ್ಲಿ ಡಿಫಿಸಿಟ್ ಎಂಬುದು ತಪ್ಪಿದ್ದಲ್ಲ. ನಮ್ಮ ಬಡ್ಜೆಟ್ಟು ಈ ವರ್ಷ 4 ಕೋಟಿ ಡಿಫಿಸಿಟ್ ಇರುವುದು ಮುಂದಿನ ವರ್ಷ 5 ಕೋಟಿ ಆಗಬಹುದು. ರಾಷ್ಟ್ರೀಕರಣ ಕಾರ್ಯ ತೆಗೆದುಕೊಂಡಾಗ ಹೆಚ್ಚಿಗೆ ಹಣ ಖರ್ಚುಮಾಡಬೇಕಾಗಿ ಬಂದೇ ಬರುತ್ತದೆ. ಡಿಫಿಸಿಟ್ ಆಗುತ್ತದೆಂದು ಹೇಳಿ ಇತರ ಪ್ರಾಂತ್ಯಗಳನ್ನು ಬರಕೂಡದೆಂದು ಹೇಳುವುದು ಸರಿಯಿಲ್ಲ.

ಅಲ್ಲದೆ, ಬೇರೆಯಾಗಿ ಕರ್ಣಾಟಕದವರೇ ಒಂದು ರಾಜಧಾನಿ ಮಾಡಿಕೊಳ್ಳಬೇಕಾದರೆ 4 ಕೋಟಿ ರೂಪಾಯಿಗಳನ್ನು ಕೇಂದ್ರಸರ್ಕಾರದವರ ಮೂಲಕ ಖರ್ಚು ಮಾಡಬೇಕಾಗಿ ಬರುತ್ತದೆ. ಅದನ್ನು ನಮಗೆ ಕೊಡಿಯೆಂದರೆ ಅವರು ಕೊಡುವುದಕ್ಕೆ ಹಿಂಜರಿಯುವುದಿಲ್ಲ. ಈ ದಿವಸ ಅವರು ನಮ್ಮನ್ನು ಬಿಟ್ಟು ಬೇರೆ ರಾಜಧಾನಿ ಮಾಡಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆಯೇ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಬಳ್ಳಾರಿಗೆ ಈಗ ಕೊಡುತ್ತಿದ್ದಾರೆ, ನೋಡಿ!

ಶ್ರೀ ಆರ್. ಅನಂತರಾಮಯ್ಯ.—ನಾವು ಕೇಳಿಲ್ಲ ಅಷ್ಟೆ. ಬಳ್ಳಾರಿಯ ವಿಷಯ ನಮ್ಮ ಮುಂದೆ ಬಂದಾಗಲೂ ಹೀಗೆಯೇ ಕೆಲವರು ಬೇಡ ಎಂದರು, ಕೆಲವರು ಹೊಗಳಿದರು. ಸೇರಿಯಾದ ಮೇಲೂ ಕೆಲವರು ಏಕೆ ಬಂತು ಎಂದು ಹೇಳುತ್ತಿದ್ದಾರೆ ಇದು ಸರಿಯಲ್ಲ. ಹಣದ ವಿಷಯ ಬಂತೆಂದರೆ ಒಬ್ಬರು ದೂರವಿರಬೇಕು, ಇತರ ವಿಷಯಗಳಲ್ಲಾದರೆ ಹತ್ತಿರ ಇರಬೇಕೆಂದು ಹೇಳುವುದು ಸರಿಯಲ್ಲ. ಅಲ್ಲಿ ಉತ್ಪತ್ತಿ ಸರಿಯಾಗಿಲ್ಲವೆಂದು ಹೇಳಿ ಅವರನ್ನು ದೂರ ಮಾಡಕೂಡದು. ಯಾವುದಾದರೂ ಒಂದು ಡಿಸ್ಟ್ರಿಕ್ಟಿನಲ್ಲಿ ಕ್ಷಾಮ ಬರಬಹುದು. ಕ್ಷಾಮ ಬಂದಾಗ ಹೊಟ್ಟೆ ಬಟ್ಟೆ ಕಟ್ಟಿ ಕಾಪಾಡುವುದು ನಮ್ಮ ಕರ್ತವ್ಯ. ಇಂಥ ವಿಷಯಗಳಲ್ಲಿ ಉದಾರ ಭಾವನೆ ನಮ್ಮಲ್ಲಿ ಬೆಳೆಯಬೇಕು. ಇಷ್ಟುಮಟ್ಟಿಗೆ ಹಣದ ದೃಷ್ಟಿಯನ್ನಿಟ್ಟುಕೊಂಡರೆ ಯಾರೂ ನೆಂಟಸ್ತನ ಮಾಡುವುದಕ್ಕೇ ಆಗುವುದಿಲ್ಲ. ಅಷ್ಟು ಸಂಕುಚಿತ ದೃಷ್ಟಿಯನ್ನಿಟ್ಟುಕೊಳ್ಳಕೂಡದು. ನಮ್ಮ ಅಣ್ಣತಮ್ಮಂದಿರ ಕಷ್ಟ

(ಶ್ರೀ ಆರ್. ಅನಂತರಾಮ್.)

ಸುಖಗಳನ್ನು ನೋಡಬೇಕಾದದ್ದು ನಮ್ಮ ಧರ್ಮವೆಂದು ನಾನು ಹೇಳುತ್ತೇನೆ. ಮೈಸೂರೇತರ ಕರ್ಣಾಟಕದವರು ಮೂರು ಪ್ರಾಂತ್ಯ ಸರ್ಕಾರಗಳ ಕೈಕೆಳಗೆ ಸಿಕ್ಕಿಬಿದ್ದಿದ್ದಾರೆ. ಮದ್ರಾಸಿನಲ್ಲಿ ಕನ್ನಡಿಗರು ಬಹಳ ಕೊನೆಯಲ್ಲಿರುವವರು. ಅವರಿಗೆ ಸಾಕಷ್ಟು ನಿಗಾ ಕೊಟ್ಟಿಲ್ಲ. ಹೋದ ಬಜೆಟ್ ಅಧಿವೇಶನದಲ್ಲಿ ಮಲಬಾರು ಮತ್ತು ಸೌತ್ ಕೆನರಾದವರು ತಾವು ಬಹಳ ಹಿಂದುಳಿದಿದ್ದೇವೆಂದು ಹೇಳಿ ಆ ಸದಸ್ಯರು ಮುಕ್ತಕಂಠದಿಂದ ಕಟುವಾಗಿ ಟೀಕೆ ಮಾಡಿರುವುದನ್ನು ನೋಡಿದ್ದೇವೆ. ಮದರಾಸಿನವರು ತಮಿಳುನಾಡನ್ನು ಅಭಿವೃದ್ಧಿಮಾಡುತ್ತಿದ್ದಾರೆಯೇ ಹೊರತು ಕನ್ನಡ ದೇಶದ ಕಡೆ ನೋಡಿಲ್ಲ. ಅಲ್ಲಿನ ಅಸೆಂಬ್ಲಿಯಲ್ಲಿ ಐದಾರು ಜನರು ಮಾತ್ರ ಸದಸ್ಯರಿದ್ದಾರೆ. 200 ಜನ ಸದಸ್ಯರಿರುವ ಕಡೆ 5-6 ಕನ್ನಡಿಗರಿದ್ದು ತಾನೇ ಏನಾದೀತು?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಬಿದರೆ, ಬಿಜಾಪುರದವರು ಮುಂದೆ ನಮ್ಮನ್ನೂ ಅದೇ ರೀತಿ ದೂರುತ್ತಾರೆ.

ಶ್ರೀ ಆರ್. ಅನಂತರಾಮ್.—ದೂರಿದರೆ, ಅವರ ಕಷ್ಟಸುಖಗಳನ್ನು ಹೋಗಲಾಡಿಸುವುದು ನಮ್ಮ ಕರ್ತವ್ಯ. ಮದರಾಸ್ ಸರ್ಕಾರದವರು, ಬೊಂಬಾಯಿ ಸರ್ಕಾರದವರು ಆಗುವುದಿಲ್ಲವೆಂದು ಹೇಳಿದಹಾಗೆ ನಾವು ಹೇಳುವುದಕ್ಕಾಗುವುದಿಲ್ಲ. ಬೊಂಬಾಯಿನ ಶಾಸನ ಸಭೆಯಲ್ಲಿ 10-15 ಜನ ಮಾತ್ರ ಕನ್ನಡಿಗರಿದ್ದಾರೆ. ಐದಾರು ತಿಂಗಳ ಹಿಂದೆ ನಾನು ಅಲ್ಲಿಗೆ ಹೋಗಿದ್ದಾಗ ಅಲ್ಲಿ ಅರ್ಥ ಒಂದು ವಿಚಾರ ಹೇಳಿದರು. ಗದಗ್ ಪಟ್ಟಣಕ್ಕೆ ನಲ್ಲಿ ಚರಂಡಿ ವ್ಯವಸ್ಥೆಗೆ ದುಡ್ಡು ಕೊಡಬೇಕೆಂದು ಹೇಳಿ ಅರ್ಧ ಮೊಬಲಗನ್ನು ಗ್ರಾಂಟ್‌ರೂಪವಾಗಿಯೂ ಇನ್ನರ್ಧವನ್ನು ಸಾಲವಾಗಿಯೂ ಕೊಡಬೇಕೆಂದು ಸರ್ಕಾರದವರನ್ನು ಕೇಳಿದ್ದಕ್ಕೆ, ಅಲ್ಲಿನ ಮುಖ್ಯಮಂತ್ರಿಗಳು, "ನೀವೆಲ್ಲಾ ಕರ್ಣಾಟಕ ಪ್ರಾಂತ ಮಾಡಿಕೊಂಡು ಹೋಗಬೇಕೆನ್ನುವಾಗ ನಾವೇಕೆ ಕೊಡಬೇಕು" ಎಂದು ಹೇಳಿದರಂತೆ. ಹೀಗೆ ಆ ಕನ್ನಡಿಗರನ್ನು ತುಳಿಯುತ್ತಿದ್ದಾರೆ. ಮಂಗಳೂರು, ಅತ್ತಕಡೆ ಒಂದು ಸೇತುವೆಯನ್ನು ಕೂಡ ಕೊಟ್ಟಿಲ್ಲ. ಅದೇ ಬೊಂಬಾಯಿನ ಹತ್ತಿರದ ಗುಜರಾತನ್ನು ನೋಡಿ. . . .

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—A point of order, Sir. ಬೇರೆ ಸರ್ಕಾರದವರು ತಮ್ಮ ಪ್ರಜೆಗಳ ವಿಷಯದಲ್ಲಿ ಪಕ್ಷಪಾತ ನೀತಿಯನ್ನನುಸರಿಸುತ್ತಿದ್ದಾರೆಂದು ನಾವು ಟೀಕೆಮಾಡುವುದು ಸರಿಯಲ್ಲ.

ಶ್ರೀ ಆರ್. ಅನಂತರಾಮ್.—ನನ್ನ ಅಭಿಪ್ರಾಯ ಹೇಳಿದೆ ಅಷ್ಟೆ.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಅಲ್ಲಿನ ಸರ್ಕಾರಗಳು ತಮಗೆ ಸೇರಿರುವ ಕೆಲವು ಭಾಗಗಳನ್ನು develop ಮಾಡಿಲ್ಲವೆಂಬುದು ಒಂದು fact. ಅದನ್ನು ಹೇಳುವುದರಲ್ಲಿ ತಪ್ಪೇನಿಲ್ಲ.

ಶ್ರೀ ಆರ್. ಅನಂತರಾಮ್.—ನನ್ನ ಅಭಿಪ್ರಾಯ ಇಷ್ಟು. ಅವರು ಅಷ್ಟು ನಿರ್ಲಕ್ಷ್ಯಮಾಡಿದ್ದಾರೆ. ಅದ್ದರಿಂದ ನಾವು ತಿಳಿಯಬೇಕು. ನಮ್ಮ ಕನ್ನಡಿಗರು ಹರಿದು ಹಂಚಿಹೋಗಿ ಬಹಳ ದುಸ್ಥಿತಿಯಲ್ಲಿದ್ದಾರೆ. ತಾವು ನೋಡಿದರೆ ಕಣ್ಣೀರು ಬರುತ್ತದೆ. ಅವರನ್ನು ನಮ್ಮೊಡನೆ ಸೇರಿಸಿಕೊಂಡು ಮೇಲಕ್ಕೆತ್ತುವುದು ನಮ್ಮ ಕರ್ತವ್ಯವಲ್ಲವೆ?

ಶ್ರೀ ಜಿ ಎ. ತಿಮ್ಮಪ್ಪಗೌಡ.—ನಿಮ್ಮನ್ನೇ ಡೆಪ್ಯೂಟ್ ಮಾಡಬೇಕು!

ಶ್ರೀ ಆರ್. ಅನಂತರಾಮ್.—ಡೆಪ್ಯೂಟ್ ಮಾಡಿದರೆ ಸಂತೋಷವೇ. ಆಂಧ್ರದಲ್ಲಿ ಚುನಾವಣೆಗಳಾದಾಗ ಇಲ್ಲಿನ ಕಾಂಗ್ರೆಸ್ಸಿನವರು ಹೋಗಿ ಸಹಾಯ ಮಾಡಲಿಲ್ಲವೆ? ಹಾಗೆಯೇ ಬೇರೆಯವರಿಗೆ ಕಷ್ಟ ಬಂದಾಗ ನಾವು ಸಹಾಯ ಮಾಡುವುದು ನಮ್ಮ ಕರ್ತವ್ಯ. ನಮ್ಮ ಕನ್ನಡಿಗರೀಗ ದುಸ್ಥಿತಿಯಲ್ಲಿದ್ದಾರೆ. ಅವರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ಸ್ನೇಹಿತರು ಹೇಳಿದ ಒಂದು ವಾದವನ್ನು ಇನ್ನೊಂದು ದೃಷ್ಟಿಯಿಂದ ನೋಡೋಣ. ಕರ್ಣಾಟಕ ದೇಶ ನಮ್ಮೊಡನೆ ಸೇರುವುದಕ್ಕೆ ಅದು ಬಹಳ ಹಿಂದುಳಿದಿದೆಯೆಂದು ಹೇಳಿದ್ದಾರೆ. ಈಗ ಪಾಂಡಿಚೆರಿ ಇಂಡಿಯಾ ದೇಶಕ್ಕೆ ಸೇರಿತು; ಗೋವಾ ಸೇರುವುದರಲ್ಲಿದೆ. ಇದನ್ನು ಇಂಡಿಯಾ ದೇಶಕ್ಕೆ ಸೇರಿಸಿಕೊಳ್ಳುವ ಸಂದರ್ಭದಲ್ಲಿ ಇಂಡಿಯಾ ಸರ್ಕಾರದವರೇ ನಾವರೂ ಅವು ಆರ್ಥಿಕವಾಗಿ ಹಿಂದುಳಿದಿವೆಯೇ ಇಲ್ಲವೇ ಎಂದು ನೋಡಿದರೇ? ನಮ್ಮ ಸಂಸ್ಕೃತಿ ಅವರ ಸಂಸ್ಕೃತಿ ಬೇರೆಯಲ್ಲ, ಅವರೂ ನಮ್ಮ ಜನರು ಎಂಬ ಭಾವನೆಯಿಂದ ಒಂದುಗೂಡಬೇಕೆಂದಿದ್ದೇವೆ. ಗೋವಾದಲ್ಲಿ ಇಂದು ಎಷ್ಟು ಸ್ವತಂತ್ರ ಚಳವಳಿ ನಡೆಯುತ್ತಿದೆ ನೋಡಿ. ಬಹಳ ಆಸೆಯಿಂದ ನಮ್ಮೊಡನೆ ಸೇರಬೇಕೆಂದು ಹೇಳುತ್ತಿದ್ದಾರೆ. ಅವರ ಕಷ್ಟಕ್ಕೆ ನಾವು ಹೋಗುವುದು ನ್ಯಾಯ. ಜವಹರಲಾಲ್‌ರವರು ಈ ಸಮಸ್ಯೆಯನ್ನು 'ಅವರು ಹಿಂದುಳಿದಿದ್ದಾರೆ, ನಾವು ಮುಂದುವರಿದಿದ್ದೇವೆ' ಎಂದು ಸುಮ್ಮನಿರಬೇಕೆಂದು ಹೇಳಿಲ್ಲ. ಗೋವಾ ಪಾಂಡಿಚೆರಿ ಸೇರಿಸಿಕೊಂಡ ಅವರೂ ಸುಖವಾಗಿರುವಂತೆ ಮಾಡಬೇಕಾದದ್ದು ಅವಶ್ಯಕ.

ಅಲ್ಲದೆ, ಯಾವುದೇ ಹೊಸ ಪ್ರದೇಶವನ್ನು ಸೇರಿಸಿಕೊಳ್ಳುವಾಗಲೂ Reaction ಇದ್ದೇ ಇರುತ್ತದೆ. ಸಿವಿಲ್ ಸ್ಟೇಷನ್ನನ್ನು ಸೇರಿಸಿಕೊಳ್ಳುವಾಗಲೂ ಹೀಗೆಯೇ ಇತ್ತು. ಈ ಚಿಕ್ಕ ಭಾಗವನ್ನು ಸೇರಿಸಿಕೊಳ್ಳುವುದಕ್ಕೇ ಸೇರಿಸ ಕೂಡದೆಂದು ಎಷ್ಟು ಪ್ರತಿಕ್ರಿಯೆ! ಸಿಟಿ ಹಿಂದುಳಿದಿದೆ, ಸಿವಿಲ್ ಸ್ಟೇಷನ್ ಮುಂದುವರಿದಿದೆಯೆಂದು ಹೇಳುತ್ತಿದ್ದರು. ಆಗಲೂ ನಾನು ಹೇಳಿದೆ; ಸೇರಿಸಿಕೊಳ್ಳುವುದರಲ್ಲಿ ತೊಂದರೆಯೇನಿಲ್ಲ, ಹತ್ತಾರು ವರ್ಷಗಳಾದಮೇಲೆ ಪ್ರತ್ಯೇಕತಾ ಮನೋಭಾವ ಹೊರಟು ಹೋಗುತ್ತದೆ ಎಂದು ಹೇಳಿದೆ. ಅದರಂತೆ ಈಗ ಪ್ರತ್ಯೇಕತೆಯ ಮನೋಭಾವ ಹೋಗಿಲ್ಲವೆ?

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಅವರ ಕಷ್ಟ ಇನ್ನೂ ನೀಗಿಲ್ಲ

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗಲೂ ಅಲ್ಲಿ ಒಂದು ಅಡ್ರೆಸ್" ಕೊಡುವುದು ಇಲ್ಲೊಂದು ಅಡ್ರೆಸ್ಸು ಕೊಡುವುದು ಇದ್ದೇ ಇದೆ.

ಶ್ರೀ ಆರ್. ಅನಂತರಾಮ್.—ಅದೂ ಸ್ವಲ್ಪಸ್ವಲ್ಪ ಇದೆ. ಆದರೂ ಆ ಭಿನ್ನ ಮನೋಭಾವ ನಿಧಾನವಾಗಿ ಹೋಗುತ್ತಿರುವುದನ್ನು ಕಾಣಬಹುದು. ಕೆಲವರು ಆಡಳಿತ ದೃಷ್ಟಿಯಿಂದ ಕರ್ಣಾಟಕ ಪ್ರಾಂತ್ಯವನ್ನು ನೋಡಬೇಕೇ ಹೊರತು ಬೇರೆ ದೃಷ್ಟಿಯಿಂದ ನೋಡಕೂಡದೆಂದು ಹೇಳಿದ್ದಾರೆ. ಆದರೆ ನಮ್ಮ ಹಿರಿಯರು ಹೇಳಿರುವುದು, ಒಂದು ಸಂಸ್ಥಾನವನ್ನು ರಚಿಸಬೇಕಾದರೆ, ಆಡಳಿತ ದೃಷ್ಟಿ, ಅಕ್ಕಪಕ್ಕದ ಪ್ರಾಂತ್ಯದೊಡನೆ ಹೊಂದಿಕೊಳ್ಳುವುದು ಮತ್ತು ಭಾಷೆ—ಇವು ಮೂರನ್ನೂ ನೋಡಬೇಕೇ ಹೊರತು ಬರೀ ಆಡಳಿತ ದೃಷ್ಟಿಯಿಂದ ನೋಡುವುದಲ್ಲ—ಬರೀ ಆಡಳಿತ ದೃಷ್ಟಿಯಿಂದ ನೋಡಿದರೆ ಮೈಸೂರನ್ನೇ ಎರಡು ಭಾಗವಾಗಿ ಮಾಡಬೇಕೆಂದೂ ಹೇಳಬಹುದು. ಅದಕ್ಕೇ ನಮ್ಮ ಮುಖಂಡರು, ಆಡಳಿತ ದೃಷ್ಟಿಯ ಜೊತೆಗೆ contiguity ಮತ್ತು

ಭಾಷೆಯನ್ನು ನೋಡಬೇಕೆಂದು ಹೇಳಿರುವುದು. ಉದಾಹರಣೆಗೆ ಮಂಗಳೂರಿದೆ ; ಮದ್ರಾಸಿನವರು ಅದನ್ನು ಆಳುವುದು ಬಹಳ ಕಷ್ಟ. ಹಾಗೆಯೇ ಮಡಕಶಿರ, ಹೊಸೂರು. ಇಂಥ ಸಂದರ್ಭದಲ್ಲಿ ಮಗ್ಗಲು ಪ್ರಾಂತ್ಯಕ್ಕೆ ಸೇರಿಸಿದರೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದಲೇ ಇಂಡಿಯಾ ಸರ್ಕಾರದವರು ಕಮಿಷನನ್ನು ರಚಿಸಬೇಕಾದರೆ ಈ ಮೂರು ಅಂಶಗಳನ್ನೂ ಸೇರಿಸಿ ಕೊಟ್ಟಿದ್ದಾರೆ. ಆದ್ದರಿಂದ ನಾವು ಇಲ್ಲಿ ಮಾತನಾಡುವಾಗಲೂ ಈ ಮೂರು ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಮಾತನಾಡಬೇಕು.

ಆ ಮೇಲೆ ಇನ್ನೊಂದು ವಿಷಯವನ್ನು ನಮ್ಮ ಮಾನ್ಯ ಸ್ನೇಹಿತರು ಹೇಳಿದ್ದಾರೆ—ಅದೇನೆಂದರೆ ಅವರು ಬಹಳ ಹಿಂದುಳಿದಿದ್ದಾರೆ—ಎಂದು ಆದರೆ ವಿಚಾರಗಳನ್ನು ಒಳಹೊಕ್ಕು ನೋಡುವುದಾದರೆ ಅವರು ನಮಗಿಂತಲೂ ಅನೇಕ ವಿಚಾರಗಳಲ್ಲಿ ಮುಂದುವರಿದಿದ್ದಾರೆಂದು ಧಾರಾಳವಾಗಿ ಹೇಳಬಹುದು. ಅ ನಮ್ಮ ಕನ್ನಡ ಬಂಧುಗಳೆಲ್ಲರೂ ಬಹಳ ಎಂಟರ್‌ಪ್ರೈಸಿಂಗ್ ಆಗಿದ್ದಾರೆ. ಆದರೆ ಅವರ ನಾಡಿನಲ್ಲಿ ನಮ್ಮ ಹಾಗೆ ಈ ವಿದ್ಯುಚ್ಛಕ್ತಿಯನ್ನು ತಯಾರಿಸಲು ಅನುಕೂಲವಿಲ್ಲದಿದ್ದಾಗ್ಯೂ ಅಲ್ಲಿನ ಜನಗಳೆಲ್ಲಾ ಒಂದಾಗಿ ಸೇರಿಕೊಂಡು ಒಂದು ಕಂಪನಿ ಮಾಡಿಕೊಂಡು ಅಲ್ಲಿನ ದೊಡ್ಡ ದೊಡ್ಡ ಸ್ಥಳಗಳಿಗೆಲ್ಲಾ ಈ ದಿವಸ ವಿದ್ಯುಚ್ಛಕ್ತಿಯ ಬೆಳಕನ್ನು ಒದಗಿಸುತ್ತಿದ್ದಾರೆ. ಹೀಗೆ ಕೆಲವು ವಿಚಾರಗಳಲ್ಲಿ ನಾವು ಹಿಂದುಳಿದಿದ್ದರೆ ಕೆಲವು ವಿಚಾರಗಳಲ್ಲಿ ಅವರೂ ಹಿಂದುಳಿದಿರಬಹುದು. ಅಂತೂ ಯಾರೊಬ್ಬರೂ ಪರಿಪೂರ್ಣತೆಯನ್ನು ಮುಟ್ಟಿಲ್ಲ. ಈ ದಿವಸ ಅವರ ಸೀಮೆಯಲ್ಲಿ ಒಳ್ಳೆ ರಸ್ತೆಗಳಲ್ಲಿ, ಬಹಳ ಧೂಳು ತುಂಬಿದ ರಸ್ತೆಗಳಿರುತ್ತವೆಂದು ಹೇಳಿದರು. ಆದರೆ ಅಲ್ಲಿಯ ಜನರು ಸರ್ಕಾರದ ನೆರವನ್ನೇ ಕೇಳದೆ ಅವರೇ ಆ ಕೆಲಸಗಳನ್ನೆಲ್ಲಾ ಮಾಡಿಕೊಂಡು ಬರುತ್ತಿದ್ದಾರೆ. ಹಾಗೆ ಆ ಜನರಲ್ಲಿ ಕಂಡುಬರತಕ್ಕಂಥ ಒಂದು ಎಂಟರ್‌ಪ್ರೈಸಿಂಗ್ ಸ್ಪಿರಿಟ್ ನಮ್ಮೆಲ್ಲರತಕ್ಕಂಥ ನಮ್ಮ ಜನರಲ್ಲಿ ಕಂಡುಬರುತ್ತಿಲ್ಲ. ಈ ದಿವಸ ಆ ಉತ್ತರ ದೇಶದ ಜನರಲ್ಲಿ ಅಂಥ ಒಂದು ಎಂಟರ್‌ಪ್ರೈಸಿಂಗ್ ಸ್ಪಿರಿಟ್ ಇದೆ. ಈ ದಿವಸ ಅಲ್ಲಿ ಎಷ್ಟೊಂದು ಈ ಕೋಆಪರೇಟೀವ್ ಸೊಸೈಟಿಗಳವೆ ! ಅಲ್ಲಿಯ ಜನರೇ ಸೇರಿಕೊಂಡು ಎಂಥಾ ಒಂದು ದೊಡ್ಡ ವಿಶ್ವವಿದ್ಯಾನಿಲಯನ್ನು ಸ್ಥಾಪಿಸಿದ್ದಾರೆಂಬುದನ್ನು ನೋಡಿದರೆ ನಮ್ಮಗೆಲ್ಲಾ ಬಹಳ ಆಶ್ಚರ್ಯವಾಗುತ್ತದೆ. ನಾವೀದಿವಸ ನಮ್ಮಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾಗ್ಯೂ ನಮ್ಮಲ್ಲಿ ಅಂಥ ಒಂದು ದೊಡ್ಡ ಯೂನಿವರ್ಸಿಟಿಯಿಲ್ಲ. ಹೀಗೆ ಅಲ್ಲಿನ ಜನರಲ್ಲಿ ಒಂದು ಉಮೇದು ಬಹಳ ಶ್ಲಾಘನೀಯವಾದುದಾಗಿವೆ. ಹೀಗೆ ಆ ದೇಶದ ಜನರು ಇಲ್ಲಿಯತನಕ ಆ ಖಾಸಗೀ ಜನರ ನೆರವಿನಿಂದಲೇ ಮುಂದುವರಿಯುತ್ತಾ ಬಂದಿದ್ದಾರೆ. ಅದಕ್ಕಾಗಿ ಅವರನ್ನು ಹೊಗಳಬೇಕಾಗಿದೆ. ಅಲ್ಲಿ ನಮ್ಮ ದೇಶದ ಕಾಡುಗಳಿಗಿಂತಲೂ ಬಹಳ ದೊಡ್ಡದಾದ ಕಾಡುಗಳಿರುತ್ತವೆ. ಆದರೆ ಅವರು ಅವುಗಳನ್ನೆಲ್ಲಾ ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಆದುದರಿಂದ ಆ ಪ್ರಾಂತ್ಯಗಳೆಲ್ಲಾ ಸೇರಿಕೊಂಡು ಒಂದು ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ಅದರಿಂದ ದೇಶಾಭಿವೃದ್ಧಿಗೆ ಬಹಳ ಸಹಾಯವಾಗುತ್ತದೆ. ಸುಮಾರು 200 ಮೈಲಿಗಿಂತಲೂ ಹೆಚ್ಚಾಗಿ ಆ ಸಮುದ್ರತೀರ ಈ ಕರ್ಣಾಟಕಕ್ಕೆ ಸೇರುತ್ತದೆ. ಈ ಹಿಂದೆ ಆ ಭಟ್ಕಳ್ ಬಂದರನ್ನು ನಮ್ಮ ಮೈಸೂರಿಗೆ ಸೇರಿಸಿಕೊಳ್ಳಲು ನಮ್ಮವರೆಲ್ಲಾ ಎಷ್ಟು ಕಷ್ಟಪಟ್ಟರೂ ಅದು ಸಾಧ್ಯವಾಗಲಿಲ್ಲ. ಈಗ ಅಂಥ ಕ್ಲಿಷ್ಟಕರವಾಗಿದ್ದಂಥ ಸಮಸ್ಯೆಯಲ್ಲಾ ಮಾಯವಾಗಿ ಆ ಪ್ರದೇಶಗಳೆಲ್ಲವೂ ಏನೊಂದೂ ಕಷ್ಟವಿಲ್ಲದಂಥ ರೀತಿಯಲ್ಲಿ ತಾವೇತಾವಾಗಿ ಬಂದು ಈಗ ಮೈಸೂರಿಗೆ ಸೇರತಕ್ಕಂಥ ಸುಸಮಯ ಒದಗಿದೆ. ಈಗ ತಾನೆ ಮಾತನಾಡಿದಂಥ ನನ್ನ ಸ್ನೇಹಿತರು ಆ ಪ್ರದೇಶಗಳಲ್ಲಿ ಅಂಥ ಅನುಕೂಲತೆಗಳೇನಿವೆಯೆಂದು ಕೇಳಿದರು. ಈ ದಿವಸ ಮಂಗಳೂರು ಮತ್ತು ಮಲ್ಪೆ ಈ ಸ್ಥಳಗಳಲ್ಲಿ ಎಂಥ ಫಿಷಿಂಗ್ ಕೆಲಸ ನಡೆಯುತ್ತಿದೆ! ಅಲ್ಲಿ ಸಿಕ್ಕುವ ಮೀನುಗಳನ್ನು ಅವರು ಇಡೀ ಕರ್ಣಾಟಕಕ್ಕೇ ಸರಬರಾಯಿ ಮಾಡಬಹುದು. ಮೈಸೂರಿಗೆ ಆಹಾರದ ಅಭಾವವಿದ್ದಾಗ ಈ ಸ್ಥಳಗಳಿಂದ ಬೇಕಾದಷ್ಟು ಈ ಮೀನು ಸರಬರಾಯಿ ಆಯಿತು. ಹೀಗೆಲ್ಲಾ ಬಹಳ ಅನುಕೂಲವಿರುತ್ತವೆ. ಆದರೆ ಇಂಥ ಎಷ್ಟೋ ವಿಚಾರಗಳನ್ನು ಶೇಷಾದ್ರಿ ಸಮಿತಿಯವರು ವಿಮರ್ಶೆ ಮಾಡಲು ಪ್ರಯತ್ನಪಟ್ಟಿಲ್ಲ. ಕರ್ಣಾಟಕ ಪ್ರಾಂತ್ಯ ನಿರ್ಮಾಣವಾಗುವುದರಿಂದ ಹೀಗೆಲ್ಲಾ ಎಷ್ಟು ಅನುಕೂಲವಾಗುತ್ತದೆ ಎನ್ನುವುದನ್ನು ನಾವೆಲ್ಲರೂ ಚನ್ನಾಗಿ ಪರ್ಯಾಲೋಚನೆ ಮಾಡಿ ಮಾತನಾಡಬೇಕಾಗಿದೆ.

ಇನ್ನು ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣದ ಬಗ್ಗೆ ಕೊನೆಯದಾಗಿ ನಾನು ಇನ್ನೊಂದು ಮುಖ್ಯ ವಿಚಾರವನ್ನು ತಿಳಿಸಬೇಕಾಗಿದೆ. ಕನ್ನಡ ಭಾಷೆಯನ್ನಾಡತಕ್ಕಂಥ ಭಾಗಗಳನ್ನೆಲ್ಲಾ ಒಟ್ಟುಗೂಡಿಸಿದರೆ ಬಹಳ ಸೊಗಸಾದಂಥ ಮತ್ತು ಸರ್ವಾಂಗ ಸುಂದರವಾದಂಥ ರಾಜ್ಯ ನಿರ್ಮಾಣವಾಗುತ್ತದೆ. 200 ಮೈಲಿಗೂ ಮೇಲ್ಮಟ್ಟಂಥ ಸಮುದ್ರತೀರದಿಂದ ಹಿಡಿದು ಇಡೀ ಮಲೆನಾಡೆಲ್ಲ ಈ ಕರ್ಣಾಟಕಕ್ಕೆ ಸೇರುತ್ತದೆ. ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೆ ದೇಶದ ಕಲ್ಯಾಣವನ್ನು ಸಾಧಿಪಿದಂತೆಯೆ ಎಂದು ನಾವೆಲ್ಲರೂ ಭಾವಿಸಲು ಯಾವ ಸಂಶಯವೂ ಇಲ್ಲ. ಈ ದೃಷ್ಟಿಯಿಂದ ನಾವು ಈ ಪ್ರಶ್ನೆಯನ್ನು ಪರಿಶೀಲನೆ ಮಾಡಬೇಕಾದದ್ದು ಯುಕ್ತವಾಗಿರುತ್ತದೆಂದು ಭಾವಿಸಿದ್ದೇನೆ. ಇನ್ನು ಕೆಲವರು ಎರಡು ಕರ್ಣಾಟಕ ಪ್ರಾಂತ್ಯಗಳು ಬೇಕಾಗಿದ್ದರೆ ರಚನೆಯಾಗಲಿ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ ಎಂದು ಹೇಳಿದರು. ಆದರೆ ಹಾಗೆ ಮಾಡುವುದು ಸರಿಯಾದುದಲ್ಲ. ಒಂದೇ ಒಂದು ಕರ್ಣಾಟಕ ಪ್ರಾಂತ್ಯನಿರ್ಮಾಣದಿಂದ ದೇಶಕ್ಕೆ ಬಹಳ ಅನುಕೂಲವಿದೆ. ಎರಡಾದರೆ ಅದರಿಂದ ಅನುಕೂಲಕ್ಕೆ ಪ್ರತಿಯಾಗಿ ಅನಾನುಕೂಲವಾಗುತ್ತದೆ. 2 ಕೋಟಿ ಪ್ರಜಾಸಂಖ್ಯೆಯಾದಾಗ್ಯೂ ಅದೇನೂ ಅಷ್ಟೊಂದು ದೊಡ್ಡ ರಾಜ್ಯವಾಗುವುದಿಲ್ಲ. 53 ಸಾವಿರ ಚದರ ಮೈಲಿ ವಿಸ್ತೀರ್ಣವುಳ್ಳ ದೇಶವೇನೂ ಅಂಥ ಅತಿ ದೊಡ್ಡ ದೇಶವಾಗುವುದಿಲ್ಲ. ಈ ದಿವಸ ಪ್ರಾಂತ್ಯಗಳಲ್ಲಿ ಸೇರಿಕೊಂಡಿರುವಂಥ ಕನ್ನಡಿಗರೆಲ್ಲರೂ ನಮ್ಮ ಅಣ್ಣತಮ್ಮಂದಿರುಗಳು ಮತ್ತು ನಮ್ಮ ಸ್ನೇಹಿತರುಗಳು. ಅವರ ಕಷ್ಟ ಸುಖಗಳಲ್ಲಿ ನಾವೂ ಸಹ ಭಾಗಿಗಳಾಗಬೇಕಾದದ್ದು ನ್ಯಾಯವಾಗಿದೆ. ಏನೋ ದುರದೃಷ್ಟವಶಾತ್ ಅವರು ಹಿಂದೆ ನಮ್ಮೆಲ್ಲರನ್ನು ತೊರೆದು ಬಿಟ್ಟು ನಮ್ಮನ್ನು ಅಗಲಬೇಕಾಗಿ ಬಂತು. ಅನಿವಾರ್ಯದಿಂದ ಅಗಲಿ ಹೋದರು. ಈ ದಿವಸ ಅವರು 'ನಾವೂ ನಿಮ್ಮೊಡನೆ ಬಾಳಬೇಕೆಂದು ಆಸೆಪಡುತ್ತಿದ್ದೇವೆ' ಎಂದು ಕೇಳುತ್ತಿರುವಾಗ ನಾವೇಕೆ ಅದಕ್ಕೆ ಅಡ್ಡಿಪಡಿಸಬೇಕು ? ಈಗಾಗಲೇ ನಾವು ಈ ನಮ್ಮ ಬೆಂಗಳೂರಿಗೆ ಪಕ್ಕದಲ್ಲಿದ್ದಂಥ ಸಿವಿಲ್ ಸ್ಟೇಷನ್ನನ್ನು ಬ್ರಿಟಿಷರು ಬಿಟ್ಟು ಹೋದ ಕೂಡಲೆ ನಮ್ಮ ದೇಶಕ್ಕೆ ಸೇರಿಸಿಕೊಳ್ಳಲಿಲ್ಲವೇ ! ಅದರಂತೆಯೇ ಈ ದಿವಸ ಆ ನಮ್ಮ

(ಶ್ರೀ ಆರ್. ಅನಂತರಾಮನ್.)

ಬಂಧುಗಳು ಈ ದಿವಸ ನಮ್ಮೊಡನೆ ಬಂದು ಸೇರಿ ಕೊಳ್ಳುತ್ತೇವೆಂದರೆ ನಾವು ಬೇಡ ಎನ್ನುವುದು ಸರಿ ಯಾದದ್ದಲ್ಲ. ಎಂದೇ ಆಗಲಿ ಅವರೂ ನಾವೂ ಒಂದಾಗಿ ಬಾಳಲೇಬೇಕು. ಅದು ಅನಿವಾರ್ಯ. ಈ ಹಿಂದೆಯೇ ವಲ್ಲಭಭಾಯಿ ಪಟೇಲ್‌ರವರು ಈ ರಾಜ್ಯಗಳನ್ನೆಲ್ಲಾ ಈ ಭಾಷಾವಾರು ಆಧಾರದ ಮೇಲೆ ಒಂದರಲ್ಲೊಂದನ್ನು ಸೇರಿಸಿಬಿಟ್ಟಿದ್ದರೆ ಈ ದಿವಸ ನಮ್ಮ ಮುಂದೆ ಈ ಪ್ರಶ್ನೆ ಬರಲು ಅವಕಾಶವೇ ಇರುತ್ತಿರಲಿಲ್ಲ. ನಮಗೆಲ್ಲಾ ಈ ಕಷ್ಟವೇ ತಪ್ಪಿಹೋಗುತ್ತಿತ್ತು. ಆದಕಾರಣ ನಾವೆ ಲ್ಲರೂ ಈ ಅಖಂಡ ಕರ್ಣಾಟಕ ಪ್ರಾಂತ್ಯನಿರ್ಮಾಣಕ್ಕೆ ಬೆಂಬಲ ನೀಡಿ ಸರ್ವರೂ ಇದಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise for lunch and meet at 3-50.

The House rose for Lunch at Twenty-two Minutes past Three of the Clock and met again at Fifty-five Minutes past Three of the Clock.

[MR. SPEAKER in the Chair.]

*ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ಸ್ವಾಮಿ; ಶ್ರೀ ಶೇಷಾದ್ರಿ ಸಮಿತಿಯವರು ಸರ್ಕಾರಕ್ಕೆ ಒಪ್ಪಿಸಿರುವಂಥ ಈ ಒಂದು ವರದಿಯ ಬಗ್ಗೆ ಇಲ್ಲಿಗೆ 4-5 ದಿವಸಗಳಿಂದಲೂ ಬಹಳವಾಗಿ ಚರ್ಚೆ ನಡೆಯುತ್ತಿದೆ. ಈ ಸಂಬಂಧದಲ್ಲಿ ಅನೇ ಮಾನ್ಯಸದಸ್ಯರುಗಳು ಮಾತನಾಡುತ್ತ ಕರ್ಣಾಟಕ ಕದ ಪೂರ್ವ ಇತಿಹಾಸವನ್ನೂ ಮತ್ತು ಅವರ ಹಿಂದಿನ ವೈಭವ ಇತ್ಯಾದಿ ಅನೇಕ ವಿಷಯಗಳನ್ನೂ ಈಗಾ ಗಲೇ ಪ್ರಸ್ತಾಪಮಾಡಿರುವುದರಿಂದ ನಾನೀಗ ಆ ವಿಷಯಗಳಿಗೆಲ್ಲಾ ಕೈಹಾಕುವುದಿಲ್ಲ. ಹಿಂದಿನ ಅಖಂಡ ಕರ್ಣಾಟಕ ಪ್ರಾಂತ್ಯ ಹೇಗೆ ಮತ್ತು ಯಾವ ಕಾರಣಗಳಿಂದ ಒಡೆದು ಈ ದಿವಸ ಬೇರೆ ಬೇರೆ ಎರಡು ಮೂರು ಆಡಳಿತಕ್ಕೆ ಒಳಗಾಯಿತು ಎನ್ನುವ ವಿಚಾರ ವನ್ನು ಕೂಡ ಈಗಾಗಲೇ ಅನೇಕ ಮಾನ್ಯಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ ಈಗ ಮಾತನಾಡಿರ ತಕ್ಕ ಸದಸ್ಯರುಗಳಲ್ಲಿ ಕೆಲವರು ರಾಜ್ಯಗಳ ಪುನರ್ವಿಂಗ ಡಣೆಗೆ ವಿರೋಧವಾಗಿ ಮಾತನಾಡಿದ್ದಾರೆ. ಹಾಗೆ ಅವರು ಈ ಪ್ರಶ್ನೆಯನ್ನು ವಿರೋಧ ಮಾಡಲು ಅವ ಕಾಶವಿಲ್ಲವೆಂಬುದನ್ನು ಸೂಚಿಸಲು ಕೆಲವು ಅಂಶಗಳನ್ನು ವಿಮರ್ಶೆಮಾಡಬೇಕೆಂಬುದೇ ನನ್ನ ಮುಖ್ಯ ಆಸೆ. ಅದಕ್ಕಾಗಿ ನಾನೀಗ ನಾಲ್ಕು ಮಾತುಗಳನ್ನಾಡಲು ಇಷ್ಟಪಟ್ಟಿದ್ದೇನೆ. ಈಗ ಮಾತನಾಡಿರತಕ್ಕ ಅನೇಕ ಸದಸ್ಯರಲ್ಲಿ ಕೆಲವರು "ಈ ನಮ್ಮ ಮೈಸೂರೇತರ ಕರ್ಣಾಟಕದಲ್ಲಿರುವ ಕನ್ನಡ ಭಾಗಗಳು ಎಲ್ಲಾ ವಿಧ ದಲ್ಲಿಯೂ ಬಹಳ ಹಿಂದುಳಿದಿವೆ. ಆದಕಾರಣ ಇನ್ನು ಮುಂದಕ್ಕೆ ಈ ಮೈಸೂರು ದೇಶದ ಏಳಿಗೆಗಾಗಿ ಏನೇನು ಅನುಕೂಲತೆಗಳನ್ನು ಮಾಡಬೇಕಾಗಿದೆಯೋ ಅಂಥ ಪ್ರಯತ್ನಗಳನ್ನೆಲ್ಲಾ ನಾವು ಈಗ ಬದಿಗಿಟ್ಟು ನಾವು ನಮ್ಮ ದೇಶದ ಹಣವನ್ನು ಇನ್ನುಮುಂದೆ ನಮ್ಮ ಮೈಸೂರಿನೊಡನೆ ಸೇರತಕ್ಕಂಥ ಈ ಹಿಂದುಳಿದ ಭಾಗ ಗಳ ಅಭಿವೃದ್ಧಿಗಾಗಿ ಖರ್ಚುಮಾಡಬೇಕಾಗಿ ಬರು ತ್ತದೆ" ಎಂದು ಹೇಳಿದ್ದಾರೆ. ಈ ಹಿಂದೆ ಆಂಧ್ರ ಪ್ರಾಂತ್ಯ ನಿರ್ಮಾಣವಾಗತಕ್ಕ ಕಾಲದಲ್ಲಿ ಇದೇ ಸಭೆಯ ಮುಂದೆ ಚರ್ಚೆಗಾಗಿ ಬಂದಿದ್ದ ಆಂಧ್ರ ಮಸೂದೆಯ ಮೇಲೆ ಮಾತನಾಡುವಾಗ ನಾವೆಲ್ಲರೂ ಆ ಮಸೂದೆಗೆ ನಮ್ಮ ಸ್ವಾಗತವನ್ನು ನೀಡುತ್ತ ಹೀಗೆ ರಾಜ್ಯಗಳು ಪುನರ್ವಿಂಗಡಣೆಯಾಗತಕ್ಕ ಕಾಲದಲ್ಲಿ ನಾವು ಈ ಪ್ರಶ್ನೆ ಯನ್ನು ಒಂದು ಲಾಭದ ದೃಷ್ಟಿಯಿಂದ ನೋಡಬಾರ ದೆಂದು ಹೇಳಿದ್ದೇವೆ. ನಾನು ಆ ದಿವಸ ಆ ಚರ್ಚೆ ಯಲ್ಲಿ ಭಾಗವಹಿಸಿದ್ದಾಗಲೂ ಕೂಡ ಏನು ಹೇಳಿ ದ್ದೆನೋ ಅದನ್ನೇ ನಾನು ಈಗ ಈ ಸಂದರ್ಭದಲ್ಲಿಯೂ ಹೇಳುತ್ತಿದ್ದೇನೆ. ಈ ದಿವಸ ಕಾರಣಾಂತರಗಳಿಂದ ಆ ಕೇಂದ್ರ ಸರ್ಕಾರದವರು ಒಂದು ಹೈಪವರ್ ಕಮಿಷನ್ನನ್ನು ನೇಮಕಮಾಡಿದ್ದಾರೆ. ಆ ಸಮಿತಿ ಯವರು ಸರ್ಕಾರಕ್ಕೆ ಒಪ್ಪಿಸತಕ್ಕಂಥ ವರದಿ ಯನ್ನು ನಾವೀಗ ನಿರೀಕ್ಷಣೆ ಮಾಡುತ್ತಿದ್ದೇವೆ. ಈಗ ನಾವು ಉದಾಹರಣೆಗೆ ಆ ಬೊಂಬಾಯಿ ಪ್ರಾಂತ್ಯ ವನ್ನು ತೆಗೆದುಕೊಳ್ಳೋಣ. ಈಗತಾನೆ ಮಾತನಾಡಿದ ಶ್ರೀ ಆರ್. ಅನಂತರಾಮರ್‌ರವರು ಬೊಂಬಾಯಿ ಪ್ರಾಂತ್ಯದಲ್ಲಿ ಸೇರಿರತಕ್ಕಂಥ ಮಹಾರಾಷ್ಟ್ರರೆಲ್ಲರೂ ಮಹಾರಾಷ್ಟ್ರ ಪ್ರಾಂತ್ಯ ನಿರ್ಮಾಣವಾಗಲೇ ಬೇಕೆಂದು ಏಕಕಂಠದಿಂದ ಕೇಳುತ್ತಿದ್ದಾರೆಂದು ಹೇಳಿದರು. ಹಾಗೆ ಅಲ್ಲಿ ಮರಾಠಿ ಭಾಷೆ ಯನ್ನಾಡತಕ್ಕಂಥ ಪ್ರದೇಶಗಳೆಲ್ಲಾ ಒಟ್ಟಾಗಿ ಸೇರಿ ಕೊಂಡು ಅಲ್ಲಿ ಮಹಾರಾಷ್ಟ್ರ ಪ್ರಾಂತ್ಯ ನಿರ್ಮಾಣ ವಾದ ಮೇಲೆ ಆ ಪಕ್ಕದಲ್ಲಿದ್ದ ಉಳಿಯುವಂಥ ಅಂದರೆ ಆ ಮಹಾರಾಷ್ಟ್ರ ಪ್ರಾಂತ್ಯಕ್ಕೂ ಮತ್ತು ಈ ನಮ್ಮ ಮೈಸೂರಿಗೂ ಮಧ್ಯೆ ಉಳಿಯತಕ್ಕಂಥ ನಾಲ್ಕು ಕನ್ನಡ ಮಾತನಾಡತಕ್ಕಂಥ ಜಿಲ್ಲೆಗಳ ಆಡಳಿತದ ವ್ಯವಸ್ಥೆ ಹೇಗಾಗಬೇಕೆಂಬ ಪ್ರಶ್ನೆ ತಾನೇ ತಾನಾಗಿ ಉದ್ಭವಿಸುತ್ತದೆ. ಹಾಗೆ ಉದ್ಭವಿಸುವುದು ನ್ಯಾಯ ವಾಗಿಯೂ ಇದೆ. ಹೀಗೆ ಸಂದರ್ಭಗಳೊದಗಿದಾಗ ಅವರು ನಮ್ಮ ಮೈಸೂರಿನೊಡನೆ ಸೇರಲೇಬೇಕಾಗು ತ್ತದೆ. ಅದು ವಿನಾ ಬೇರೆ ಮಾರ್ಗವೇ ಇಲ್ಲ. ಪರಿ ಸ್ಥಿತಿ ಹೀಗಿರುವಾಗ ನಾವು 'ನಮ್ಮದು ಮೊದಲೇ ಡಿಫಿಸಿಟ್ ಬಡ್ಜೆಟ್ಟಿನ ದೇಶ, ನಮ್ಮ ಈ ಡಿಫಿಸಿಟ್ ಇವು ಗಳ ವಿಲೀನೀಕರಣದಿಂದ ಇನ್ನೂ ಜಾಸ್ತಿ ಆಗುತ್ತದೆ; ಇದರಿಂದ ನಮ್ಮ ಅನುಕೂಲತೆಗಳು ನಮಗೆ ಕಡಮೆ ಯಾಗುತ್ತವೆ' ಎಂದು ಹೇಳುವುದಕ್ಕೆ ಅವಕಾಶವೇ ಇಲ್ಲ. ಹಾಗೆ ಹೇಳತಕ್ಕದ್ದು ನ್ಯಾಯವಾದದ್ದೂ ಅಲ್ಲ. ಕಾರಣವೇನೆಂದರೆ ನಮಗೆ 1947 ನೆಯ ಇಸವಿ ಆಗಸ್ಟ್ 15 ರಂದು ಸ್ವಾತಂತ್ರ್ಯ ಬಂದಾಗ ನಮ್ಮ ದೇಶದ ನಾಯಕರಾಗಿರುವಂಥ ನೆಹರೂ ಅವರು ಇಡೀ ದೇಶದ ಜನತೆಗೆ ಸಂದೇಶ ಕೊಡುವಂಥ ವೇಳೆಯಲ್ಲಿ ಅವರು ಭಾಷಣಮಾಡುತ್ತ "ನಮಗಿಂದು ಸ್ವಾತಂತ್ರ್ಯ ಲಭಿಸಿದೆ, ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ನಾವು ಗಳೆಲ್ಲರೂ ಇಡೀ ಭರತಖಂಡದ 36 ಕೋಟಿ ಜನರ ಶ್ರೇಯಸ್ಸಿಗಾಗಿ ದುಡಿಯಬೇಕಾಗಿರುತ್ತದೆ" ಎಂದು ಸಾರಿದ್ದಾರೆ. ಹಾಗೆ ಅವರು ಇಡೀ ಭರತ ಖಂಡದಲ್ಲಿರತಕ್ಕಂಥ ಎಲ್ಲಾ ಜನರ ದರ್ಜೆ, ಜೀವನದ ಮಟ್ಟ, ಇತ್ಯಾದಿಗಳೆಲ್ಲಾ ಮೇಲ್ಪಟ್ಟಕ್ಕೆ ತರಬೇಕೆಂದು ಹೇಳುತ್ತಿರುವಾಗ ನಾವಿಲ್ಲಿ ಈ ದಿವಸ ಕುಳಿತುಕೊಂಡು ನಮ್ಮ ಮೈಸೂರಿಗೆ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳ ಕನ್ನಡಿಗರು ಸೇರಿದರೆ ಅದರಿಂದ ನಮಗೆ ಸ್ವಲ್ಪ ತೊಂದರೆಯಾಗುತ್ತದೆ, ಅದರಿಂದ ನಮ್ಮ ಬಡ್ಜೆಟ್ ಮತ್ತಷ್ಟು ಡಿಫಿಸಿಟ್ ಆಗುತ್ತದೆ, ಎಂದು ಹೇಳುವ ಭಾವನೆ ಜನರಲ್ಲಿ ಬರಬಾರದು; ಅದಕ್ಕೆ ಅವಕಾಶವೇ ಇಲ್ಲ. ಆದರೆ ಈವರೆಗೆ ಮಾತನಾಡಿರತಕ್ಕಂಥ ಮಾನ್ಯ

ಸದಸ್ಯರ ಪೈಕಿ ಒಬ್ಬೊಬ್ಬರು ಹೊರಗಿನ ಕನ್ನಡ ಪ್ರದೇಶಗಳ ಬಗ್ಗೆ ಮಾತನಾಡುತ್ತ ಅಲ್ಲಿರತಕ್ಕವರೆಲ್ಲರೂ ಕೇವಲ ಮಣ್ಣನ್ನು ತಿನ್ನುತ್ತಿದ್ದ ಹಾಗೂ, ಈ ಮೈಸೂರಿನಲ್ಲಿರತಕ್ಕವರೆಲ್ಲಾ ಪೂರ್ತಿಯಾಗಿ ಅಮೃತವನ್ನೇ ಸೇವಿಸುತ್ತಿದ್ದ ಹಾಗೂ ಮಾತನಾಡಿ ಆ ಪ್ರದೇಶಗಳೆಲ್ಲಾ ಅಷ್ಟೊಂದು ಹಿಂದೆ ಬಿದ್ದಿರುತ್ತವೆಯೇನೋ ಎನ್ನುವ ಹಾಗೆ ಮಾತನಾಡಿದ್ದಾರೆ. ಆದರೆ ಇರತಕ್ಕಂಥ ವಾಸ್ತವಾಂಶಗಳನ್ನು ನೋಡುವುದಾದರೆ ಅಲ್ಲಿ ಕೆಲವು ಕಡೆ ರಸ್ತೆಗಳ ಸೌಕರ್ಯ ಕಡಮೆಯಾಗಿರಬಹುದು. ಕೆಲವು ಕಡೆ ಕೆಲವು ಪಾಠಶಾಲೆಗಳ ಸಂಖ್ಯೆ ಕಮ್ಮಿಯಾಗಿರಬಹುದು. ಕೆಲವು ಕಡೆ ವೈದ್ಯ ಸೌಕರ್ಯವೂ ಕಡಮೆಯಾಗಿಬಹುದು. ಆದರೆ ಇನ್ನು ಕೆಲವು ಮಾನ್ಯ ಸದಸ್ಯರು ಆ ಭಾಗದಲ್ಲಿ ಕೆಲಕೆಲವು ಪ್ರದೇಶಗಳು ನಮ್ಮ ಮೈಸೂರಿಗಿಂತಲೂ ಅನೇಕ ವಿಚಾರದಲ್ಲಿ ಮುಂದುವರಿದಿರುತ್ತವೆಂತಲೂ ಹೇಳಿದ್ದಾರೆ. ಈಗ ಈ ಸಮಿತಿಯವರು ಒಪ್ಪಿಸಿರುವಂಥ ವರದಿಯಲ್ಲಿರತಕ್ಕ ಅಂಕಿಅಂಶಗಳೆಲ್ಲಾ ನಿಜವೆಂತಲೂ ಒಪ್ಪಿಕೊಂಡರೂ ಕೂಡ ಅವರು ಕೊಟ್ಟಿರತಕ್ಕಂಥ ಅಂಕಿಅಂಶಗಳ ಆಧಾರಗಳು ಈ ಪ್ರಾಂತ್ಯಗಳ ಪುನರ್ವಿಂಗಡಣೆಗೆ ಪ್ರತಿಬಂಧಕವಾಗಬಾರದೆಂದು ಹೇಳುತ್ತೇನೆ. ಇದಕ್ಕೆ ಕಾರಣವೇನೆಂಬುದನ್ನು ಅನೇಕರು ಈಗಾಗಲೇ ತಿಳಿಸಿರುತ್ತಾರೆ. ಆದರೆ ಈಗಾಗಲೇ ಮಾತನಾಡಿರತಕ್ಕಂಥ ಸದಸ್ಯರ ಪೈಕಿ ಕೆಲವರು ಮತ್ತು ಶ್ರೀ ಜಿ. ಎ. ತಿಮ್ಮಪ್ಪಗೌಡರು ಧಾರ್ ಸಮಿತಿಯ ಮತ್ತು ಜೆ.ವಿ.ಪಿ. ವರದಿಗಳ ಬಗ್ಗೆ ಪ್ರಸ್ತಾಪ ಮಾಡುತ್ತ ಈಗ ಕರ್ಣಾಟಕ ಏಕೀಕರಣಕ್ಕೆ ಸಕಾಲವಾಗಿಲ್ಲ ಎಂದು ಒಂದು ಅಭಿಪ್ರಾಯವನ್ನು ಬೇರೆ ವ್ಯಕ್ತಪಡಿಸಿದ್ದಾರೆ. ಆದರೆ ಈ ಹಿಂದೆಯೇ ಈ ಪ್ರಶ್ನೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಒತ್ತಾಯಪಡಿಸಿದಾಗ ಆ ದಿವಸ ನಮ್ಮ ದೇಶದ ನಾಯಕರು ಆಗ ಎಂದರೆ 1949, 50 ಮತ್ತು 51 ನೇ ಸಾಲುಗಳಲ್ಲಿ ಈ ಕಾರ್ಯಕ್ಕಿಂತಲೂ ಬಹಳ ತ್ವರಿತವಾಗಿ ಗಮನ ಕೊಡಬೇಕಾಗಿದ್ದಂಥ ಆಹಾರದ ಕೊರತೆ ಇತ್ಯಾದಿ ಕೆಲವು ವಿಚಾರಗಳಿಗೆ ಗಮನ ಕೊಡಬೇಕಾಗಿದ್ದುದರ ದೆಸೆಯಿಂದ ಇದನ್ನು ಕೊಂಚ ಹಿಂದಕ್ಕೆ ಇಟ್ಟಿದ್ದರು.

4 P.M.

1953 ರಲ್ಲಿ ಆಂಧ್ರಪ್ರಾಂತ ಯಾವಾಗ ನಿರ್ಮಾಣವಾಯಿತೋ ಅಲ್ಲಿಂದೀಚೆಗೆ ಇದನ್ನು ವಿಮರ್ಶೆ ಮಾಡುವುದು ಬೇಡ ಎಂದು ಹೇಳುವುದು ಸರಿಯಲ್ಲ. ಈಗ ಕಾಲ ಬಹಳ ಸನ್ನಿಹಿತವಾಗಿದೆ. ಕೇಂದ್ರ ಸರ್ಕಾರದವರು ಒಂದು ಹೈ ಪವರ್ ಕಮಿಷನ್ ನೇಮಕಮಾಡಿ ಈ ವಿಷಯದ ಮೇಲೆ ಒಂದು ವರದಿಯನ್ನು ಕೊಡಿ ಎಂದು ಕೇಳಿದ್ದಾರೆ. ಹೈ ಪವರ್ ಕಮಿಷನ್‌ನವರೂ ಕೂಡ ಆಯಾಯ ಪ್ರಾಂತಗಳಿಗೆ ಹೋಗಿ ಅನೇಕ ಮುಖಂಡರುಗಳಿಂದ ಮತ್ತು ಸಂಸ್ಥೆಗಳಿಂದ ಅಭಿಪ್ರಾಯಗಳನ್ನು ಶೇಖರಣೆ ಮಾಡುತ್ತಿದ್ದಾರೆ. ಹೀಗಿರುವಾಗ ಇದರ ವಿಚಾರದಲ್ಲಿ ಖಚಿತವಾದ ಅಭಿಪ್ರಾಯವನ್ನು ಕೊಡುವುದಕ್ಕೆ ಬಹಳ ಸರಿಯಾದ ಕಾಲ ಈಗ ಒದಗಿದೆ. ಆದ್ದರಿಂದ ಇದನ್ನು ಇನ್ನೂ ಮುಂದುವರಿಸಬೇಕು ಎಂದು ಹೇಳುವ ವಾದದಲ್ಲಿ ಏನೂ ತಿರುಳಿಲ್ಲವೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಮೈಸೂರು ಸಂಸ್ಥಾನದ ಮಧ್ಯಭಾಗದಲ್ಲಿ ವಾಸಮಾಡುವವರಿಗೆ ನಮ್ಮ ಹಾಗೆ ಗಡಿಯಲ್ಲಿ ಇರುವವರಿಗೆ ಎಷ್ಟು ಕಷ್ಟವಿದೆ ಎಂಬುದು ಹೇಗೆ ಗೊತ್ತಾಗುತ್ತದೆ? ನಮ್ಮ ಬಂಧುಮಿತ್ರರೆಲ್ಲರೂ ಪಕ್ಕದಲ್ಲಿಯೇ ಇರುತ್ತಾರೆ. ನಮ್ಮ ಜಿಲ್ಲೆಗೆ ಆ ಕಡೆಯಿಂದ ಕನ್ಯೆಯನ್ನು ತಂದುಕೊಳ್ಳುವುದು ಮತ್ತು ಅಲ್ಲಿಗೆ ಕೊಡುವುದು ವಾಡಿಕೆಯಲ್ಲಿ ಉಂಟು. ಆದ್ದರಿಂದ ಅವರ ತೊಂದರೆಗಳು ಎಷ್ಟಿವೆ ಎಂಬುದು ನಮ್ಮ ಗಡಿನಾಡು ಪ್ರದೇಶದಲ್ಲಿ ವಾಸಮಾಡುವವರಿಗೆ ಚೆನ್ನಾಗಿ ಗೊತ್ತಿದೆ. ಬೊಂಬಾಯಿ ಕರ್ಣಾಟಕ ಜನಗಳ ದೃಷ್ಟಿಯಿಂದ ನೋಡಿದರೆ, ಕಾರಣಾಂತರದಿಂದ ಇಲ್ಲಿ ಹಿಂದೆ ಆಡಳಿತ ನಡೆಸುತ್ತಾ ಇದ್ದವರು ವಿಶೇಷವಾಗಿ ಗುಜರಾತಿನವರು ಮತ್ತು ಮಹಾರಾಷ್ಟ್ರ ಭಾಗದಿಂದ ಬರತಕ್ಕವರು, ಅದರ ಪರಿಣಾಮವಾಗಿ, ಕರ್ಣಾಟಕದಲ್ಲಿ ಏನೇನು ಸೌಕರ್ಯಗಳು ಒದಗಬೇಕೋ, ಅವನ್ನು ಒದಗಿಸುವುದಕ್ಕೆ ಅವಕಾಶವಿಲ್ಲದೆ ಹೋಗಿ ಅದು ತೀರ ಹಿಂದುಳಿದ ಪ್ರದೇಶವಾಗಿದೆ. ಬಾಕಿ ಪ್ರಾಂತಗಳಿಗಿಂತ ಅದು ಬಹಳ ಹಿಂದುಳಿದ ಪ್ರದೇಶವಾಗಿದೆ. ಇದರ ಪರಿಣಾಮವಾಗಿ, ನಮ್ಮ ಸ್ನೇಹಿತರಾದ ಶ್ರೀ ಆರ್. ಅನಂತರಾಮನ್ ಹೇಳಿದ ಹಾಗೆ, ಪ್ರೈವೇಟ್ adventure ಬಹಳ ಹೆಚ್ಚಾಗಿ ಪ್ರವರ್ಧಮಾನಕ್ಕೆ ಬಂದಿದೆ. ನಮ್ಮಲ್ಲಿ ಪ್ರತಿಯೊಂದಕ್ಕೂ ಸರ್ಕಾರವನ್ನು ನಂಬುತ್ತೇವೆ. ಅಲ್ಲಿ ಸರ್ಕಾರ ಯಾವ ರೀತಿಯೂ ಅನುಕೂಲಗಳನ್ನು ಒದಗಿಸದೆ ಹೋದುದರ ಪರಿಣಾಮವಾಗಿ ಏನೋ ಜನಗಳು ಮುಂದೆ ಬಂದು ಕೆಲವು ಅನುಕೂಲಗಳನ್ನು ತಾವೇ ಮಾಡಿಕೊಂಡಿದ್ದಾರೆ. ಅದು ಒಂದು ದೊಡ್ಡ ವಿಶೇಷ. ಅದು ನಮ್ಮಲ್ಲಿ ಬಹಳ ಹೆಚ್ಚಾಗಿ ಬೆಳೆಯಬೇಕು. ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಒಂದು ಗ್ರಾಮಕ್ಕೆ ಹೋದೆ, ಅಲ್ಲಿ ಚಾವಡಿಯಲ್ಲಿ ಕೆಲವು ಹೆಂಚುಗಳು ಬಿದ್ದುಹೋಗಿದ್ದುವು. ಅದಕ್ಕೆ ಗ್ರಾಮ ಮುಖಂಡರನ್ನು ಕೇಳಿದೆ. ನಾವು ಏತಕ್ಕೆ ಹಾಕಿಸಬೇಕು, ಸರ್ಕಾರದವರು ಬಂದು ಮಾಡಬೇಕು ಎಂದು ಅವರು ಹೇಳಿದರು. ನಮ್ಮ ಮನೋಭಾವ ಹೀಗಿದೆ. ಆದರೆ ನಮ್ಮ ಕರ್ಣಾಟಕದಲ್ಲಿರುವ ನೆರೆಹೊರೆಯವರು ತಮಗೆ ಏನೂ ಅನುಕೂಲತೆಗಳು ಸರ್ಕಾರದಿಂದ ದೊರೆಯದೆ ಹೋದರೂ ಅವರು ಅನುಕೂಲತೆಗಳನ್ನು ತಮ್ಮ ಸ್ವಂತ ಹಣದಿಂದಲೇ ಮಾಡಿಕೊಂಡಿದ್ದಾರೆ. ಆದ್ದರಿಂದ ಕರ್ಣಾಟಕ ಏಕೀಕರಣ ಭಾಷೆಯ ದೃಷ್ಟಿಯಿಂದ ಆಗಬೇಕು ಎಂದು ಹೇಳುವುದಿಲ್ಲ. ಆದರೆ ಬೇರೆ ಕಾರಣದಿಂದ ಇದು ಆಗುವುದು ಬಹಳ ಅವಶ್ಯಕ. ಇನ್ನೂ ಒಂದು ವಿಷಯವೇನೆಂದರೆ ಈ ವಿಚಾರದಲ್ಲಿ ಮೈಸೂರಿನ ಮುಖಂಡರುಗಳು ಯಾವ ಧೋರಣೆ ಮೊದಲಿನಿಂದಲೂ ತಾಳಿದ್ದಾರೆಂಬುದನ್ನು ಸ್ವಲ್ಪ ನೋಡಬೇಕಾಗಿದೆ. ಶ್ರೀ ತಿಮ್ಮಪ್ಪಗೌಡರು ತಮ್ಮ ಭಾಷಣದಲ್ಲಿ 1948 ನೇ ಇಸವಿಯಲ್ಲಿ ಅಸೆಂಬ್ಲಿಯಲ್ಲಿ ಆದ ನಿರ್ಣಯದ ವಿಚಾರವನ್ನು ಪ್ರಸ್ತಾಪ ಮಾಡಿದರು. ಅದಕ್ಕಿಂತ ಹಿಂದೆ ಹೋಗುವುದಾದರೆ Mysore Constituent Assembly ಸಭೆ ಇತ್ತು. ಆ ಸಭೆಯಲ್ಲಿ ನಾನೂ ಸದಸ್ಯನಾಗಿದ್ದೆನು. ಆಗ ಕೂಡ ಈ ವಿಷಯ ಚರ್ಚೆಗೆ ಬಂತು. ಆ ಸಭೆಯಲ್ಲಿ ಮೈಸೂರಿನ ವೈಶಿಷ್ಟ್ಯ ಉಳಿಯಬೇಕು ಎಂಬ ಠರಾವನ್ನು ಎಲ್ಲರೂ ಪ್ರತಿಪಾದಿಸಿದರು. ಮೈಸೂರಿನ ವೈಶಿಷ್ಟ್ಯವೇನೆಂದರೆ, ಮೈಸೂರಿನಲ್ಲಿ ಶ್ರೀಮನ್ಮಹಾರಾಜರು ಇದ್ದಾರೆ. ಆದರೆ ಬ್ರಿಟಿಷ್ ಇಂಡಿಯಾದ ಇತರ ಕನ್ನಡ ಭಾಗಗಳಲ್ಲಿ ಮಹಾರಾಜರು ಇಲ್ಲ. ಆದ್ದರಿಂದ ಇತರ ಕನ್ನಡ ಭಾಗಗಳು ಮೈಸೂರಿನಲ್ಲಿ ಸೇರಬೇಕಾದರೆ ಈ ರೀತಿಯ ಕಷ್ಟ ಬರುತ್ತಿತ್ತು. ಆ ಕಷ್ಟಗಳೂ ಕೂಡ ನಿವಾರಣೆಯಾಗಲಿ ಎನ್ನುವ ಉದ್ದೇಶದಿಂದ, ಹೊರಗಡೆ ಮದರಾಸ್ ಮತ್ತು ಬೊಂಬಾಯಿಯಲ್ಲಿರುವ ಕರ್ಣಾಟಕದ ಮುಖಂಡರುಗಳು, ಶ್ರೀಮನ್ಮಹಾರಾಜರವರು, ರಾಜಪ್ರಮುಖರೋ ಅಥವಾ ಮಹಾರಾಜರಾಗಿಯೋ ಇರಲಿ, ಅವರು ಎಷ್ಟು ವರ್ಷಗಳು

(ಶ್ರೀ ಎಲ್. ಸಿದ್ದಪ್ಪ.)

ಇರುತ್ತಾರೋ ಅಲ್ಲಿಯವರೆಗೆ ಅವರು ಕರ್ಣಾಟಕದ ಗವರ್ನರ್ ಆಗಿರುವುದಕ್ಕೆ ಏನೂ ತೊಂದರೆ ಇಲ್ಲ ಎಂದು ಹೇಳಿದ್ದಾರೆ. ಕರ್ಣಾಟಕ ಪ್ರಾಂತವಾದರೆ ಬೆಂಗಳೂರು ಮುಖ್ಯಪಟ್ಟಣವಾಗಿ ಉಳಿಯುತ್ತದೆಯೋ ? ಎಂದು ಸಂಶಯ ಬಂದಿದೆ. ಆ ಸಂಶಯ ಕೂಡ ನಿವಾರಣೆಯಾಗಬೇಕು ಎನ್ನುವ ಉದ್ದೇಶದಿಂದ ಬೆಂಗಳೂರು ರಾಜಧಾನಿಯಾಗಿರಬೇಕು ಎಂಬುದರಲ್ಲಿ ನಮ್ಮ ಅಭ್ಯಂತರವಿಲ್ಲವೆಂದು ಅವರು ಹೇಳಿದ್ದಾರೆ. ಇವೆಲ್ಲಾ ಕಾರಣಗಳಿಂದ Constituent Assembly ಯಲ್ಲಿ ಹಿಂದೆಯೇ ಮೈಸೂರಿನ ಅಕ್ಕಪಕ್ಕದಲ್ಲಿರುವ ಕರ್ಣಾಟಕ ಪ್ರದೇಶಗಳು ಮೈಸೂರಿಗೆ ಸೇರಿ expand ಆಗುವುದಾದರೆ ಅದಕ್ಕೆ ಏನೂ ಅಭ್ಯಂತರವಿಲ್ಲ ಎಂದು ಒಂದು ನಿರ್ಣಯವೂ ಕೂಡ ಪಾಸ್ ಆಗಿದೆ. ಶ್ರೀ ತಿಮ್ಮಪ್ಪಗೌಡರು ತಮ್ಮ ಭಾಷಣದಲ್ಲಿ 1949-50 ನೇ ಸಾಲಿನಲ್ಲಿ Representative Assembly ಯಲ್ಲಿ ಈ ವಿಷಯವಲ್ಲಿ ಠರಾವು ಆಯಿತು ಎಂದು ಹೇಳಿದರು. ಕರ್ಣಾಟಕ ಪ್ರಾಂತ್ಯ ಆಗುವುದು ಬೇಡ ಎಂದು ಹೇಳಿ ಠರಾವು ಆಗಿಲ್ಲ ; ಆಗ ಈ ವಿಷಯ ಚರ್ಚೆಗೆ ಬಂದಾಗ ಆಗಿನ ನಮ್ಮ ರಾಷ್ಟ್ರದ ನಾಯಕರು ಆಗ ಭಾರಿ ಭಾರಿ ತುರ್ತಾದ ಸಮಸ್ಯೆಗಳನ್ನು ಬಗೆಹರಿಸಬೇಕಾಗಿರುವುದರಿಂದ ಈ ವಿಷಯಕ್ಕೆ ಗಮನಕೊಡುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟು ಆ ಮೇರೆಗೆ ಸದ್ಯಕ್ಕೆ ಇರುವಂತೆಯೇ ಮುಂದುವರಿಸೋಣವೆಂದು ತೀರ್ಮಾನ ಆಯಿತೇ ಹೊರತು ಕರ್ಣಾಟಕ ಏಕೀಕರಣ ಆಗಬಾರದು ಎಂದು ತೀರ್ಮಾನವಾಗಿಲ್ಲ. ಕರ್ಣಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯವರು ಫಸಲ್ ಆಲಿ ಸಮಿತಿಯವರ ಮುಂದೆ ಒಪ್ಪಿಸಿರತಕ್ಕ ಮೆಮೊರ್ಯಾಂಡಮ್‌ನಲ್ಲಿ ಅಡಕವಾಗಿರುವ ಹಾಗೆ, ಮೊದಲಿನಿಂದಲೂ ಕನ್ನಡ ಭಾಗಗಳನ್ನು ಸೇರಿದಂಥ ಕರ್ಣಾಟಕ ಪ್ರಾಂತ ಆಗಬೇಕು ಎಂದು ಮೈಸೂರಿನ ನಾಯಕರೂ ಕೂಡ ಅಭಿಪ್ರಾಯಪಟ್ಟಿದ್ದಾರೆ. ಈ ಬಗ್ಗೆ ಮೈಸೂರಿನಿಂದ ಕಾಂಗ್ರೆಸ್ ಕಮಿಟಿಯಿಂದ ನೇಮಕವಾದ ಸಬ್-ಕಮಿಟಿ ಕೂಡ ಈ ಪ್ರಾಂತಗಳಲ್ಲಿ ಸಂಚಾರಮಾಡಿ ವಾಪಸ್ಸು ಬಂದು ಒಂದು ವರದಿಯನ್ನು ಒಪ್ಪಿಸಿದ್ದಾರೆ. ಆ ವರದಿಯಲ್ಲಿ ಒಂದೇ ಭಾಗವನ್ನು ಈ ಸಭೆಯ ಅವಗಾಹನೆಗೆ ತರಲಿಚ್ಛಿಸುತ್ತೇನೆ. ಇದು ಚರ್ಚೆಗೆ ಬಂದಾಗ ಶ್ರೀ ತಿಮ್ಮಪ್ಪಗೌಡರು ಮತ್ತು ಕೆಲವು ಮಹನೀಯರು ಕರ್ಣಾಟಕ ಪ್ರಾಂತವಾಗಬೇಕೆಂದು ಖಚಿತವಾಗಿ ನಿರ್ಧಾರಕ್ಕೆ ಬಂದಿಲ್ಲ ಎಂದು ಹೇಳಿದರು. ಆದರೆ ಕರ್ಣಾಟಕ ಆಗಬೇಕಾದುದು ಅವಶ್ಯಕ ಎಂದು ಸ್ಪಷ್ಟವಾಗಿ ನಿರ್ಧಾರಕ್ಕೆ ಬಂದಿರುವುದನ್ನು ರಿಪೋರ್ಟಿನಲ್ಲಿ ನಮೂದು ಮಾಡಿದ್ದಾರೆ. Appendix 12ರಲ್ಲಿ ಹೀಗಿದೆ:

"As the Mysore State Congress stand has always been in favour of United Karnataka with His Highness the Maharaja of Mysore as the Constitutional Head, the Committee recommends to the Working Committee that the formation of Akhila Karnataka Province is essential with the Maharaja of Mysore as the Constitutional Head and Bangalore as its capital, but the time for implementation of the same is not opportune at this juncture, and hence the Committee further recommends that the question of implementation may be postponed until the political situation improves in this direction."

ಆಗಲೇ ನಾನು ಹೇಳಿದಹಾಗೆ, ಭಾರತದ ನಾಯಕರುಗಳಿಂದ ಪಂಡಿತ್ ಜವಹರ್‌ಲಾಲ್ ನೆಹರೂ, ಸರ್ದಾರ್ ವಲ್ಲಭಭಾಯ್ ಪಟೇಲ್, ಮುಂತಾದವರು ಆಗ ಭಾರಿ ಭಾರಿ ಸಮಸ್ಯೆಗಳನ್ನು ಬಗೆಹರಿಸಿ ಅನಂತರ ಈ ಸಮಸ್ಯೆಗೆ ಗಮನಕೊಡಬೇಕೆಂದು ಹೇಳಿದ್ದಾರೆ. ಆ ಸಮಸ್ಯೆಯನ್ನು ಈಗ ಬಗೆ ಹರಿಸಿರುವುದರಿಂದ ಈ ವಿಷಯಕ್ಕೆ ನಾವು ಗಮನಕೊಡಬಹುದು ಎಂದು ಇದರಿಂದ ವ್ಯಕ್ತಪಡುತ್ತದೆ. ಇಂಡಿಯಾ ಸರ್ಕಾರದವರು ಹೈ ಪವರ್ ಕಮಿಷನ್ ನೇಮಕಮಾಡಿರುವುದರಿಂದ ಇದಕ್ಕೆ ಕಾಲ ಬಹಳ ಸನ್ನಿಹಿತವಾಗಿದೆ ಎಂಬುದು ಗೊತ್ತಾಗುತ್ತದೆ. ಆದುದರಿಂದ ಎಲ್ಲಾ ಕರ್ಣಾಟಕ ಭಾಗಗಳನ್ನೂ ಒಳಗೊಂಡಿರತಕ್ಕ ಪ್ರಾಂತವಾಗಬೇಕು ಎಂಬುದಕ್ಕೆ ಆಕ್ಷೇಪಣೆಗಳನ್ನು ಇಂದು ಮಾನ್ಯ ಸದಸ್ಯರು ಎತ್ತಿರುವುದರಲ್ಲಿ ಯಾವ ತಿರುಳೂ ಇಲ್ಲವೆಂಬುದು ವ್ಯಕ್ತಪಡುತ್ತದೆ. ಮುಖ್ಯವಾಗಿ ನಮ್ಮ ದೇಶದ ಪಕ್ಕದಲ್ಲಿರುವವರು ಒಂದು ರೀತಿ ಕಷ್ಟ ಸ್ಥಿತಿಯಲ್ಲಿದ್ದು ನಾವು ಸುಖವಾಗಿರಬೇಕು ಎಂದು ತಾಳತಕ್ಕ ಧೋರಣೆ ಸರಿಯಾದುದಲ್ಲ. ನ್ಯಾಯವಾಗಿ ಮಹಾರಾಷ್ಟ್ರ ಆದರೆ, ತಮಿಳುನಾಡು ಆದರೆ, ಆಂಧ್ರ ಪ್ರಾಂತವಾದರೆ ಮೈಸೂರು ಸ್ಟೇಟಿನ ಪಕ್ಕದಲ್ಲಿರುವ ಕನ್ನಡ ಭಾಗಗಳು ಬೇರೆ ಹೋಗುವುದಕ್ಕೆ ಸಾಧ್ಯವಿಲ್ಲ. ಎರಡು ಪ್ರಾಂತಗಳಾಗಲಿ ಎರಡು ಕರ್ಣಾಟಕ ಪ್ರದೇಶಗಳಾಗಲಿ ಎಂದು ಕೆಲವರು ವಾದವನ್ನು ಮುಂದಿಟ್ಟರು. ಅದೂ ಕೂಡ ಸರಿಯಲ್ಲ. ಕಳೆದ ವರ್ಷ ಶಿವಮೊಗ್ಗಾದಲ್ಲಿ ಒಂದು ಮಲೆನಾಡು conference ಆಯಿತು. ಮಾನ್ಯ ಸದಸ್ಯರು ಅನೇಕರು ಆ conferenceನಲ್ಲಿ ಭಾಗ ವಹಿಸಿದ್ದರು. ಅಲ್ಲಿಯೂ ಕೂಡ ಇದರ ಬಗ್ಗೆ ಒಂದು resolution ಆಯಿತು. ಭಾಷಣ ಮಾಡಿದ ಮಹನೀಯರು "ಮಲೆನಾಡು ಭಾಗಗಳು ಬೇರೆ ಬೇರೆ ಪ್ರಾಂತಗಳಲ್ಲಿ ಹರಿದು ಹಂಚಿಹೋಗಿವೆ. ಈ ಎಲ್ಲಾ ಮಲೆನಾಡು ಭಾಗಗಳೂ ಮುಂದೆ ಒಟ್ಟುಗೂಡಿ ಒಂದೇ ಪ್ರಾಂತ್ಯಕ್ಕೆ ಸೇರಿದರೆ, ಆಗ ಮಲೆನಾಡು ಪ್ರಾಂತ ಮುಂದುವರಿಯುವುದಕ್ಕೆ ಅನುಕೂಲವಾಗುತ್ತದೆ. ಮಲೆನಾಡಿನಲ್ಲಿರತಕ್ಕ ಪ್ರಕೃತಿ ಸಂಪತ್ತು ಜನಗಳಿಗೂ ಉಪಯೋಗವಾಗಿ ಅನುಕೂಲವಾಗುತ್ತದೆ. ಆ ರೀತಿ ಕನ್ನಡ ಮಾತನಾಡುವವರು ಸೇರುವುದರಿಂದ ಮಲೆನಾಡಿನ ಬಹುಭಾಗ ಸೇರುತ್ತದೆ ಮತ್ತು ಅಲ್ಲಿರತಕ್ಕ ಪ್ರಕೃತಿ ಸಂಪತ್ತನ್ನು ಮನುಷ್ಯನ ಸಾಧನೆಗೆ ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಕರ್ಣಾಟಕ ಪ್ರಾಂತ ಆಗಬೇಕಾದುದು ಅಗತ್ಯ" ಎಂದು ಹೇಳಿದರು.

ಇನ್ನು ಎರಡು ಪ್ರಾಂತಗಳು ಆಗಬೇಕು ಎಂಬ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಈಗಾಗಲೇ ನಮ್ಮ ಪಕ್ಕದಲ್ಲಿ ಪ್ರಾಂತಗಳು ಇವೆ. ಆಂಧ್ರ ಪ್ರಾಂತ್ಯ ಎರಡು ಕೋಟಿ ಜನಗಳನ್ನು ಒಳಗೊಂಡಿರತಕ್ಕ ಪ್ರಾಂತ್ಯ. ಅವರು ಆ ಪ್ರಾಂತ್ಯ ಇನ್ನೂ ಮುಂದುವರಿದು ಹೈದರಾಬಾದಿನಲ್ಲಿ ತೆಲುಗು ಮಾತನಾಡುವ ಭಾಗಗಳು ಸೇರಿ ವಿಶಾಲ ಆಂಧ್ರ ಪ್ರಾಂತವಾಗಬೇಕು, ಎಂದು ಹೇಳುತ್ತಾರೆ. ಅದು ಆದರೆ ಎರಡು ಕೋಟಿಗಿಂತ ಹೆಚ್ಚಿಗೆ ಜನಸಂಖ್ಯೆ ಇರುವ ಪ್ರಾಂತ್ಯವಾಗುತ್ತದೆ. ತಮಿಳುನಾಡು ಅದೇ

ರೀತಿ ಒಂದು ದೊಡ್ಡ ಪ್ರಾಂತವಾಗುತ್ತದೆ. ಆದ್ದರಿಂದ ಎರಡು ಕೋಟಿ ಜನಗಳು ಇರತಕ್ಕ ಒಂದು ಪ್ರಾಂತ ವಾದರೆ ಆಡಳಿತ ದೃಷ್ಟಿಯಿಂದ ಅಷ್ಟು ಚೆನ್ನಾಗಿ ಇರುವುದಿಲ್ಲ ಎಂದು ಹೇಳತಕ್ಕ ವಾದದಲ್ಲಿ ಕೂಡ ಏನೂ ತಿರುಳಿಲ್ಲ. ಇವೆಲ್ಲಾ ಕಾರಣಗಳಿಂದ ಕನ್ನಡ ಮಾತು ಮಾತನಾಡತಕ್ಕ ಮೈಸೂರಿನ ಅಕ್ಕ ಪಕ್ಕದಲ್ಲಿರುವ ಪ್ರದೇಶಗಳು ಸೇರಿ ಒಂದು ಪ್ರಾಂತವಾಗುವುದು ಬಹಳ ಅವಶ್ಯಕ. ಈ ಬಗ್ಗೆ ಈ ಸಭೆ ಒಮ್ಮನಸ್ಸಿನಿಂದ ತನ್ನ ಒಪ್ಪಿಗೆಯನ್ನು ಕೊಡುವುದು ಬಹಳ ಅವಶ್ಯಕವೆಂದು ಹೇಳುತ್ತೇನೆ.

*ಶ್ರೀ ಕೆ. ಸಿಂಗಾರಿಗೌಡ (ನಾಗಮಂಗಲ).—ಕೇಂದ್ರ ಸರಕಾರದವರು ಈ ಪ್ರಾಂತ್ಯ ಪುನರ್ವಿಂಗಡನೆ ಸಮಿತಿಯನ್ನು ನೇಮಿಸಿದ ಮೇಲೆ ಮೈಸೂರು ವಿಸ್ತಾರವಾಗಲೇಬೇಕೇ ಅಥವಾ ಈಗ ಇರುವಂತೆ ಇರಬೇಕೇ ಎನ್ನುವ ಸಮಸ್ಯೆಯನ್ನು ಬಿಡಿಸತಕ್ಕ ಸನ್ನಿವೇಶ ನಮ್ಮ ಮುಂದೆ ಇದೆ. ಆ ಪ್ರಶ್ನೆಯನ್ನು ಬಿಡಿಸುವಾಗ ಜಾತಿ ಮತ್ತು ಮತ ಎಂಬ ಈ ಸಂಶಯ ಇಟ್ಟುಕೊಂಡು ಸಮಸ್ಯೆಯನ್ನು ಸ್ವಲ್ಪ ಜಟಿಲಮಾಡಿಕೊಂಡಿದ್ದೇವೆ. ಪ್ರತಿಯೊಬ್ಬ ಮನುಷ್ಯನೂ ಕೂಡ ಆಯಾ ಸನ್ನಿವೇಶ ಮತ್ತು ಕಾಲದ ಪರಿಸ್ಥಿತಿಗೆ ಪರಾಧೀನವಾಗಿ ನಡೆದುಕೊಂಡು ಬಂದಿರುವುದನ್ನು ನಮ್ಮ ಸ್ವಾತಂತ್ರ್ಯದ ಚರಿತ್ರೆ ತಿಳಿಸುತ್ತದೆ. 400 ವರ್ಷಗಳ ಕೆಳಗೆ 1564ರಲ್ಲಿ ವಿಜಯನಗರದ ಸಾಮ್ರಾಜ್ಯ ಒಡೆದುಹೋದ ಮೇಲೆ ಕನ್ನಡ ಮಾತನಾಡತಕ್ಕ ಜನ ಬೇರೆ ಬೇರೆ ಪ್ರಾಂತಗಳ ಆಡಳಿತಕ್ಕೆ ಸಿಕ್ಕಿ ಅವರವರ ಆಡಳಿತ ವ್ಯವಹಾರಕ್ಕೆ ತಕ್ಕಂತೆ ನಡೆದುಕೊಂಡು ಬಂದಿದ್ದಾರೆ. ಭಾಷಾವಾರು ಪ್ರಾಂತರಚನೆ ವಿಷಯದಲ್ಲಿ ನನ್ನ ಹಿಂದೆ ಮಾತನಾಡಿದ ಶ್ರೀಯುತ ಕೆ. ಪಟ್ಟಾಭಿರಾಮಯ್ಯರವರು ಮತ್ತು ಶ್ರೀಯುತ ಎಚ್. ಎಂ. ಚನ್ನಬಸಪ್ಪನವರು ಭಾಷಾವಾರು ಪ್ರಾಂತ ರಚನೆ ವಿಷಯದಲ್ಲಿ ಭಾಷೆಯನ್ನು ಪ್ರಾಧಾನ್ಯವಾಗಿಟ್ಟುಕೊಂಡು ಪ್ರಾಂತ್ಯಗಳನ್ನು ಮಾಡುವುದು ಹುಚ್ಚುತನ ಎಂದು ಈ ಸಭೆಯ ಮುಂದೆ ಇಟ್ಟರು. ಅದೇ ವಿಷಯವನ್ನು ಶೇಷಾದ್ರಿ ಸಮಿತಿ ವರದಿಯಲ್ಲಿ 19ನೇ ಪುಟದಲ್ಲಿ ಪ್ರಸ್ತಾಪನೆ ಮಾಡಿದ್ದಾರೆ. ಅದರಲ್ಲಿ ಹೀಗಿದೆ :—

> "From the foregoing survey, it is obvious to us that however carefully boundaries may be drawn, the presence of linguistic minorities cannot be eliminated unless we contemplate an exchange of population on a linguistic basis. It appears to us that over-emphasis of linguistic considerations raises more problems than it is supposed to solve."

ಈ ದೃಷ್ಟಿಯಿಂದ ನಾನು ಈ ಪ್ರಾಂತ ವಿಂಗಡಣೆಯ ಸಮಸ್ಯೆಯನ್ನು ನೋಡಿದೆ. ಹಿಂದೆ ಇದನ್ನು ಸಮರ್ಥನೆ ಮಾಡಿರತಕ್ಕ ಕೆಲವು ಮಾನ್ಯ ಸ್ನೇಹಿತರು ಚಾರಿತ್ರಿಕ ದೃಷ್ಟಿಯಿಂದ, ಹಿಂದಿನ ಕನ್ನಡ ಸಾಮ್ರಾಜ್ಯದ ಗತವೈಭವವನ್ನು ನೆನೆದು ಕನ್ನಡ ನಾಡನ್ನು ವಿಸ್ತರಿಸಬೇಕಾದ್ದು ಅವಶ್ಯಕವೆಂದು ಹೇಳಿದ್ದಾರೆ. ಆದರೆ, ಇಂದಿನ ಸಮಸ್ಯೆಯನ್ನು ಅವರು ಸ್ವಲ್ಪಮಟ್ಟಿಗೆ ವಿಮರ್ಶೆ ಮಾಡಿದ್ದರೆ, ಸ್ವಲ್ಪ ವಿವೇಚನೆಯಿಂದ ಈ ಪ್ರಾಂತ್ಯ ವಿಸ್ತಾರವಾಗಬೇಕೆ ಎಂಬುದನ್ನು ಆಲೋಚನೆ ಮಾಡಿದ್ದರೆ, ಆ ನುಡಿಗೆ ಅವರು ಅಷ್ಟು ಪ್ರಾಧಾನ್ಯತೆಯನ್ನು ಕೊಡುತ್ತಿರಲಿಲ್ಲವೆಂದು ನಾನು ತಿಳಿದಿದ್ದೇನೆ. ಪ್ರಾಂತ್ಯ ವಿಂಗಡಣೆಯ ಸಮಿತಿಯ ನೇಮಕದ ಬಗ್ಗೆ ಹಿಂದೆ ಜವಹರಲಾಲ್‌ರವರು ಹೇಳಿಕೆ ಕೊಡುವಾಗ ಅವರು ಒಂದು ಅಂಶವನ್ನು ಮುಖ್ಯವಾಗಿ ಪ್ರಸ್ತಾಪಮಾಡಿದ್ದಾರೆ. ಒಂದು ದೇಶದಲ್ಲಿ ಅಥವಾ ಒಂದು ಪ್ರಾಂತ್ಯದಲ್ಲಿರತಕ್ಕ ಜನ, ಒಂದು ಭಾಷೆ ಅಥವಾ ಅಲ್ಲಿರತಕ್ಕ ಸಂಸ್ಕೃತಿ—ಇವುಗಳು ಪ್ರಾಂತ್ಯ ರಚನೆಗೆ ಒಂದು ಸಾಧನವೆಂದು ಭಾವಿಸುವುದಾದರೂ ಕೂಡ ಆಡಳಿತದ ಹಿತ, ಹಣಕಾಸಿನ ಪರಿಸ್ಥಿತಿ ಇವುಗಳನ್ನು ಪ್ರಾಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆದ್ದರಿಂದ, ಈ ದೃಷ್ಟಿಯಿಂದ ಇಂದು ಮೈಸೂರು ವಿಸ್ತಾರವಾಗಬೇಕೇ ಅಥವಾ ಈಗಿನ ಸ್ಥಿತಿಯಲ್ಲಿಯೇ ಇರಬೇಕೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ ವಿರೋಧ ಪಕ್ಷದ ನಾಯಕರು ಈ ವಿಷಯದಮೇಲೆ ಮಾತನಾಡುವಾಗ ಒಂದು ಮಾತು ಹೇಳಿದ್ದಾರೆ : ' ಈ ಸಮಸ್ಯೆ ಇಷ್ಟು ಜಟಿಲವಾಗಿರುವುದಕ್ಕೆ ಮುಖ್ಯವಾದ ಕಾರಣ, ಆ ಪ್ರಾಂತ್ಯದ ಜನ ಈ ಪ್ರಾಂತ್ಯದಲ್ಲಿರತಕ್ಕ ಜನ ಒಬ್ಬರನ್ನೊಬ್ಬರು ಅರಿತುಕೊಳ್ಳುವ ಸನ್ನಿವೇಶವಿರಲಿಲ್ಲ ; ಒಬ್ಬರನ್ನೊಬ್ಬರು ಅರಿತಿಲ್ಲ,' ಎಂದು ಹೇಳಿದ್ದಾರೆ. ಒಂದು ಸಂಸಾರದ ಆಗುಹೋಗುಗಳನ್ನೇ ಆಗಲಿ, ಒಂದು ದೇಶದ ಆಗುಹೋಗುಗಳನ್ನೇ ಆಗಲಿ ಸರಿಯಾಗಿ ಜನತೆಯು ಸುಖ ಶಾಂತಿಯನ್ನು ಅರಿತು ಜನರು ಒಬ್ಬರನ್ನೊಬ್ಬರು ಅರಿತರೇ ಪ್ರಗತಿಯನ್ನು ಸಾಧಿಸಲು ಸಾಧ್ಯ. ಈ ಒಂದು ದೃಷ್ಟಿಯಿಂದಲೇ ಮೈಸೂರು ಈಗಿರುವ ಹಾಗೆಯೇ ಇದ್ದ ಪಕ್ಷದಲ್ಲಿ ಒಳ್ಳೆಯದೆಂದು ನನ್ನ ಅಭಿಮತ. ಏಕೆಂದರೆ, ಈ ಎರಡು ಪ್ರದೇಶಗಳಲ್ಲಿರತಕ್ಕ ಜನ ಒಂದಾಗಬೇಕೆಂಬ ಕೂಗು ಬಂದಿರುವುದು 1946ನೆಯ ಇಸವಿಯಿಂದ ಮಾತ್ರ. ಧಾರ್ ಸಮಿತಿ ರಚನೆಯಾದ ಸಂದರ್ಭದಲ್ಲಿ ಕೂಡ ಅಖಂಡ ಕರ್ಣಾಟಕದ ಪ್ರಶ್ನೆಯಿರಲಿಲ್ಲ. ಸ್ವಾತಂತ್ರ್ಯ ಚಳವಳಿ 1948ರಲ್ಲಿ ಷುರುವಾದಾಗ ಜನರ ಮನಸ್ಸಿನಲ್ಲಿ ಈ ಕರ್ಣಾಟಕದ ಪ್ರಶ್ನೆ ಅಂಕುರಿಸಿತು. ಆ ಪ್ರಶ್ನೆಯೇ ಈ ದಿವಸ ಇಷ್ಟು ಜಟಿಲವಾಗಿದೆ. ಹಣಕಾಸಿನ ಪರಿಸ್ಥಿತಿಯಿಂದ, ಮೈಸೂರು ವಿಸ್ತಾರವಾದ ಪಕ್ಷಕ್ಕೇ, ಇಲ್ಲಿನ ಜನಕ್ಕೆ, ಇವರ ಹಿತಕ್ಕೆ ಎಷ್ಟುಮಟ್ಟಿಗೆ ಧಕ್ಕೆ ಬರುತ್ತದೆಂಬುದನ್ನು ಸ್ವಲ್ಪ ವಿಮರ್ಶೆ ಮಾಡುವುದು ಅವಶ್ಯಕ. ಸ್ವಾತಂತ್ರ್ಯ ಬಂದ ಮೇಲೆ ಸುಖೀರಾಜ್ಯ ನಿರ್ಮಾಣ ಮಾಡಬೇಕೆಂದು ಸರ್ಕಾರದವರು ತೊಡಗಿದಮೇಲೆ ಆ ಪ್ರಾಂತ್ಯದಲ್ಲಿ ವಾಸ ಮಾಡತಕ್ಕ ಪ್ರತಿಯೊಬ್ಬ ಪ್ರಜೆಗೂ ಕೂಡ ತಕ್ಕ ಸೌಲಭ್ಯ, ಸೌಕರ್ಯಗಳನ್ನು ಒದಗಿಸಿಕೊಟ್ಟು ಅವರ ಜೀವನ ಮಟ್ಟ ಉನ್ನತಿಗೆ ಬರುವುದಕ್ಕೆ ಶ್ರಮಿಸಬೇಕಾದದ್ದು ಸರ್ಕಾರದವರ ಕರ್ತವ್ಯ. ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಮೈಸೂರು ದೇಶದ ಹಣಕಾಸಿನ ವಿಷಯ ಉತ್ತಮವಾಗಿಲ್ಲ, ಆಶಾದಾಯಕವಾಗಿಲ್ಲ. ಜನರ ಆಶೆ ಆಕಾಂಕ್ಷೆಗಳು ದಿನದಿನಕ್ಕೂ ಬಹಳಮಟ್ಟಿಗೆ ಹೆಚ್ಚುತ್ತಿವೆ. ಎಲ್ಲಕ್ಕೂ ಸರ್ಕಾರದವರು ಜವಾಬ್ದಾರಿ ವಹಿಸಿ ಜನತೆಯ ಜೀವನದಲ್ಲಿ ಚೈತನ್ಯವನ್ನುಂಟು ಮಾಡಬೇಕೆಂಬ ಹಂಬಲಿಕೆ ಹೊಂದಿದ್ದರೂ ಅದನ್ನು ಸಾಧಿಸಲು ಶಕ್ತರಾಗಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅಖಂಡ ಕರ್ಣಾಟಕವನ್ನು ರಚಿಸಿ ಹೈದರಾಬಾದು ಪ್ರಾಂತ್ಯದ, ಬೊಂಬಾಯಿ ಪ್ರಾಂತ್ಯದ ಮತ್ತು ಮದರಾಸ್ ಪ್ರಾಂತ್ಯದ ಕನ್ನಡ ಭಾಗಗಳನ್ನು ಮೈಸೂರಿಗೆ ಸೇರಿಸಿದರೆ ನಮ್ಮ ಹಣಕಾಸಿನ ಸ್ಥಿತಿಯಲ್ಲಿ ಏನು ಏರುಪೇರುಗಳಾಗುತ್ತವೆಂಬುದನ್ನು ಸ್ವಲ್ಪಮಟ್ಟಿಗೆ ನಾವೆಲ್ಲರೂ ಗಮನಿಸಬೇಕು. ಬೊಂಬಾಯಿ ಪ್ರಾಂತ್ಯ

(ಶ್ರೀ ಕೆ. ಸಿಂಗಾರಿಗೌಡ.)

ಒಂದರಲ್ಲೇ 89 ಕೋಟಿ ರೂಪಾಯಿಗಳಷ್ಟು ಸಾಲವಿದೆ. ಪ್ರಾಂತ್ಯ ಪುನರ್ವಿಂಗಡಣೆಯಾದ ಪಕ್ಷಕ್ಕೆ ಲೇಣಿದೇಣಿಗಳನ್ನು ಹಂಚಿಕೆಮಾಡುವ ಸಂದರ್ಭ ಬಂದರೆ ಆಗ್ಗೆ ಮೈಸೂರು ತನ್ನ ಸರ್ಕಾರದ ಸಾಲದ ಜೊತೆಗೆ ಈ ಎರಡು ಮೂರು ಸರ್ಕಾರಗಳ ಹೊರೆಯನ್ನು ಖಂಡಿತ ವಹಿಸಬೇಕಾಗುತ್ತದೆ. ಸಮಿತಿಯುವರ ವರದಿಯ ಪ್ರಕಾರ ಸುಮಾರು 36ಕೋಟಿ ರೂಪಾಯಿಗಳ ಸಾಲವನ್ನು ನಾವು ಹೊತ್ತುಕೊಳ್ಳಬೇಕಾಗಿ ಬರುತ್ತದೆ. ಸಾಲದಕ್ಕೆ ಈಗ ರಾಷ್ಟ್ರಾಭಿವೃದ್ಧಿ ಕೆಲಸಗಳಿಗೆ ಬೇರೆ ಕೈಹಾಕಿದ್ದಾರೆ. ಆ ದೃಷ್ಟಿಯಿಂದ ಬೇರೆ ಸುಮಾರು 20 ಕೋಟಿ ರೂಪಾಯಿಗಳ ಹೊರೆಯನ್ನು ವಹಿಸಿಕೊಳ್ಳಬೇಕಾಗಿದೆ. ಇದಲ್ಲದೆ ಸಮಿತಿಯುವರ ವರದಿಯಲ್ಲಿ ಹೇಳಿರುವ ಪ್ರಕಾರ ಆ ಜನರು ಮೇಲ್ಮಟ್ಟಕ್ಕೆ ಬರಬೇಕಾದರೆ ತಕ್ಕ ಸೌಲಭ್ಯಗಳನ್ನು ನಮಗೆ ಇಲ್ಲಿ ಇರುವ ಹಾಗೆಯೇ ಒದಗಿಸಬೇಕಾದರೆ ಇನ್ನು 12 ಕೋಟಿ ರೂಪಾಯಿಗಳು ಹೆಚ್ಚಿಗೆ ಬೇಕೆಂದು ಹೇಳಿದ್ದಾರೆ. ಈ ಎಲ್ಲ ದೃಷ್ಟಿಯಿಂದಲೂ ವಿಸ್ತಾರವಾದ ಮೈಸೂರು ಪಕ್ಷಕ್ಕೆ ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟಕ್ಕೆ ಬರುತ್ತದೆ ಮತ್ತು ಮೈಸೂರಿನ ಜನತೆ ಎಷ್ಟು ಪಗತ್ರಿಯನ್ನು ಸಾಧಿಸಬೇಕೆಂದು ಬಯಸುತ್ತಿದೆಯೋ ಅದು ಕೇವಲ ಬಯಕೆಯಾಗಿಯೇ ಉಳಿಯುತ್ತದೆ. ಸಮಿತಿಯವರು ತಮ್ಮ ವರದಿಯಲ್ಲಿ ಈ ನೀತಿಯ ಏಕೀಕರಣದಿಂದ 600 ಮೈಲಿಗಳ ದೂರದ ಆವರಣದಲ್ಲಿ ಆಡಳಿತ ನಡೆಸಬೇಕಾಗುತ್ತದೆಂದು ಹೇಳಿದ್ದಾರೆ. ಯಾವ ಸರ್ಕಾರವೇ ಆಗಲಿ ಅದರ ಉನ್ನತ ಅಧಿಕಾರಿಗಳು ಜನತೆಯೊಡನೆ ನಿಕಟ ಸಂಪರ್ಕವಿಟ್ಟುಕೊಳ್ಳದೆ ಹೋದರೆ ಬಹುಶಃ ಅಂಥ ಆಡಳಿತದಿಂದ ಯಾವ ಅನುಕೂಲವೂ ಆಗುವುದಿಲ್ಲ. ಈ ವರದಿಯಲ್ಲಿ ಹೇಳಿರುವಂತೆ ವಿಸ್ತಾರಗೊಂಡ ಮೈಸೂರಿನಲ್ಲಿ ನ್ಯಾಯ ಶೀಘ್ರದಲ್ಲಿ ಮತ್ತು ಖರ್ಚಿಲ್ಲದೆ ದೊರಕಬೇಕಾದರೆ ಮೈಸೂರು ಹೈಕೋರ್ಟಿಗೆ ಸಂಬಂಧಪಟ್ಟಂತೆ ಇನ್ನೊಂದು ಬೆಂಚನ್ನು ಬೇರೆಕಡೆ ಕೊಡಬೇಕಾಗಿ ಬರುತ್ತದೆ. ಸಂಬಳ ಸಾರಿಗೆಗಳ ವಿಷಯದಲ್ಲಿಯೂ, ವಿಲೀನಗೊಂಡರೆ, ಬೇರೆ ಬೇರೆ ಪ್ರಾಂತ್ಯಗಳಲ್ಲಿ ಏನು ಸಂಬಳ ಸಾರಿಗೆಗಳಿವೆಯೋ ಆ ಮಟ್ಟಕ್ಕೆ ಮೈಸೂರಿನ ಸಂಬಳ ಸಾರಿಗೆಗಳನ್ನು ಹೆಚ್ಚುಮಾಡಬೇಕಾಗಿ ಬರುತ್ತದೆ. ಜೊತೆಗೆ ಈಗ ಅಲ್ಲಿರತಕ್ಕ ಡಿಸ್ಟ್ರಿಕ್ಟುಗಳನ್ನು ಮತ್ತು ತಾಲ್ಲೂಕುಗಳನ್ನು ದೊಡ್ಡದಾಗಿರುವುವುಗಳನ್ನು ಚಿಕ್ಕ ಚಿಕ್ಕದಾಗಿ ಮಾಡಬೇಕಾಗಿರುವುದರಿಂದ ಅದಕ್ಕಾಗಿ ಹೆಚ್ಚಿಗೆ ಸಿಬ್ಬಂದಿ ನೇಮಕ ಮಾಡಬೇಕಾಗಿರುವುದು ಹೆಚ್ಚಿನ ಖರ್ಚಿಗೆ ಕಾರಣವಾಗಿ ಮೈಸೂರಿಗೆ ಬಹಳ ಕಷ್ಟಬರುತ್ತದೆ. ಶಾಂತಿ ಪರಿಪಾಲನೆಯ ದೃಷ್ಟಿಯಿಂದಲೂ ಇಷ್ಟೊಂದು ವಿಸ್ತಾರವಾದ ಪ್ರದೇಶವಿದ್ದರೆ ಕಷ್ಟ. ಈ ಎಲ್ಲ ದೃಷ್ಟಿಯಿಂದ ಮೈಸೂರನ್ನು ವಿಸ್ತಾರಗೊಳಿಸುವುದು ಸಮಂಜಸವಲ್ಲವೆಂದು ನನ್ನ ವಾದ. 'ಮನೆಯನ್ನು ಕಟ್ಟದಿರು ಮೂರು ಲೋಕಕ್ಕೆ' ಎಂಬ ನಾಣ್ಣುಡಿಯಂತೆ ನಮ್ಮ ದೇಶವನ್ನು ವಿಪರೀತ ವಿಸ್ತರಗೊಳಿಸುವುದು ಉಚಿತವಲ್ಲ. ಆಂಜನೇಯನು ಚಿಕ್ಕವನಾಗಿದ್ದಾಗ ತನಗೆ ಶಕ್ತಿಯಿದೆಯೆಂದು ಹೆಮ್ಮೆಯಿಂದ ಸೂರ್ಯನನ್ನು ಮುಟ್ಟುತ್ತೇನೆಂದು ಹೋದುದರ ಪರಿಣಾಮವೇನಾಯಿತೆಂಬುದನ್ನು ನಾವು ಈ ಸಂದರ್ಭದಲ್ಲಿ ಅರಿತುಗೊಳ್ಳಬೇಕು. ಇಂದು ನಾವು ಮೈಸೂರನ್ನು ದಕ್ಷತೆಯಿಂದ ಆಳಬಲ್ಲವರಾಗಿದ್ದೇವೆಂದು ಇನ್ನೂ ಇತರ ಭಾಗಗಳನ್ನು ಸೇರಿಸಿಕೊಂಡರೆ ಮುಂದೆ ಕಣ್ಣು ಕಣ್ಣು ಬಿಡಬೇಕಾದ ಪ್ರಮೇಯ ಬರುತ್ತದೆ. ಈ ದೃಷ್ಟಿಯಿಂದ ಮೈಸೂರನ್ನು ವಿಶಾಲಗೊಳಿಸುವುದು ಅಪ್ರಕೃತವೆಂದು ಸೂಚನೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಅಧ್ಯಕ್ಷರೇ ಇಲ್ಲಿಯವರೆಗೂ ಶೇಷಾದ್ರಿ ಸಮಿತಿಯವರ ವರದಿಯಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಹೀಗೆ ಮಾತನಾಡಿದವರನ್ನು ಎರಡು ಮೂರು ಗುಂಪಾಗಿ ಭಾಗಮಾಡಬಹುದೆಂದು ನನಗೆ ತೋರುತ್ತದೆ. ಕರ್ಣಾಟಕ ಪ್ರಾಂತ್ಯವಾಗಬೇಕೆಂದು ಹೇಳುವವರು ಒಂದು ಗುಂಪು. ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ಹೇಳುವವರು ಇನ್ನೊಂದು ಗುಂಪು, ಇನ್ನು ಕೆಲವರು ಫಸಲಾಲಿ ಕಮಿಷನ್ನಿನವರು ಏನು ತೀರ್ಮಾನ ಕೊಡುತ್ತಾರೋ ಅದನ್ನು ಒಪ್ಪಿಕೊಳ್ಳೋಣ ಎಂದು ಅಭಿಪ್ರಾಯಪಟ್ಟಿದ್ದಾರೆ. ಶ್ರೀಮಾನ್ ತಿಮ್ಮಪ್ಪಗೌಡರ ವಾದವನ್ನು ನೋಡಿದ ಪಕ್ಷಕ್ಕೆ, ಅವರು ಈ ಭಾಷಣವನ್ನು ಫಸಲಾಲಿ ಸಮಿತಿ ನೇಮಕವಾಗುವುದಕ್ಕೆ ಮುಂಚೆಯೇ ಮಾಡಿದ್ದರೆ ಬಹುಶಃ ಚೆನ್ನಾಗಿರುತ್ತಿತ್ತೆಂದು ಕಾಣುತ್ತದೆ. ಈಗಾಗಲೇ ಇಂಡಿಯಾ ಸರ್ಕಾರದವರು ಈ ಕಮಿಷನ್ನನ್ನು ನೇಮಿಸಿದ್ದಾಗಿದೆ; ಅವರ ಹೇಳಿಕೆಯಂತೆ ಪ್ರಾಂತ್ಯ ವಿಂಗಡಣೆ ಆಗಬೇಕಾಗಿದೆ. ಅಂದಮೇಲೆ ಇನ್ನು 15-20 ವರ್ಷಗಳು ಮುಂದಕ್ಕೆ ಹಾಕೋಣವೆನ್ನುವ ಪ್ರಶ್ನೆಯೇ ಇಲ್ಲ. ಈಗಿರತಕ್ಕ ಇಂಡಿಯಾ ದೇಶದ ಸನ್ನಿವೇಶ ನೋಡಿದರೆ; ಈಗ 28 ಸಂಸ್ಥಾನಗಳಿವೆ. ಈ ಸಂಸ್ಥಾನಗಳನ್ನು ಎ. ಬಿ. ಸಿ ತರಗತಿಯ ಸಂಸ್ಥಾನಗಳೆಂದು ವಿಂಗಡಿಸಿರುವುದರಲ್ಲಿ ಭೌಗೋಳಿಕವಾಗಿಯಾಗಲಿ, ಚಾರಿತ್ರಕವಾಗಿಯಾಗಲಿ, ಐತಿಹಾಸಿಕವಾಗಿಯಾಗಲಿ, ಯಾವ ರೀತಿಯಲ್ಲೇ ನೋಡಿದರೂ ನ್ಯಾಯ-ನೀತಿಗಳಿಲ್ಲ. ಅದರಲ್ಲೂ ದಕ್ಷಿಣ ಇಂಡಿಯಾದ ವಿಷಯದಲ್ಲಿ ಬಹಳ ಅನ್ಯಾಯವಾಗಿದೆ. ಇದಕ್ಕೆ ಕಾರಣ ಚಾರಿತ್ರಕ ವಿಷಯವಾಗಿದೆ. ಇಂಗ್ಲೀಷರು ಇದ್ದಾಗ ಆಗಿನ ತಮ್ಮ ಅನುಕೂಲಕ್ಕೆ ತಕ್ಕಂತೆ ವಿಂಗಡಣೆ ಮಾಡಿದರು. ಇದರಿಂದ ದಕ್ಷಿಣ ಇಂಡಿಯಾದವರಿಗೆ ಹೆಚ್ಚಿನ ಕಷ್ಟವಾಗಿದೆಯೇ ಹೊರತು, ಉತ್ತರ ಇಂಡಿಯಾದವರಿಗೆ ಇದರಿಂದ ಏನೂ ಧಕ್ಕೆಯಿಲ್ಲ. ಶ್ರೀಮಾನ್ ತಿಮ್ಮಪ್ಪಗೌಡರು ಹೇಳಿದರು, ಇಂಡಿಯಾ ದೇಶದಲ್ಲಿ ಇಂಥ ಅನೇಕ ಕ್ಲಿಷ್ಟವಾದ ಸಮಸ್ಯೆಗಳಿವೆ, ಆದ್ದರಿಂದ ಸದ್ಯಕ್ಕೆ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಬಹುದು ಎಂದು ಹೇಳಿದರು. ಆದರೆ, ಅವರೇ ಈ ಸಂದರ್ಭದಲ್ಲಿ ಹೇಳಿದ ಒಂದು ವಿಷಯವನ್ನು ಅರ್ಥಮಾಡಿಕೊಳ್ಳೋಣ. ಅವರು ಪೂಣೆಯಲ್ಲಿ ಓದುತ್ತಿರುವಾಗ ಅಲ್ಲಿನ ಮಹರಾಷ್ಟ್ರದ ಜನರು ಕನ್ನಡಿಗರನ್ನು ಯಾವ ರೀತಿ ತುಚ್ಛವಾಗಿ ಕಾಣುತ್ತಿದ್ದರೆಂಬುದನ್ನು ತಿಳಿಸಿದ್ದಾರೆ. ಮಾನ್ಯ ಶ್ರೀ ತಿಮ್ಮಪ್ಪಗೌಡರು ಮರಾಠಿಗರು ಕನ್ನಡಿಗರಿಗೆ ಇಷ್ಟು ಕಷ್ಟ ಕೊಡುತ್ತಿದ್ದಾರೆಂಬುದನ್ನು ತಿಳಿದಿದ್ದರೂ ಅವರದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಭಾಷಾವಾರು ಪ್ರಾಂತ್ಯ ವಿಂಗಡನೆ ಇನ್ನೂ ಮುಂದಕ್ಕೆ ಹೋಗಬಹುದೆಂದು ಹೇಳುವಾಗ ನನ್ನ ಮನಸ್ಸಿಗೆ ವ್ಯಸನವಾಗುತ್ತದೆ.

ಸ್ವಾಮಿ, 1799ನೆಯ ಇಸವಿಯಲ್ಲಿ ಮೈಸೂರು ಯುದ್ಧಕ್ಕೆ ಮುಂಚೆ ಕರ್ಣಾಟಕವೆಲ್ಲಾ ಒಂದಾಗಿತ್ತು. ಈ ಯುದ್ಧವಾದಮೇಲೆ, ನಾಲ್ಕು ಭಾಗವಾಗಿ ಬೊಂಬಾಯಿ ಕೊನೆಯಲ್ಲಿ, ಮದ್ರಾಸಿನ ಕೊನೆಯಲ್ಲಿ ಕನ್ನಡ ಭಾಗಗಳು ವಿಧವಿಧವಾಗಿ ಸೇರಿಕೊಂಡವು. ಆ ಪ್ರಾಂತ್ಯಗಳಲ್ಲಿ ತೆಲುಗು, ತಮಿಳು ಭಾಷೆಗಳವರು ಮೆಜಾರಿಟಿಯಲ್ಲಿದ್ದುದರಿಂದ, ಅವರು ಈ ಅಲ್ಪ ಸಂಖ್ಯಾತರಾದ ಕನ್ನಡಿಗರಿಗೆ ಹೆಚ್ಚಿಗೆ ತೊಂದರೆ ಕೊಡುತ್ತಾ ಬಂದುದರ ದೆಸೆಯಿಂದ ಕರ್ನಾಟಕ ಪ್ರಾಂತ್ಯ ಸಂಕುಚಿತವಾಗುತ್ತಾ ಬರುತ್ತಿದೆ. ಬಹು ಸಂಖ್ಯಾತರಾದ

ಭಾಷಾ ಜನಗಳು ಅಲ್ಪಸಂಖ್ಯಾತರಾದ ಭಾಷಾ ಜನಗಳಮೇಲೆ ದಬ್ಬಾಳಿಕೆ ನಡೆಸುತ್ತಾ, ಯಾವ ಸೌಕರ್ಯವನ್ನೂ ಕೂಡ ಕೊಡದೆ ಬರಬರುತ್ತಾ ಪೂರ್ವ ಪಾಕಿಸ್ಥಾನ ಹೇಗೆ ಇಂಡಿಯಾ ದೇಶವನ್ನು ಬಿಟ್ಟು ಹೊರಗೆ ಹೋಗಬೇಕಾಯಿತೋ ಹಾಗೆಯೇ ನಾವೂ ಇನ್ನು 10-15 ವರ್ಷ ಸುಮ್ಮನಿದ್ದರೆ ಮೈಸೂರುದೇಶದ ಕರ್ಣಾಟಕದಲ್ಲಿಯೂ ಕನ್ನಡ ಮಾತನಾಡುವರೂ ಇಲ್ಲದಂತಾಗುವ ಪರಿಸ್ಥಿತಿ ಬಂದೀತೆಂದು ನನಗನ್ನಿಸುತ್ತದೆ. ನಾವು ಮೈಸೂರಿನವರು, ಸುಖವಾಗಿದ್ದೇವೆ, ಮೈಸೂರೇತರ ಕನ್ನಡಿಗರ ಕಷ್ಟ ನಮಗೇಕೆ, ಏನಾದರೂ ಮಾಡಿಕೊಳ್ಳಲಿ ಎಂದು ಅನೇಕ ಸ್ನೇಹಿತರು ಹೇಳಿದರು. ಈ ವಾದ ಸಮಂಜಸವಾದದ್ದಲ್ಲ. ನಮ್ಮಲ್ಲಿಯೂ ಹರಿಜನರಿದ್ದಾರೆ. ಕೆಲವು ಹಿಂದುಳಿದ ಡಿಸ್ಟ್ರಿಕ್ಟುಗಳೂ ನಮ್ಮಲ್ಲಿವೆ. ಅವರು ಹಿಂದುಳಿದಿರುವಾಗ, ಅವರ ಕಷ್ಟ ನಮಗೇಕೆ, ಅವರನ್ನೇ ಬೇರೆ ಪ್ರಾಂತ್ಯಕ್ಕೆ ಕಳುಹಿಸೋಣ, ಚೆನ್ನಾಗಿರುವವರು ಚೆನ್ನಾಗಿಯೇ ಇರೋಣ ಎಂದು ಹೇಳುವುದು ನ್ಯಾಯವೇ? ಆ ಕರ್ಣಾಟಕ ಪ್ರಾಂತ್ಯದವರೂ ನಮ್ಮ ಸ್ನೇಹಿತರು, ಬಂಧುಗಳು. ಅವರು ಹಿಂದುಳಿದಿದ್ದಾರೆಂದು ಹೇಳಿ ಅವರು ನಮ್ಮ ಮಟ್ಟಕ್ಕೆ ಬರುವವರೆಗೂ ಬೇರೆ ಪ್ರಾಂತ್ಯ ಮಾಡಿಕೊಳ್ಳಲಿ ಎಂದು ಹೇಳುವುದು ಚೆನ್ನಾಗಿಲ್ಲ. ಅದು ಸೂಕ್ತವೂ ಅಲ್ಲ. ಈ ರೀತಿಯ ನಿರ್ಲಕ್ಷ್ಯದಿಂದಲೇ ಇತರ ಕನ್ನಡಿಗರಿಗೆ ತೊಂದರೆಯಾಗುತ್ತಿದೆಯೆಂಬುದನ್ನು ನಾನು ಸೂಚಿಸಬಯಸುತ್ತೇನೆ. ಈ ಕಾರಣದಿಂದಲೇ ಬಾಕಿ ಬಹುಸಂಖ್ಯಾತ ಭಾಷಾ ಜನಗಳ ಕಿರುಕುಳಕ್ಕೆ ಸಿಕ್ಕಿ ಯಾವ ಪ್ರಗತಿಯನ್ನೂ ಹೊಂದದೆ ಹಿಂದುಳಿಯಲು ಕಾರಣವಾಗಿರುವುದರಿಂದ ನಾವು ಈಗಲಾದರೂ ಮುನ್ನೆಚ್ಚರಿಕೆ ತೆಗೆದುಕೊಂಡು ಆ ಸಹೋದರರನ್ನೂ ನಮ್ಮ ಸಂಗಡ ಸೇರಿಸಿಕೊಂಡು ಅತ್ಯಂತ ವೈಭವಯುತವಾಗಿ ಕರ್ಣಾಟಕ ಸಂಸ್ಕೃತಿಯು ಇನ್ನೂ ದೇದೀಪ್ಯಮಾನದಿಂದ ಬೆಳಗುವಂತೆ ಮಾಡಲು ಪ್ರಯತ್ನಿಸುವುದೊಳ್ಳೆಯದಲ್ಲವೆ?

4-30 P.M.

ಈಗಾಗಲೇ ಶ್ರೀ ಅನಂತರಾಮಯ್ಯರವರು ಹೇಳಿರುವ ಹಾಗೆ, ಆಂಧ್ರರಿಗೆಲ್ಲಾ ಆಂಧ್ರದೇಶದ ಜನರಮೇಲೆ ಹೆಚ್ಚು ಪ್ರೇಮವಿರುತ್ತದೆ. ತಮಿಳರಿಗೆ ತಮಿಳು ದೇಶದ ಜನರಮೇಲೆ ಹೆಚ್ಚು ಪ್ರೇಮವಿರುತ್ತದೆ. ಇದರಂತೆಯೇ ಆಯಾ ಜನಾಂಗದವರಿಗೆ ಮತ್ತು ಭಾಷೆಯವರಿಗೆ ಅವರವರ ದೇಶದಮೇಲೆ ಮತ್ತು ಭಾಷಾ ಜನಗಳಮೇಲೆ ಹೆಚ್ಚಿನ ಅಭಿಮಾನವಿದ್ದೇ ಇರುತ್ತದೆ. ಆದರೆ ಆ ರೀತಿ ಇತರ ಭಾಷಾವಾರು ಪ್ರಾಂತ್ಯಗಳೆಲ್ಲಾ ಅಭಿವೃದ್ಧಿಗೆ ಬರಲಿ, ಈ ಕನ್ನಡನಾಡು ಮತ್ತು ಕನ್ನಡಿಗರ ಏಳಿಗೆ ಏನಾದರೂ ಆಗಲಿ ಎಂದು ಹೇಳುವುದು ಬಹಳ ತಪ್ಪು. ಸ್ವಾಮಿ, ದೇಶಕ್ಕೆ ಸ್ವಾತಂತ್ರಬಂದಿದೆ. ನಾವೆಲ್ಲರೂ ಹೀಗೇ ಯಾವಾಗ್ಲೂ ಸುಖವಾಗಿರುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ದೇಶದಲ್ಲಿ ಎಲ್ಲಾ ಜನಾಂಗಗಳೂ ಸುಖವಾಗಿರಬೇಕು. ಇಲ್ಲದಿದ್ದರೆ ಕ್ರಾಂತಿಕಾರಕ ಬದಲಾವಣೆಗಳಾಗುವುದು ಖಂಡಿತ. ದೇಶಕ್ಕೆ ಲಭಿಸಿರತಕ್ಕ ಸ್ವಾತಂತ್ರ್ಯ ಉಳಿಯಬೇಕಾದರೆ ದೇಶದಲ್ಲಿರತಕ್ಕಂಥ ಜನರೆಲ್ಲಾ ಸುಖವಾಗಿರಲೇಬೇಕು. ಇಷ್ಟೇ ಅಲ್ಲದೆ ದೇಶ ದೊಡ್ಡದಾಗಿದ್ದು, ಜನಾಂಗವೂ ಸಹ ದೊಡ್ಡದಾಗಿದ್ದರೆ ಆ ದೇಶದ ಮೇಲೆ ಯಾರಾದರೂ ಧಾಳಿ ಮಾಡಲು ಉಪಕ್ರಮಿಸಿದರೆ ಅದನ್ನು ತಡೆಗಟ್ಟಲು ಮತ್ತು ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ನಮಗೊಂದು ಹೆಚ್ಚಿನ ಅವಕಾಶವಿರುತ್ತದೆ. ಆದರೆ ಈ ರೀತಿಯಾಗಿ ಒಂದು ತತ್ವದ ಆಧಾರದಮೇಲೆ ಒಂದು ದೇಶವನ್ನು ಕಟ್ಟಬೇಕೆಂದು ಹೇಳುವಾಗ ಯಾರೂ ಈ ಆರ್ಥಿಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಳ್ಳದೆ ಅದನ್ನು ಮಾಡಿ ಎಂದು ಹೇಳುವುದಿಲ್ಲ. ಅಕ್ಕಪಕ್ಕದಲ್ಲಿ ವಾಸ ಮಾಡತಕ್ಕಂಥ ಒಂದು ಭಾಷೆಯ ಜನರು ಅಧಿಕ ಸಂಖ್ಯೆಯಲ್ಲಿ ಎಲ್ಲೆಲ್ಲಿ ವಾಸಮಾಡುತ್ತಿದ್ದಾರೋ ಅಂಥವರನ್ನೆಲ್ಲಾ ಒಟ್ಟುಕೂಡಿಸಿ ಒಂದು ಪ್ರಾಂತ್ಯವನ್ನು ಮಾಡಬೇಕೆಂದು ಹೇಳಬಹುದೇ ಹೊರತು ಬೊಂಬಾಯಿ ಪಟ್ಟಣದಲ್ಲಿ ಒಂದು ಭಾಗದಲ್ಲಿ ಹೆಚ್ಚು ಕನ್ನಡಿಗರಿದ್ದರೆ ಆ ಭಾಗವನ್ನು ಕರ್ನಾಟಕ ಪ್ರಾಂತ್ಯಕ್ಕೆ ಸೇರಿಸಿ ಎಂದು ಹೇಳಲು ಸಾಧ್ಯವಿಲ್ಲ. ಬಾಕಿ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಅಂತು ಮುಖ್ಯವಾಗಿ ಭಾಷೆಯ ಆಧಾರದಮೇಲೆ ಪ್ರಾಂತ್ಯ ವಿಂಗಡನೆ ಮಾಡುವುದು ಅತಿ ಸಾಧುವೂ, ನ್ಯಾಯವೂ ಆದ ಮಾರ್ಗವೆಂದು ನಾನು ಹೇಳಬಯಸುತ್ತೇನೆ. ಇದು ಬಹಳ ಆವಶ್ಯಕವಾದಂಥ ವಿಚಾರ. ಆದರೆ ಈಗಾಗಲೇ ಮಾತನಾಡಿರತಕ್ಕ ಸದಸ್ಯರ ಪೈಕಿ ಶ್ರೀ ಎ. ವಿ. ನರಸಿಂಹರೆಡ್ಡಿಯವರೂ ಮತ್ತು ಡಿ. ದೇವರಾಜ ಅರಸಿನವರೂ ಈ ಏಕೀಕರಣ ಪ್ರಾಂತ್ಯಕ್ಕೆ ಬಹಳ ಜನರ ವಿರೋಧಾಭಿಪ್ರಾಯವಿದೆ ಎಂದು ಹೇಳಿದರು. ಅಷ್ಟೇ ಅಲ್ಲದೆ ಅವರು ಮುಂದುವರಿದು ಭಾಷಣಮಾಡುತ್ತ ಈ ಅಸೆಂಬ್ಲಿಯಲ್ಲೇ ಸುಮಾರು 60 ಜನ ಸದಸ್ಯರು ಈ ಕರ್ಣಾಟಕ ಪ್ರಾಂತ್ಯ ನಿರ್ಮಾಣಕ್ಕೆ ವಿರೋಧವಾಗಿದ್ದಾರೆ ಅಂತಲೂ ಹೇಳಿದರು. ಆದರೆ ಇದೆಲ್ಲಾ ಅವರ ಮನಸ್ಸಿನಲ್ಲಿರುವಂಥ ಒಂದು ವಿಷನ್ ಥಿಂಕಿಂಗ್ ಎಂದು ಕಾಣುತ್ತದೆ. ಅಂದರೆ ಅವರ ಸ್ವಂತ ಅಭಿಪ್ರಾಯದ ಅಳತೆಯ ಕೋಲಿನಿಂದ ವಿಧಾನಸಭಾ ಸದಸ್ಯರ ಅಭಿಪ್ರಾಯವನ್ನು ಅಳತೆಮಾಡುತ್ತಿದ್ದಾರೆ. ಮುಕ್ಕಾಲು ಭಾಗದ ಜನರು ಇದಕ್ಕೆ ವಿರೋಧವಾಗಿದ್ದಾರೆಂದು ಅವರು ಹೇಳಿದರು. ಇದನ್ನು ಅವರು ಯಾವ ಗಣಿತ ಶಾಸ್ತ್ರದ ಆಧಾರದಮೇಲೆ ಹೇಳಿದ್ದಾರೋ ಅದು ನನಗಂತೂ ಹೊಳೆಯುತ್ತಿಲ್ಲ. ಈಗಾಗಲೇ ದೇಶಾದ್ಯಂತವೂ ಇರತಕ್ಕ ಜನರೆಲ್ಲರೂ ತಕ್ಷಣ ಈ ಕರ್ಣಾಟಕ ಪ್ರಾಂತ್ಯ ರಚನೆಯಾಗಬೇಕೆಂದು ಎಲ್ಲಾ ಪತ್ರಿಕೆಗಳ ಮೂಲಕವೂ ಪ್ರಕಟಣೆಗಳನ್ನು ಹೊರಡಿಸುತ್ತಲೇ ಇದ್ದಾರೆ. ಆದುದರಿಂದ ಈಗಾಗಲೇ ಮಾತನಾಡಿರತಕ್ಕಂಥ ಆ ಶ್ರೀ ಎ. ವಿ. ನರಸಿಂಹರೆಡ್ಡಿಯವರು ಮತ್ತು ಡಿ. ದೇವರಾಜಅರಸ್ ಇವರುಗಳು ಹೇಳಿರತಕ್ಕಂಥ ಅಭಿಪ್ರಾಯಗಳು ಅವರ ಸ್ವಂತ ಅಭಿಪ್ರಾಯಗಳಾಗಿವೆ. ದೇಶದಲ್ಲಿ ಮುಕ್ಕಾಲು ಭಾಗದ ಜನರು ಈ ಕರ್ಣಾಟಕ ಪ್ರಾಂತ್ಯ ಬೇಗ ನಿರ್ಮಾಣವಾಗಬೇಕೆಂದು ಹೇಳಿದ್ದಾರೆ. ಈ ಅಸೆಂಬ್ಲಿಯಲ್ಲಿ ಕೂಡ ಮುಕ್ಕಾಲುಪಾಲು ಸದಸ್ಯರು ರಾಜ್ಯಗಳ ಪುನರ್ವಿಂಗಡಣೆಯಾಗಬೇಕು, ಕರ್ಣಾಟಕ ಪ್ರಾಂತ್ಯ ರಚನೆಯಾಗಬೇಕೆಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. The majority of the members are for forming Karnataka as early as possible.

ಸ್ವಾಮಿ ಇನ್ನು ಶ್ರೀ ಜಿ. ಎ. ತಿಮ್ಮಪ್ಪಗೌಡರು ಮಾತನಾಡುತ್ತ ಕಾಂಗ್ರೆಸ್ ಸಂಸ್ಥೆಯವರು ಸಮಯಕ್ಕೆ ತಕ್ಕಹಾಗೆ ಈ ವಿಚಾರದಲ್ಲಿ ಮಾತನಾಡಿದ್ದಾರೆಯೇ ಹೊರತು ಇದು ಆಗಲೇ ಬೇಕೆಂಬ ಉದ್ದೇಶ ಕಾಂಗ್ರೆಸ್ ಸಂಸ್ಥೆಗೇನೂ ಇರಲಿಲ್ಲ ಎಂದು ಹೇಳಿದರು. ಎಂ. ಪಿ. ಸಿ. ಸಿ. ಯವರು ಈ ವಿಚಾರವಾಗಿ ಯಾವತ್ತೂ ಒತ್ತಾಯ ಮಾಡಿಲ್ಲ ಎಂದು ಹೇಳಿದರು. ಮೈಸೂರು ವಿಶಾಲವಾಗಬೇಕೆಂದು ಎಲ್ಲಾ ಪಕ್ಷಗಳು ಹೇಳುತ್ತಿರುವಾಗ ಇವರು ಈ ರೀತಿ

(ಶ್ರೀ ಟಿ. ಸಿ. ಬಸಪ್ಪ.)

ಹೇಳಿದ್ದು ಬಹಳ ಆಶ್ಚರ್ಯ. ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣವನ್ನೂ ಮತ್ತು ಕರ್ಣಾಟಕ ಪ್ರಾಂತ್ಯ ನಿರ್ಮಾಣವನ್ನೂ ಕಾಂಗ್ರೆಸ್ ಸಂಸ್ಥೆ ಬಹಳ ಹಿಂದಿನಿಂದಲೂ ಒಪ್ಪಿಕೊಂಡು ಆ ತತ್ವವನ್ನು ಆದಷ್ಟು ಬೇಗ ಆಚರಣೆಯಲ್ಲಿ ತರಬೇಕೆಂದಿರುವಾಗ ಕೆಲವು ಮಾನ್ಯ ಸದಸ್ಯರು ಕಾಂಗ್ರೆಸ್ಸಿನವರು, ಈ ವಿಚಾರದಲ್ಲಿ ಇನ್ನೂ ಭಿನ್ನಾಭಿಪ್ರಾಯ ಹೊಂದಿದ್ದಾರೆಂದು ಹೇಳಿರತಕ್ಕದ್ದು ಬಹಳ ಆಶ್ಚರ್ಯವನ್ನುಂಟುಮಾಡಿರುತ್ತದೆ. ಇಷ್ಟೇ ಅಲ್ಲದೆ ಹೀಗೆ ಆದಿಯಿಂದಲೂ ಕಾಂಗ್ರೆಸ್ ಸಂಸ್ಥೆ ಮತ್ತು ಇತರ ಅನೇಕ ಸಂಘ ಸಂಸ್ಥೆಗಳು ಈ ತತ್ವವನ್ನು ಅಂಗೀಕಾರಮಾಡಿದ್ದಾಗ್ಯೂ ಈ ರಾಜ್ಯಗಳ ಪುನರ್ವಿಂಗಡಣೆಯಿಂದ ದೇಶದಲ್ಲಿ ಅನೈಕಮತ್ಯ ಉಂಟಾಗುತ್ತದೆಂದು ಹೇಳಿರತಕ್ಕದ್ದು ಇನ್ನೂ ಪರಮಾಶ್ಚರ್ಯವನ್ನುಂಟುಮಾಡಿದೆ. ಮಹಾತ್ಮ ಗಾಂಧಿಯವರ ಹೆಸರನ್ನೂ ಸಹ ಬಳಸಿ "ಅವರು ಈ ಭಾಷಾವಾರು ಪ್ರಾಂತ್ಯಗಳ ನಿರ್ಮಾಣದ ವಿಚಾರವನ್ನು ಆಗಿನ ಕಾಲ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೇಳಿದ್ದರೇ ಹೊರತು ಅವರಿಗೆ ಈ ಬಗ್ಗೆ ಅಷ್ಟಾಗಿ ಅಭಿಪ್ರಾಯವಿರಲಿಲ್ಲ" ಎಂದು ಕೂಡ ಹೇಳಿದ್ದಾರೆ. ಮಹಾತ್ಮ ಗಾಂಧಿಯವರು ಈ ಬಗ್ಗೆ ಏನು ಹೇಳಿದ್ದಾರೆಂಬುದನ್ನೀಗ ನೋಡೋಣ.

"The creation of Karnataka as a separate province cannot be resisted and I cherish the idea of Karnataka Province being formed."

ಅವರು ಹೀಗೆಂದು ಹೇಳಿದ್ದಾರೆ. ನೆಹರೂರವರ ಸಮಿತಿಯವರೂ ಕೂಡ ಈ ವಿಚಾರದಲ್ಲಿ ಒಂದು ನಿರ್ಧಾರವಾದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದು ಈರೀತಿ ಇದೆ.

"It is well recognised that rapid progress in education as well as in general culture and in most departments of life depends on language. If a foreign language is the medium of instruction, business and affairs and the life of the country must necessarily be stunted. No democracy can exist where a foreign language is used for these purposes. A democracy must be well informed and must be able to understand and follow public affairs in order to take an effective part in them. It is inconcievable that a democracy can do this if a foreign language is largely used. It becomes essential, therefore, to conduct the business and politics of a country in a language which is understood by the masses. So far as the provinces are concerned this must be the provincial language. We are certainly not against the use of English. Indeed from the necessities of the situation we feel that English must, as at present, continue for some time to come to be the most convenient medium for debate in the Central Legislature. We also believe that a foreign language—and this is likely to be English—is essential for us to develop contacts with the thoughts and the science and life of other countries. . . ."

ಹೀಗೆ ಆ ನೆಹ್ರೂರವರ ಸಮಿತಿಯವರೂ ಕೂಡ ಈ ಪ್ರಾಂತ್ಯಗಳ ನಿರ್ಮಾಣದ ವಿಚಾರವಾಗಿ ಹೇಳುತ್ತ ಪ್ರಾಂತೀಯ ಭಾಷೆಗೆ ಬಹಳ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಅವರ ವರದಿಯಲ್ಲೇ ನಮೂದಿಸಿರುತ್ತಾರೆ. ಇದೆಲ್ಲವೂ ಆದ ಬಳಿಕ ಇತ್ತೀಚೆಗೆ ನೆಹ್ರೂ ಅವರು ಕರ್ಣಾಟಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದಂಥ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಬರೆದಿರತಕ್ಕ ತಾರೀಖು 28-10-1953ರ ಪತ್ರ ಒಂದರಲ್ಲಿ ಹೀಗೆ ಬರೆದಿರುತ್ತಾರೆ:

"As I have said above, Karnataka's claim for a separate State is not only well known but is generally accepted. The question is in what manner to give effect to it. I do not think that Mysore offers much difficulty."

ಈ ಎಲ್ಲಾ ಕಾರಣಗಳಿಂದ ನಾನು ಹೇಳುವುದೇನೆಂದರೆ ಈ ಕರ್ಣಾಟಕ ಪ್ರಾಂತ್ಯ ರಚನೆಯ ಬಗ್ಗೆ ಅವರಾರಿಗೂ ಯಾವ ಭಿನ್ನಾಭಿಪ್ರಾಯವೂ ಇರುವುದಿಲ್ಲವೆಂಬುದು ಸರ್ವರಿಗೂ ವೇದ್ಯವಾಗುತ್ತದೆ. ಆದರೆ ಮೈಸೂರಿನಲ್ಲಿ ಮಾತ್ರ ಕೆಲವರಿಗೆ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿರಬಹುದು. ಆದರೆ ಆ ಭಿನ್ನಾಭಿಪ್ರಾಯಕ್ಕೆ ನಿಜವಾದ ಆಧಾರಗಳು ಮಾತ್ರ ಯಾವವೂ ಇರುವುದಿಲ್ಲವೆಂದು ನನಗೆ ಹೊಳೆಯುತ್ತಿದೆ. ಅಂತೂ ಒಟ್ಟಿನಲ್ಲಿ ಹೇಳುವುದಾದರೆ ದೇಶದಲ್ಲಿರತಕ್ಕಂಥ ಜನರೆಲ್ಲರೂ ಇದಕ್ಕೆ ಒಪ್ಪಿದ್ದಾರೆಂದು ನಾನು ಖಚಿತವಾಗಿ ಹೇಳಲಿಚ್ಛಿಸುತ್ತೇನೆ.

ಈಗ ನಮ್ಮ ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಶೇಷಾದ್ರಿ ವರದಿಯಲ್ಲಿ ಅವರು ಕೆಲಕೆಲವು ಅಭಿಪ್ರಾಯಗಳನ್ನು ಮಾತ್ರ ಕೊಟ್ಟಿದ್ದಾರೆ. ಇನ್ನು ಕೆಲವು ಅಂಕಿ ಅಂಶಗಳು ದೊರೆತಿಲ್ಲವೆಂದು ಹೇಳಿದ್ದಾರೆ. ಆದುದರಿಂದ ಈ ವರದಿ ಸಂಪೂರ್ಣವಾದುದಲ್ಲವೆಂಬುದು ಸರ್ವರಿಗೂ ವೇದ್ಯವಾಗುತ್ತದೆ. ಇದೊಂದು ಸಂಪೂರ್ಣ ವರದಿಯೆಂದು ಅನಿಸಿಕೊಳ್ಳಬೇಕಾಗಿದ್ದರೆ ಇದರಲ್ಲಿ ಇನ್ನೂ ಅನೇಕ ವಿಷಯಗಳನ್ನು ಅವರು ಅಡಕಮಾಡಬೇಕಾಗಿತ್ತು. ಆದಕಾರಣ ನಾವೀದಿವಸ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ನಾವು ಇದರಲ್ಲಿ ಕಂಡ ಅಂಕಿ ಅಂಶಗಳಮೇಲೆ ಅಷ್ಟು ಗಮನವಿಟ್ಟು ಮಾತನಾಡಬೇಕಾದ ಅವಶ್ಯಕತೆಯಿಲ್ಲವೆಂಬುದು ತಾನಾಗಿಯೇ ವೇದ್ಯವಾಗುತ್ತದೆ. ಆದರೆ ಕೇಂದ್ರಸರ್ಕಾರದವರು ನೇಮಿಸಿರತಕ್ಕಂಥ ಫಸಲಾಲಿ ಸಮಿತಿಯವರೂ ಸಹ ಮೈಸೂರು ಸಂಸ್ಥಾನಕ್ಕೆ ಬಂದು ಇಲ್ಲಿಯ ಜನರ ಅಭಿಪ್ರಾಯವನ್ನು ಶೇಖರಣೆ ಮಾಡಿಕೊಂಡು ಹೋಗಿದ್ದಾರೆ. ಆದರೆ ಈ ದಿವಸ ಈ ರಾಜ್ಯಗಳ ಪುನರ್ವಿಂಗಡಣೆಯಾಗಬೇಕೆಂದು ಹೇಳುವಾಗ ನಮ್ಮ ದೇಶದ ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ತೆಗೆದುಕೊಂಡು ಹೋಗಿ

ಬಂಗಾಳಕ್ಕೆ ಸೇರಿಸಬೇಕೆಂದರೆ ಸಾಧ್ಯವಾಗುತ್ತದೆಯೇನು ? ಆ ರೀತಿ ಮಾಡಬೇಕೆಂದು ಯಾರೂ ಹೇಳುವುದಿಲ್ಲ. ಅದು ಸಾಧ್ಯವೂ ಇಲ್ಲ. ಆದರೆ ಅಡ್ಮಿನಿಸ್ಟ್ರೇಷನ್ನಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳಲ್ಲಿ—ನಮ್ಮ ದೇಶಕ್ಕೆ ಹೊಂದಿಕೊಂಡಿರುವಂಥ ಬೊಂಬಾಯಿ, ಮದ್ರಾಸು, ಹೈದರಾಬಾದ್ ಮತ್ತು ಕೊಡಗು ಈ ಪ್ರಾಂತ್ಯಗಳಲ್ಲಿ ಹೆಚ್ಚು ಭಾಗ ಕನ್ನಡ ಮಾತನಾಡುವಂಥ ಭಾಗಗಳು ಯಾವ ಯಾವವು ಇವೆಯೋ ಅಂಥ ಭಾಗಗಳನ್ನು ಮಾತ್ರ ಸೇರಿಸಿ ಒಂದು ಪ್ರಾಂತ್ಯ ನಿರ್ಮಾಣಮಾಡಬೇಕೆಂದು ಹೇಳುವುದರಲ್ಲಿ ತಪ್ಪೇನಿದೆ? ಈ ದಿವಸ ಭಾಷೆಯ ಆಧಾರದಮೇಲೆ ಆಂಧ್ರಪ್ರಾಂತ್ಯ ನಿರ್ಮಾಣವಾಗಿಲ್ಲವೇನು ? ಈ ಭಾಷೆ ಆಧಾರದಮೇಲೆಯೇ ಆ ಆಂಧ್ರ ಪ್ರಾಂತ್ಯ ನಿರ್ಮಾಣವಾಯಿತು. ಆಗ ಅದರಲ್ಲಿ ಅಡಕ ಮಾಡಲು ಸಾಧ್ಯವಾಗದೆ ಇದ್ದಂಥ ಕನ್ನಡ ಪ್ರದೇಶವಾಗಿದ್ದ ಆ ಬಳ್ಳಾರಿ ಜಿಲ್ಲೆಯನ್ನು ನಮ್ಮ ಮೈಸೂರಿಗೆ ಸೇರಿಸಿ ಕೊಟ್ಟಿದ್ದಾರೆ.

ಯಾರು ಏನೇ ಮಾತಾಡಲಿ, ಈಗ ಪ್ರಾಂತಗಳನ್ನು ವಿಂಗಡನೆ ಮಾಡಬೇಕಾದರೆ, ಭಾಷಾದೃಷ್ಟಿಯೇ ಮುಖ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಮುಂದೆಯೂ ಸಹ ಇದೇ ರೀತಿ ವಿಂಗಡನೆಯಾಗುವುದಕ್ಕೆ ಅವಕಾಶವಿದೆ. ಇನ್ನೊಂದು ವಿಷಾದದ ಸಂಗತಿಯೆಂದರೆ, ಶೇಷಾದ್ರಿ ಸಮಿತಿಯವರು ತಮ್ಮ ವರದಿಯಲ್ಲಿ ಹೇಳಿರುವ ವಿಚಾರ,

> ‘‘ಮೇಲೆ ಕಂಡ ಸರ್ವೆ ಪರಿಶೀಲನೆಯಿಂದ, ಸರಹದ್ದುಗಳನ್ನು ಎಷ್ಟೇ ಜಾಗರೂಕತೆಯಿಂದ ನಿರ್ಧರಿಸಿದರೂ, ಭಾಷಾವಾರು ಆಧಾರದ ಮೇಲೆ ಜನರನ್ನು ವರ್ಗಾಯಿಸುವಂತೆ ನಾವು ಉದ್ದೇಶಿಸಿದ ಹೊರತು ಬೇರೆ ಬೇರೆ ಭಾಷೆಗಳನ್ನಾಡತಕ್ಕ ಅಲ್ಪ ಸಂಖ್ಯಾತರನ್ನು ಬಿಟ್ಟು ಬಿಡುವುದಕ್ಕೆ 'ಸಾಧ್ಯವಿಲ್ಲವೆಂಬುದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಭಾಷಾವಾರು ಆಧಾರದಮೇಲೆ ಪ್ರದೇಶಗಳ ಪುನರ್ವಿಂಗಡನೆಯ ಸಮಸ್ಯೆಯನ್ನು ಬಗೆಹರಿಸುವುದು ನಾವು ಭಾವಿಸುವಷ್ಟು ' ಸುಲಭಸಾಧ್ಯವಾದ ಸಮಸ್ಯೆಯಲ್ಲವೆಂಬುದು ನಮಗೆ ವ್ಯಕ್ತವಾಗುವುದು.’’

ಬೊಂಬಾಯಿ ಪಟ್ಟಣದಲ್ಲಿರತಕ್ಕ ಕನ್ನಡಿಗರನ್ನು ಇಲ್ಲಿಗೆ ವರ್ಗಾಯಿಸಿ ಇಲ್ಲಿರತಕ್ಕ ಬೇರೆ ಭಾಷೆಮಾತನಾಡುವ ಜನಗಳನ್ನು ಬೇರೆ ಕಡೆ ವರ್ಗಾಯಿಸಬೇಕಾಗುತ್ತದೆ ಎಂಬ ಅಭಿಪ್ರಾಯ ಅವರಿಗೆ ಬಂತಲ್ಲಾ ಎಂದು ವಿಷಾದವಾಗುತ್ತದೆ. ಮುಖ್ಯವಾಗಿ ಭಾಷೆಯ ಆಧಾರದಮೇಲೆ contiguous areas ಸೇರಿಸಿಕೊಂಡು ಪ್ರಾಂತಗಳನ್ನು ಮಾಡುವುದೇ ಸರಿಯಾದ ಮಾರ್ಗವೆಂದು ತಿಳಿದುಕೊಂಡಿದ್ದೇನೆ.

ಇನ್ನು assets ಮತ್ತು liabilities ವಿಚಾರ ಹೇಳಿದರು. ಮುಖ್ಯ ಮಂತ್ರಿಗಳು ಆಂಧ್ರ ಬಿಲ್ಲಿನಮೇಲೆ ಮಾತನಾಡಬೇಕಾದರೂ ಇದೇ ಪ್ರಶ್ನೆ ಬಂತು. ಅನೇಕರು ಬಳ್ಳಾರಿ ತೆಗೆದುಕೊಂಡರೆ ನಮಗೆ ನಷ್ಟವಾಗುತ್ತದೆ, ತೆಗೆದು ಕೊಳ್ಳಬೇಕಾಗಿಲ್ಲವೆಂದು ವಾದ ಮಾಡಿದರು. ಆದರೆ, ಮಾನ್ಯ ಮುಖ್ಯ ಮಂತ್ರಿಗಳು ‘‘ಉತ್ತರೋತ್ತರ ಬಳ್ಳಾರಿಯಿಂದ ನಷ್ಟವಾಗುವುದಕ್ಕಿಂತ ಅನುಕೂಲವಾಗುತ್ತದೆ’’ ಎಂದು ಹೇಳಿದರು. ಇದೇ ದೃಷ್ಟಿಯನ್ನು ಇಡೀ ಕರ್ಣಾಟಕದ ಪ್ರಾಂತ್ಯ ರಚನೆಯ ವಿಚಾರದಲ್ಲಿ ಇಟ್ಟುಕೊಳ್ಳಬೇಕು. ನಾನು ನೋಡಿದ್ದರಲ್ಲಿ ಇಡೀ ಇಂಡಿಯಾ ದೇಶದಲ್ಲಿ ಎಲ್ಲಕ್ಕಿಂತಲೂ ಸೊಗಸಾದ ಮಲೆನಾಡಿನ ಪ್ರಕೃತಿ ಸೌಂದರ್ಯ, ಖನಿಜ ವಸ್ತುಗಳು, ನೀರಾವರಿಯ ಅವಕಾಶ ಮತ್ತು ವಿದ್ಯುಚ್ಛಕ್ತಿಯ ಅವಕಾಶ—ಇವನ್ನೆಲ್ಲಾ ಉಪಯೋಗಿಸಿಕೊಂಡ ಪಕ್ಷದಲ್ಲಿ ಕರ್ಣಾಟಕ ಪ್ರಾಂತ ಇಡೀ ಭರತ ಖಂಡದಲ್ಲಿ ಹೆಸರುವಾಸಿಯಾದ ಮತ್ತು ಒಂದು ಸುಂದರವಾದ ಹೆಚ್ಚು ಸಂಪತ್ತಿನ ಪ್ರಾಂತ್ಯವಾಗುತ್ತದೆ ಎನ್ನುವುದರಲ್ಲಿ ಏನೇನೂ ಅನುಮಾನವಿಲ್ಲ. ಈ ಬಗೆಯ ಕರ್ಣಾಟಕ ಪ್ರಾಂತವಾಗಬೇಕು. ತಾತ್ಕಾಲಿಕ ಹಣಕಾಸಿನ ಪರಿಸ್ಥಿತಿಯ ದೃಷ್ಟಿಯಿಂದಲೇ ನೋಡದೆ ದೇಶದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಮುಂದಿನ ಭವ್ಯ ಆದರ್ಶವನ್ನು ಗಮನದಲ್ಲಿಟ್ಟುಕೊಂಡು ಮುಖ್ಯವಾಗಿ ನಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸಲು ಅನುಕೂಲವಾಗುವುದರಲ್ಲಿ ಸಂಶಯವಿಲ್ಲ ಎಂಬ ದೃಷ್ಟಿಯಿಂದ ಕರ್ಣಾಟಕ ಪ್ರಾಂತ್ಯ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ಮಾತು. ನಮ್ಮ ಕನ್ನಡ ಭಾಷೆ ಬೆಳೆಯುವುದಕ್ಕೆ ಕಮ್ಮಿ ಜನರಿದ್ದಾರೆ, ಪ್ರಯೋಜನವಿಲ್ಲ. ಪತ್ರಿಕೆಗಳಾಗಲಿ, ಪುಸ್ತಕಗಳಾಗಲಿ ಹೆಚ್ಚಿಗೆ ಬಳಕೆಗೆ ಬರಲು ಅಥವಾ ಸಂಸ್ಕೃತಿ ಪ್ರಚಾರವನ್ನು ಮಾಡಲು ಕಡಿಮೆ ಜನರಿದ್ದ ಪಕ್ಷದಲ್ಲಿ ಅವಕಾಶವಿರುವುದಿಲ್ಲ. ಉದಾಹರಣೆ ಹೇಳುತ್ತೇನೆ. ಉತ್ತರ ಕರ್ಣಾಟಕದಲ್ಲಿ ಸಂಯುಕ್ತ ಕರ್ಣಾಟಕ ಪತ್ರಿಕೆಗೆ ಎಷ್ಟು circulation ಇದೆ ನೋಡಿ. ನಾವು ಬಹಳ ಪ್ರಗತಿ ಹೊಂದಿದ್ದೇವೆ, ಬಹಳ ಮುಂದುವರಿದಿದ್ದೇವೆ ಎಂದು ಮೈಸೂರಿನವರು ಹೆಮ್ಮೆಪಡುತ್ತೇವೆ. ಆದರೆ ನಮ್ಮ ತಾಯಿನಾಡು, ಪ್ರಜಾವಾಣಿ ಪತ್ರಿಕೆಗೆ ಎಷ್ಟು circulation ಇದೆ ನೋಡಿ? ಉತ್ತರ ಕರ್ಣಾಟಕದ ಆ ಒಂದು ಪತ್ರಿಕೆಗೆ ನಮ್ಮ ಪತ್ರಿಕೆಗಳ ಎರಡು-ಮೂರರಷ್ಟು circulation ಇದೆ. ಏತಕ್ಕೆಂದರೆ, ಅವರಲ್ಲಿ ರಾಜಕೀಯ ಜಾಗೃತಿ, ಅಲ್ಲಿಯ ಜನರಲ್ಲಿ ಕರ್ಣಾಟಕ ಭಾಷಾ ಮತ್ತು ಸಂಸ್ಕೃತಿಯಮೇಲೆ ಜಾಸ್ತಿ ಪ್ರೇಮವಿದೆ. ಆದ್ದರಿಂದ ಜನಗಳೆಲ್ಲಾ ಅಷ್ಟು ಮುಂದಕ್ಕೆ ಬರುವುದಕ್ಕೆ ಅವಕಾಶವಾಯಿತು. ಅಂತಹ ಜನಗಳ ಸಂಗಡ ಮಿಲನವಾಗುವುದು ಬೇಡ ಎಂದು ಹೇಳುವುದು ಸರಿಯಲ್ಲ. ಅವರು ದೇಹದಾರ್ಢ್ಯ ಚೆನ್ನಾಗಿದ್ದು ಪುಷ್ಟಿಯಾಗಿರುವ ಜನಗಳು. ಆದ್ದರಿಂದ ಎಲ್ಲಾ ಭಾಗಗಳಿಂದಲೂ ನೋಡಿದ ಪಕ್ಷದಲ್ಲಿ, ಕರ್ಣಾಟಕ ಪ್ರಾಂತ್ಯ ನಿಜವಾದ ಸೌಂದರ್ಯದನಾಡು ಆಗುತ್ತದೆ. ಎಲ್ಲರೂ ಸಹ ಒಂದುಗೂಡಿ ಪ್ರಯತ್ನಪಟ್ಟರೆ ಜಾಗ್ರತೆ ಕರ್ಣಾಟಕ ಪ್ರಾಂತವಾಗುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು-ದಕ್ಷಿಣ).—ಸ್ವಾಮಿ, ಇದುವರೆಗೆ ಈ ಶೇಷಾದ್ರಿ ಸಮಿತಿಯವರ ವರದಿಯಮೇಲೆ ನಮ್ಮ ಸ್ನೇಹಿತರು ಮಾತನಾಡಿದುದನ್ನು ನಾನು ಕುತೂಹಲದಿಂದಲೂ ಮತ್ತು ಹೆಚ್ಚಿನ ಎಚ್ಚರಿಕೆಯಿಂದಲೂ ಕೇಳಿದ್ದೇನೆ. ಈಗ ನಮ್ಮ ಮುಂದೆ ಇರುವ ಪ್ರಶ್ನೆ ಒಂದು ದೊಡ್ಡ ಆನೆಯೋಪಾದಿಯಲ್ಲಿ ಇದ್ದು, ಪ್ರತಿಯೊಬ್ಬ ಕುರುಡನೂ ಆನೆಯ ಬೇರೆ ಬೇರೆ ಭಾಗಗಳನ್ನು ನೋಡಿ ಆತನಿಗೆ ಮನಸ್ಸಿಗೆ ಏನು ಹೊಳೆಯುತ್ತದೆಯೋ ಆ ರೀತಿ ತಮ್ಮ ವಿವರಣೆಗಳನ್ನು ಕೊಟ್ಟಂತೆ ನನಗೆ ಭಾಸವಾಗುತ್ತದೆ. ಈ ಒಂದು ವರದಿಯನ್ನು ಇಷ್ಟು ಹಣ ಖರ್ಚುಮಾಡಿ ಈ ಸಭೆ ಮುಂದೆ ಚರ್ಚಿಸುವುದಕ್ಕೆ ಸರ್ಕಾರದವರು ತಂದಿರುವ ಮುಖ್ಯ ಉದ್ದೇಶ, ದೇಶದ ಮುಂದೆ ಇರುವ ದೊಡ್ಡ ಸಮಸ್ಯೆಯನ್ನು ಬಹಳ ಸುಲಭವಾಗಿ ಪರಿಹಾರ ಮಾಡಲು ಸಲಹೆಗಳನ್ನು ಕೊಡಬೇಕು ಎನ್ನುವುದೇ ಆಗಿದೆ. ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳ ಪರಿಶೀ

(ಶ್ರೀ ಬಿ. ಟಿ. ಕೆಂಪರಾಜ್.)

ಲನೆಯನ್ನು ಮಾಡಿದ್ದಲ್ಲಿ ಬೇರೆ ಪ್ರಾಂತಗಳಲ್ಲಿರುವ ಕನ್ನಡ ಭಾಗಗಳು ಕೆಲವು ವಿಧಗಳಲ್ಲಿ ಮುಂದೆ ಹೋಗಿವೆ, ಕೆಲವು ವಿಧಗಳಲ್ಲಿ ಹಿಂದೆಬಿದ್ದಿವೆ ಎಂಬುದು ಗೊತ್ತಾಗುತ್ತದೆ. ಹಾಗೆಯೇ ಮೈಸೂರು ಸಂಸ್ಥಾನವೂ ಸಹ ಕೆಲವು ವಿಧಗಳಲ್ಲಿ ಮುಂದುವರಿದಿದೆ, ಕೆಲವು ವಿಧಗಳಲ್ಲಿ ಹಿಂದುಳಿದಿದೆ. ಆದ್ದರಿಂದ ಈ ಅಂಕಿ ಅಂಶಗಳನ್ನು ಗಜ ಕಡ್ಡಿಯಿಂದ ಅಳೆದಂತೆ ಅಳೆದು ಕರ್ಣಾಟಕ ಪ್ರಾಂತ ಆಗಬಾರದು, ಈ ಪ್ರಶ್ನೆ ಬಹಳ ಜಟಿಲವಾದುದು ಎಂದು ವಾದ ಮಾಡುವುದು ಅಷ್ಟು ಸಮಂಜಸವಾದುದಲ್ಲವೆಂದು ನನಗಾದರೂ ಎನ್ನಿಸುತ್ತದೆ. ಮೈಸೂರು ಇದ್ದಹಾಗೆಯೇ ಇರಬೇಕೇ ಅಥವಾ ಮೈಸೂರು ಇತರ ಪ್ರಾಂತಗಳ ಜೊತೆಯಲ್ಲಿ ಸೇರಿ ವಿಶಾಲ ಕರ್ಣಾಟಕವಾಗಬೇಕೇ ಎಂಬುದು ಈಗ ನಮ್ಮ ಮುಂದೆ ಉದ್ಭವಿಸಿರುವ ಎರಡು ಪ್ರಶ್ನೆಗಳು. ಮೊದಲನೆ ಪ್ರಶ್ನೆಯನ್ನು ನಾವು ಯೋಚಿಸುವಾಗ ಮೈಸೂರು ಏತಕ್ಕಾಗಿ ಇದ್ದಹಾಗೆ ಇರಬೇಕು ಎಂದು ಕೆಲವು ಸದಸ್ಯರು ಅಥವಾ ಬಹುತೇಕ ಸದಸ್ಯರು ಅಭಿಪ್ರಾಯಪಡುತ್ತಾರೆ ಎಂಬುದನ್ನು ಸದಸ್ಯರು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾದುದು ಅವಶ್ಯಕ. ಮೈಸೂರು ತನ್ನದೇ ಆದ ವೈಶಿಷ್ಟ್ಯ, ತನ್ನದೇ ಆದ ಆಡಳಿತಕ್ರಮ, ತನ್ನದೇ ಆದ ಸರ್ವತೋಮುಖವಾದ ಅಭಿವೃದ್ಧಿ ಇದನ್ನು ಕಾಪಾಡಿಕೊಂಡು ಬಂದಿದೆ. ಆದ್ದರಿಂದ ಮೈಸೂರು ಇದ್ದಹಾಗೆಯೇ ಇರಬೇಕು ಎನ್ನುವ ಅಭಿಪ್ರಾಯವನ್ನು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಹಾಗೆಯೇ ಕರ್ಣಾಟಕ ಆಗಬೇಕೆಂದು ಹೇಳತಕ್ಕ ಮಾನ್ಯ ಸದಸ್ಯರು ಕರ್ಣಾಟಕ ಪ್ರಾಂತ್ಯವಾದ ಪಕ್ಷದಲ್ಲಿ ಮೈಸೂರಿನ ವೈಶಿಷ್ಟ್ಯ ಅಷ್ಟೇನೂ ಕೆಡುವುದಿಲ್ಲ, ಮೈಸೂರಿಗೆ ಅಷ್ಟೇನೂ ಕುಂದಕವುಂಟಾಗುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಇವೆರಡಕ್ಕೂ ಮಧ್ಯದಲ್ಲಿ ನಾವು ಒಂದು ಸುಗಮವಾದ ಮಾರ್ಗವನ್ನು ಕಂಡುಹಿಡಿಯಬೇಕಾದದ್ದು ಇಂದಿರುವ ನಮ್ಮ ಸಮಸ್ಯೆ. ಏತಕ್ಕಾಗಿ ಕೇಂದ್ರ ಸರ್ಕಾರದವರು ಪ್ರಾಂತಗಳ ಪುನರ್ವಿಂಗಡನಾ ಸಮಿತಿಯನ್ನು ನೇಮಿಸಿದ್ದಾರೆ? ಇದು ನಮ್ಮ ಮೈಸೂರಿಗೆ ನೇರವಾಗಿ ಸಂಬಂಧಪಟ್ಟ ಪ್ರಶ್ನೆಯೆಂದು ಪರಿಗಣಿಸದೆ ಇರುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಒಂದು ಉದಾಹರಣೆಯನ್ನು ಕೊಡಬಹುದು. ಬಳ್ಳಾರಿ ಜಿಲ್ಲೆಯ ಸಮಸ್ಯೆ ಉದ್ಭವಿಸಿದಾಗ ಹತ್ತು ತಾಲ್ಲೂಕುಗಳಲ್ಲಿ ಏಳು ತಾಲ್ಲೂಕುಗಳನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರದಿಂದ ಒಂದು ಆದೇಶವು ಬಂತು. ಆಗ ಇದೇ ವಿಧವಾದಂಥ ಜಿಜ್ಞಾಸೆ ನಡೆದರೂ ಸಹ ಕೇಂದ್ರ ಸರ್ಕಾರದ ಆದೇಶಕ್ಕೆ ನಾವು ಮನ್ನಣೆ ಕೊಟ್ಟು ಬಳ್ಳಾರಿಯ ಏಳು ತಾಲ್ಲೂಕುಗಳನ್ನು ಸೇರಿಸಿಕೊಳ್ಳಬೇಕಾಯಿತು. ಅದೇ ರೀತಿ ಪೊಟ್ಟಿ ಶ್ರೀರಾಮುಲುರವರು ಪ್ರಾಣವನ್ನು ನೀಗಿದಾಗ ಉದ್ಭವಿಸಿದ ಆಂಧ್ರ ಸಮಸ್ಯೆಯನ್ನು ಬಿಡಿಸಿದಾಗ ಬಳ್ಳಾರಿ ಸಮಸ್ಯೆಯು ಒಂದು ರೀತಿಯಲ್ಲಿ ಪರಿಹಾರವಾಯಿತು. ಹೀಗೆ ಬಹಳ ಪ್ರಾಮುಖ್ಯವಾದ ಸಮಸ್ಯೆಗಳು ಉದ್ಭವಿಸುವಾಗ ಯಾವ ಕೇಂದ್ರೀಕೃತವಾದ ಸರ್ಕಾರವು ಆಡಳಿತ ಸೂತ್ರಗಳನ್ನು ತನ್ನ ಕೈಯ್ಯಲ್ಲಿಟ್ಟುಕೊಂಡಿದೆಯೋ ಆ ಸರ್ಕಾರವು ಎಲ್ಲಾ ಆಡಳಿತ ದೃಷ್ಟಿಯಿಂದಲೂ ಆಲೋಚನೆಮಾಡಿ ಒಂದು ತೀರ್ಮಾನವನ್ನು ಕೊಟ್ಟರೆ ಅದಕ್ಕೆ ನಾವೆಲ್ಲರೂ ತಲೆ ಭಾಗಬೇಕಾದದ್ದು ಅತ್ಯಗತ್ಯ. ಅಂದಮೇಲೆ ಮೈಸೂರು ಏತಕ್ಕಾಗಿ ಉಳಿಯಬೇಕು ಎನ್ನುವುದಕ್ಕೆ ಪ್ರಾಮುಖ್ಯವಾದ ಕಾರಣಗಳಿವೆ. ಒಂದನೆದಾಗಿ ಮೈಸೂರು ಒಂದು composite administrative unit ಆಗಿದೆ. ಹೈದರಾಬಾದ್ ಸಂಸ್ಥಾನವು ಅದೇ ರೀತಿ ಒಂದು composite administrative unit ಆಗಿದೆ. ಹೀಗೆ ಒಂದು composite administrative unit ಆಗಿರುವ ಸಂಸ್ಥಾನವನ್ನು ಒಡೆಯಬಾರದು.

Sri A. BHEEMAPPA NAIK (Molakalmuru).—What about Bombay ?

Sri B. T. KEMPARAJ.—I shall come to that. I do not know why our friend is so eager. ಸ್ವಾಮಿ, ಮೈಸೂರಿನಲ್ಲಿ ಕನ್ನಡ ಮಾತನಾಡತಕ್ಕಂಥ ಜನರು ಇದ್ದಾರೆ. ತೆಲುಗು ಮಾತನಾಡತಕ್ಕಂಥ ಜನರೂ ಇದ್ದಾರೆ.

ತೆಲುಗು ಮಾತನಾಡುವವರು, ತಮಿಳು ಮಾತನಾಡುವವರು, ಕನ್ನಡ ಮಾತನಾಡುವವರು, ಇನ್ನೂ ಅನೇಕ ಮಾತನಾಡುವವರೂ ಇದ್ದಾರೆ. ಅಂದಮೇಲೆ ಕನ್ನಡ ಎಂಬ ಭಾಷೆಯ ಆಧಾರದಮೇಲೆ ಕರ್ನಾಟಕ ಪ್ರಾಂತವನ್ನು ರಚಿಸಬೇಕೆಂದು ಯೋಚಿಸಿ, ಜೊತೆಗೆ ನಮ್ಮಲ್ಲಿರುವ ಆಂಧ್ರರನ್ನೂ ತಮಿಳರನ್ನೂ ಇಟ್ಟುಕೊಳ್ಳಬೇಕೆಂದರೆ, ಅದು ಅಕ್ಕಿಯಮೇಲೆ ಆಸೆ ನೆಂಟರಮೇಲೆ ಪ್ರೀತಿ ಎಂದ ಹಾಗಾಗುತ್ತದೆ. ಏಕೆಂದರೆ ಕನ್ನಡ ಮಾತನಾಡುವ ಪ್ರದೇಶಗಳನ್ನು ಸೇರಿಸಿ ಒಂದು ಪ್ರಾಂತ್ಯವನ್ನು ನಿರ್ಮಿಸುವುದು ಅಗತ್ಯವೆಂದಮೇಲೆ, ತೆಲುಗರಿರತಕ್ಕ ಪ್ರದೇಶಗಳನ್ನು ಬಿಟ್ಟುಕೊಡುವುದಕ್ಕೆ ಸಾಧ್ಯವಿಲ್ಲ ಬೇರೆ ಕನ್ನಡ ಮಾತನಾಡುವವರರೊಡನೆಯೇ ಸೇರಬೇಕೆಂದು ಹೇಳಿ ವಾದ ಹೂಡುವುದು ಬಹಳ ಕಟುವಾದ ಟೀಕೆಗಳಿಗೆ ಎಡೆ ಕೊಟ್ಟೇ ಕೊಡುತ್ತದೆ. ಈಗ ಬೆಂಗಳೂರು ಜಿಲ್ಲೆ, ಕೋಲಾರ ಜಿಲ್ಲೆ ತುಮಕೂರು ಜಿಲ್ಲೆಗಳಲ್ಲಿ ತೆಲುಗರಿದ್ದಾರೆ. ಕನ್ನಡ ಭಾಷೆಯ ಆಧಾರದಮೇಲೆ ಸಂಸ್ಥಾನವೊಂದನ್ನು ರಚಿಸುತ್ತೇವೆಂದು ಹೇಳಿದಮೇಲೆ ತೆಲುಗು ಮಾತನಾಡುವ ಈ ಪ್ರದೇಶಗಳನ್ನೂ ಹಾಗೆಯೇ ನಮ್ಮ ಮಗ್ಗುಲಲ್ಲೇ ಇಟ್ಟುಕೊಳ್ಳುತ್ತೇವೆಂದು ವಾದಿಸುವುದು ಅಷ್ಟು ಸಮಂಜಸವಾಗಿ ಕಾಣುತ್ತದೆಯೇ ? ಆದ್ದರಿಂದಲೇ ಅನೇಕ ಸ್ನೇಹಿತರು, ಮೈಸೂರು ಇದ್ದ ಹಾಗೆಯೇ ಇರಬೇಕು, ಹಾಗೇನಾದರೂ ಫಸಲಾಲಿ ಸಮಿತಿಯವರು ಅಕ್ಕಪಕ್ಕದ ರಾಷ್ಟ್ರಗಳನ್ನು ನಮಗೆ ಸೇರಿಸಬೇಕೆಂದು ಅಭಿಪ್ರಾಯಪಟ್ಟರೆ ಮಾತ್ರ ಆ ವರದಿಯ ಪ್ರಕಾರ ಯಾವ ಯಾವ ಪ್ರಾಂತ್ಯಗಳು ಉಳಿದ ಪ್ರಾಂತ್ಯಗಳಿಗೆ ಸೇರಿಸಲು ಅವಕಾಶವಿಲ್ಲದೆ ಇಲ್ಲಿಗೇ ಸೇರಬೇಕಾಗಿರುತ್ತವೆಯೋ, ಆ ಭಾಗಗಳನ್ನು ಸೇರಿಸಿ ವಿಶಾಲ ಮೈಸೂರನ್ನು ಸ್ಥಾಪಿಸಲು ಅವಕಾಶವಿದೆಯೆಂದು ಹೇಳಿದ್ದಾರೆ. ಆದ್ದರಿಂದ ಭಾಷೆಯ ಆಧಾರದಮೇಲೆ ನಾವು ವಾದಿಸುವಾಗ, ರಾಜ್ಯಾಡಳಿತ ದೃಷ್ಟಿಯಿಂದ ಅದಕ್ಕೆಷ್ಟು ಪ್ರಾಮುಖ್ಯತೆ ಕೊಡಬಹುದೋ ಅಷ್ಟು ಪ್ರಾಮುಖ್ಯತೆ ಕೊಡಬಹುದೇ ವಿನಾ, ಭಾಷೆಯನ್ನೇ ಆಧಾರವಾಗಿಟ್ಟುಕೊಂಡು ಪ್ರಾಂತ್ಯ ನಿರ್ಮಾಣ ಮಾಡಬೇಕೆಂದು ಹೊರಟರೆ ಬೇರೆ ಭಾಷೆಗಳನ್ನಾಡುವ ವ್ಯಕ್ತಿಗಳ ಅಭಿಪ್ರಾಯಗಳಿಗೂ ಮನ್ನಣೆಕೊಟ್ಟು ಅವರ ವಾದವನ್ನೂ ಪುರಸ್ಕರಿಸಿದಂತಾಗುತ್ತದೆ. ಇತರ ವಿಚಾರಗಳಿಂದ ಮೈಸೂರು ಮುಂದೆ ಹೋಗಿದೆ, ಉಳಿದ ಕನ್ನಡ ಪ್ರಾಂತ್ಯಗಳು ಹಿಂದೆ ಬಿದ್ದಿವೆ ಎಂಬುದು ಈ ದಿನ ಅಷ್ಟು ಪ್ರಾಮುಖ್ಯವಲ್ಲ, ಏಕೆಂದರೆ ಹಿಂದೂದೇಶ ಒಂದು ಎಂಬ ಅಭಿಪ್ರಾಯ ನಮ್ಮಲ್ಲಿ ಮೂಡಬೇಕೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಅದೂ ಅಲ್ಲದೆ, ಕೇಂದ್ರ ಸರ್ಕಾರದವರೂ ಸುಮಾರು 400 ಕೋಟಿ ರೂಪಾಯಿ

ಗಳ ಜೊತೆ ಬಡ್ಜೆಟ್ ಇಟ್ಟುಕೊಂಡು ದೇಶಕ್ಕೆ ಆಗಬೇಕಾದ ಅನುಕೂಲಗಳನ್ನು ಏರ್ಪಡಿಸುವುದಕ್ಕೆ ಎರಡನೆಯ ಪಾಂಚವಾರ್ಷಿಕ ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ. ಪಂಚವಾರ್ಷಿಕ ಯೋಜನೆಯನ್ನು ಸಿದ್ಧಗೊಳಿಸಿ ಅನೇಕ ಯೋಜನೆಗಳನ್ನು ಕೈಕೊಂಡು ದೇಶದಲ್ಲಿರತಕ್ಕ ಆಹಾರ ಕೊರತೆಯೇ ಮುಂತಾದ ದೊಡ್ಡದೊಡ್ಡ ಸಮಸ್ಯೆಗಳನ್ನು ಪರಿಹಾರ ಮಾಡಲು ಪ್ರಯತ್ನಿಸುತ್ತಿರುವಾಗ ಈ ಸಣ್ಣ ಸಮಸ್ಯೆಯಮೇಲೆ ಜಿಜ್ಞಾಸೆ, ವಾದವಿವಾದಗಳಲ್ಲಿ ತೊಡಗತಕ್ಕದ್ದು ಸಕಾಲವಲ್ಲ ಮತ್ತು ಸಮಂಜಸವಲ್ಲವೆಂದು ನನ್ನ ಅಭಿಪ್ರಾಯ. ಅಂಥ ಅಗತ್ಯವಾದ ಯಾವ ದೊಡ್ಡ ಪ್ರಶ್ನೆಯೇ ಬರಲಿ ಇಡೀ ಹಿಂದೂದೇಶದ ದೃಷ್ಟಿಯಿಂದ ಪರಿಹರಿಸಲು ಕೇಂದ್ರ ಸರ್ಕಾರದ ಸಹಾಯ ನಮಗೆ ಇದ್ದೇಇದೆ. ಒಂದು ಉದಾಹರಣೆ ಹೇಳುವುದಾದರೆ, ಹೈದರಾಬಾದು ಸಂಸ್ಥಾನದ ಕನ್ನಡ ಪ್ರದೇಶಗಳನ್ನು ನಾವು ಸೇರಿಸಿಕೊಳ್ಳಬಹುದೆಂದು ಹೇಳಿ ಕೆಲವು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ಸಮಸ್ಯೆಯ ಬಗ್ಗೆ ದೇಶದ ಮುಖಂಡರು, 'ಹೈದರಾಬಾದು ಸಂಸ್ಥಾನವನ್ನು ಒಡೆಯಲು ಕಾಲ ಸನ್ನಿಹಿತವಾಗಿಲ್ಲ, ಹೈದರಾಬಾದು ಸಂಸ್ಥಾನ ಎರಡುಕೋಟಿಗೂ ಮೇಲ್ಪಟ್ಟಿನ ಜನಸಂಖ್ಯೆಯಿಂದ ಕೂಡಿ ಅಲ್ಲಿ ಅನೇಕ ರೀತಿಯಲ್ಲಿ ಈಗತಾನೆ ತೀವ್ರ ಬದಲಾವಣೆಗಳಾಗಿ ಆ ದೇಶದ ಜನರ ಪರಿಸ್ಥಿತಿ ಕ್ರಮೇಣ ಉತ್ತಮಗೊಳ್ಳುತ್ತಿದೆ' ಎಂದು ಹೇಳುತ್ತಿದ್ದಾರೆ.

ಆದ್ದರಿಂದ, ಒಟ್ಟಿನ ಮೇಲೆ ಹೇಳುವುದಾದರೆ, ನನ್ನ ಅಭಿಪ್ರಾಯದಲ್ಲಿ ಫಸಲಾಲಿ ಸಮಿತಿಯ ವರದಿಯನ್ನು ನಾವು ಕಾಯುವುದು ಉಚಿತ, ಮತ್ತು ಮೈಸೂರನ್ನು ಅಷ್ಟು ಸುಲಭವಾಗಿ ಭಾಷೆಯ ಆಧಾರದಮೇಲೆ ಪುನರ್ರಚಿಸಬೇಕೆಂಬ ವಾದವನ್ನು ಎತ್ತಿಹಿಡಿಯುವುದಾದರೆ ಬೇರೆ 'ಭಾಷೆಗಳನ್ನಾಡುವವರಿಗೂ ಅವರ ಮನೋಭಿಪ್ರಾಯಕ್ಕೆ ಮನ್ನಣೆ ಕೊಡಬೇಕಾಗಿ ಬರುತ್ತದೆ. ಆದ್ದರಿಂದ ಅಕ್ಕಿಯಮೇಲೆ ಆಸೆ ನೆಂಟರ ಮೇಲೆ ಪ್ರೀತಿಯನ್ನು ಬಯಸದೆ ಮೈಸೂರು ಹೀಗೆಯೇ ಇರಬೇಕು, ಒಂದುವೇಳೆ ಆಡಳಿತ ದೃಷ್ಟಿಯಿಂದ ಮೈಸೂರು ಸಂಸ್ಥಾನಕ್ಕೆ ಅಕ್ಕಪಕ್ಕದ ರಾಜ್ಯಗಳು ಸೇರಿ ಪರಿಪೂರ್ಣ ರಾಜ್ಯ ಬೇಕಾದರೆ ಆಗಬಹುದು ಎಂದು ವ್ಯಕ್ತಪಡಿಸುತ್ತಾ, ಈ ಸಮಸ್ಯೆಯನ್ನು ನಾವು ಬಹಳ ಕೂಲಂಕಷವಾಗಿ ದೂರದೃಷ್ಟಿಯಿಂದ ಯೋಚಿಸಿ ತೀರ್ಮಾನ ಮಾಡಬೇಕಾದದ್ದು ಅತ್ಯಾವಶ್ಯಕವೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರು ರಾಜ್ಯ ಪುನರ್ವಿಂಗಡಣೆಯ ವಿಷಯದಲ್ಲಿ ಬಹಳ ವಿಪುಲವಾದ ಚರ್ಚೆನಡೆಸಿದ್ದಾರೆ. ಸ್ವಾಮಿ, ನನಗೆ ತಿಳಿದಮಟ್ಟಿಗೆ ಭಾರತ ಸ್ವಾತಂತ್ರವಾಗುವುದಕ್ಕೆ ಮುಂಚೆ ಅಖಿಲಭಾರತ ಕಾಂಗ್ರೆಸ್ ಸಂಸ್ಥೆ ಹಾಗೂ ಮೈಸೂರು ಕಾಂಗ್ರೆಸ್ ಸಂಸ್ಥೆ ದೇಶ ಪುನರ್ವಿಂಗಡಣೆಯಾಗಬೇಕೆಂದು ಹೇಳಿ ಸುಮಾರು ಮೂವತ್ತು ವರುಷಗಳಿಂದಲೂ ಸತತವಾಗಿ ಜನಗಳ ಮುಂದೆ ಇಟ್ಟಿದ್ದಾರೆ. ಅಷ್ಟೇ ಅಲ್ಲದೆ, ಸ್ವಾತಂತ್ರ್ಯ ಬಂದಮೇಲೆಯೂ ಕೂಡ ಮೈಸೂರಿನಲ್ಲಿ ನಡೆದ ರಾಜ್ಯಾಂಗ ಘಟನಾ ಸಮಿತಿಯಲ್ಲಿ ಮೈಸೂರಿನ ವೈಶಿಷ್ಟ್ಯವನ್ನು ಉಳಿಸಿಕೊಂಡು, ಮೈಸೂರಿನ ಧವಳ ಕೀರ್ತಿಯನ್ನು ಬೆಳೆಸಿಕೊಂಡು ಮೈಸೂರಿಗೆ ಧಕ್ಕೆ ಬಾರದಂತೆ ದೇಶದ ಅಕ್ಕಪಕ್ಕದ ಕನ್ನಡ ಪ್ರಾಂತ್ಯಗಳನ್ನು ಸೇರಿಸಿಕೊಳ್ಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲವೆಂದು ಎಲ್ಲರೂ ಸರ್ವಾನುಮತದಿಂದ ಒಪ್ಪಿಕೊಂಡಿದ್ದೇವೆ. ಆದ್ದರಿಂದ ಮುಖ್ಯವಾಗಿರುವುದು ಈ ವಿಲೀನೀಕರಣದಿಂದ ಮೈಸೂರಿಗೆ ಯಾವ ವಿಧದಲ್ಲೂ ಧಕ್ಕೆ ಬರಕೂಡದೆಂಬುದು. ಈಗ ಈ ವಿಲೀನೀಕರಣದಿಂದಲಾದರೋ ನಮ್ಮ ಮೈಸೂರಿನ ಶ್ರೀಮನ್ಮಹಾರಾಜರವರಿಗೆ ಕರ್ಣಾಟಕ ಸಿಂಹಾಸನಾಧೀಶರೆಂಬ ಹೆಸರು ಬರುತ್ತದೆ. ನಾವು ಸುಮಾರು 1799ನೆಯ ಇಸವಿಗೆ ಹಿಂದಿನಿಂದಲೂ ಹಿಂದೂದೇಶದ ಆಡಳಿತದ ವಿಮರ್ಶೆ ಮಾಡಿದರೆ ಶ್ರೀ ಎ. ಭೀಮಪ್ಪನಾಯಕರಂಥ ಪಾಳೆಯಗಾರರು ಮತ್ತು ಶ್ರೀ ದೇವರಾಜ ಅರಸ್‌ರವರಂಥ ರಾಜರುಗಳಿದ್ದ ದೇಶ ಇದು. ಆದ್ದರಿಂದ ಈಗ ಬಿಟ್ಟುಹೋಗಿರುವ ಕನ್ನಡ ಪ್ರಾಂತ್ಯಗಳನ್ನು ಮೈಸೂರಿಗೆ ಸೇರಿಸಿ ಇವರ ಕೀರ್ತಿಯನ್ನು ಮತ್ತಷ್ಟು ಬೆಳಗಿಸುವುದು ಬಹಳ ಅಗತ್ಯವೆಂದು ನಾನು ಸೂಚಿಸುತ್ತೇನೆ. ವಿಜಯನಗರದ ಸಾಮ್ರಾಜ್ಯದ ಇತಿಹಾಸ, ನಾವಿಂದು ಹಾಳುಹಂಪೆಯನ್ನು ನೋಡಿದರೆ ನೆನಪಿಗೆ ಬಂದಾಗ ನಾವೆಲ್ಲಾ ಅಂಥ ಕರ್ಣಾಟಕಕ್ಕೆ ಸೇರಿದವರೆಂಬ ಹೆಮ್ಮೆ ಮೂಡುತ್ತದೆ. ಮುತ್ತು, ರತ್ನ, ಪಚ್ಚೆ ವೈಡೂರ್ಯಗಳು ಮಾರಾಟ ಮಾಡುತ್ತಿದ್ದ ನಮ್ಮ ದೇಶ ಎಂದು ಹೆಮ್ಮೆ ಪಡುತ್ತೇವೆ.

5 P.M.

ಆದುದರಿಂದ ಕರ್ಣಾಟಕ ಪ್ರಾಂತ್ಯ ನಿರ್ಮಾಣವಾದರೇನೆ ಆಗ ಅದೊಂದು ಬಹಳ ಸಂಪದಭಿವೃದ್ಧಿಯ ರಾಜ್ಯವೆಂದು ಹೇಳಲು ಸಾಧ್ಯವಾಗುತ್ತದೆ. ಯಾವುದೇ ಒಂದು ದೇಶ ದೊಡ್ಡದಾದಾಗ್ಯೂ ಅದಕ್ಕೆ ತಕ್ಕ ಹಾಗೆ ಅದರಲ್ಲಿ ಅನುಕೂಲತೆಗಳು ಹೆಚ್ಚಾಗಿರಬೇಕು. ಈಗ ಉದಾಹರಣೆಗೆ ಹೇಳುವುದಾದರೆ—ಬೊಂಬಾಯಿ, ಮದರಾಸ್, ಕಲ್ಕತ್ತ ಇತ್ಯಾದಿ ದೇಶಗಳೆಲ್ಲಾ ದೊಡ್ಡದಾಗಿದ್ದಾಗ್ಯೂ ಅವು ಹೇಗೆ ಮುಂದುವರಿದಿರುತ್ತವೆ ಎನ್ನುವುದನ್ನು ನೋಡಿದರೆ ಆ ದೇಶಗಳಿಗೆಲ್ಲಾ ದೊಡ್ಡದೊಡ್ಡ ಬಂದರುಗಳಿದ್ದು ಅಲ್ಲಿ ಅನೇಕ ಕೈಗಾರಿಕೋದ್ಯಮಗಳು ನಡೆಯುತ್ತಿರುವುದರಿಂದ ಆ ಪಟ್ಟಣಗಳೆಲ್ಲಾ ಅಷ್ಟೊಂದು ಮುಂದುವರಿಯಲು ಅವಕಾಶವಾಯಿತು. ಈ ಹಿಂದೆ ಈ ನಮ್ಮ ಮೈಸೂರು ದೇಶ ಈಗ ಎಷ್ಟಿದೆಯೋ ಅಷ್ಟೇ ಇರಲಿಲ್ಲ. ಇದೊಂದು ಅಖಂಡ ಕರ್ಣಾಟಕ ದೇಶವಾಗಿತ್ತು. ಆದರೆ ಇತ್ತೀಚೆಗೆ ಮೈಸೂರು ಒಂದನೆ ಯುದ್ಧ, ಎರಡನೆ ಯುದ್ಧ, ಮೂರನೆ ಯುದ್ಧ ಮತ್ತು ನಾಲ್ಕನೆ ಯುದ್ಧವಾದನಂತರ ಅಖಂಡ ಕರ್ಣಾಟಕ ರಾಜ್ಯದಲ್ಲಿ ಸೇರಿದ್ದಂಥ ಕನ್ನಡ ಭಾಗಗಳನ್ನೆಲ್ಲಾ ಹರಿದು ಅಕ್ಕಪಕ್ಕದಲ್ಲಿರುವ ಮದರಾಸ್, ಬೊಂಬಾಯಿ ಮತ್ತು ಹೈದರಾಬಾದ್ ರಾಜ್ಯಗಳಿಗೆ ಹಂಚಿಕೊಟ್ಟರು. ಹಾಗೆ ನಮ್ಮ ಕನ್ನಡ ನಾಡನ್ನು ಆ ದಿವಸ ಅವರು ಹರಿದು ಹಂಚಿಕೆ ಮಾಡಿದ್ದರಿಂದ ಈ ದಿವಸ ಇರತಕ್ಕ ಮೈಸೂರು ಈ ಸ್ಥಿತಿಯಲ್ಲಿ ಚಿಕ್ಕ ರಾಜ್ಯವಾಗಿ ಉಳಿಯಿತು. ಆದರೆ ಈ ದಿವಸ ಪುನಃ ಕನ್ನಡ ಮಾತನಾಡತಕ್ಕಂಥ ಜನರೆಲ್ಲರೂ ಒಂದಾಗಬೇಕೆಂದು ಹೇಳುತ್ತಿದ್ದೇವೆ. ಹೀಗೆ ಒಂದು ಭಾಷೆಯನ್ನಾಡತಕ್ಕಂಥ ಜನರೆಲ್ಲಾ ಒಂದಾದರೆ ಬಹಳ ಅನುಕೂಲವಾದ ಆಡಳಿತ ನಡೆಸಲು ಸಾಧ್ಯವಾಗುತ್ತದೆ. ಜನರಲ್ಲಿ ಒಂದು ಐಕ್ಯಮತ್ಯ ಉಂಟಾಗಬೇಕಾದರೆ ಭಾಷೆಯ ಅಗತ್ಯ ಕೂಡ ಬಹಳ ಮುಖ್ಯವಾಗಿರುತ್ತದೆ. ನಾನು 1941ರಲ್ಲಿ ಉತ್ತರ ಇಂಡಿಯಾ ಪ್ರವಾಸಕ್ಕೆ ಹೋಗಿದ್ದೆನು. ಅಲ್ಲಿ ನಾನು ಯಾವ ಭಾಗದಲ್ಲಿ ತಿರುಗಾಡಿದಾಗ್ಯೂ ನನಗೆ ಕನ್ನಡ ಮಾತನಾಡತಕ್ಕಂಥ ಜನರೇ ಸಿಕ್ಕಲಿಲ್ಲ. ಆಗ ಒಂದು ದಿವಸ ನಾನು ಹರಿದ್ವಾರಕ್ಕೆ ಬಂದೆ. ಅಲ್ಲಿ ಒಬ್ಬರು ನನಗೆ ಕನ್ನಡ ಮಾತನಾಡ

(ಶ್ರೀ ಟಿ. ಹನುಮಯ್ಯ.)

ತಕ್ಕವರ ಸ್ನೇಹ ಬೆಳೆಯಿತು. ಆಗ ನನಗೆ ಉಂಟಾದ ಆನಂದಕ್ಕೆ ಪಾರವೇ ಇರಲಿಲ್ಲ. ಕನ್ನಡ ಮಾತನಾಡ ತಕ್ಕಂಥ ಜನರನ್ನು ಕಂಡೇನೆ ಎಂದಿರುವಾಗ ನನಗೆ ಅವರು ಸಿಕ್ಕಿದ್ದು ಬಹಳ ಪರಮಾನಂದವನ್ನುಂಟು ಮಾಡಿತು. ಆಗ ನನಗೆ ನನ್ನ ಹೆತ್ತ ತಾಯಿಯನ್ನು ಕಂಡಿದ್ದರೆ ಎಷ್ಟು ಆನಂದ ಉಂಟಾಗುತ್ತಿತ್ತೋ ಅದಕ್ಕೂ ಮಿಗಲಾದಂಥ ಆನಂದ ಆ ಭಾಷೆಯ ಪರಿಶ್ರಮದಿಂದ ನನಗೆ ಉಂಟಾಯಿತು. ಹೀಗೆ ಪ್ರತಿಯೊಬ್ಬರಿಗೂ ಅವರವರ ಭಾಷೆಯೆಂದರೆ ಬಹಳ ಪ್ರೇಮವಿದ್ದೇ ಇರುತ್ತದೆ. ಈ ದೃಷ್ಟಿಯಿಂದ ಈ ಸಮಸ್ಯೆಯನ್ನು ಪರಿಶೀಲನೆ ಮಾಡಬೇಕಾಗಿದೆ. ಈ ಕಾರಣದಿಂದ ನಮ್ಮ ಮೈಸೂರು ಅಖಂಡ ಕರ್ಣಾಟಕದಲ್ಲಿ ಸೇರಿ ನಮ್ಮನ್ನು ಅಗಲಿಹೋಗಿರತಕ್ಕಂಥ ನಮ್ಮ ಅಣ್ಣತಮ್ಮಂದಿರುಗಳನ್ನು ನಾವು ಪುನಃ ಆದರದಿಂದ ಬರಮಾಡಿಕೊಳ್ಳುವುದು ಬಹಳ ಆನಂದದಾಯಕವಾದಂಥ ವಿಚಾರವಾಗಿದೆ. ಇಲ್ಲಿಯತನಕ ಅವರು ಅನ್ಯಭಾಷೆಯ ಜನರು ಎಲ್ಲಿ ಅಧಿಕ ಸಂಖ್ಯಾತರಾಗಿದ್ದಾರೋ ಅಂಥ ರಾಜ್ಯದಲ್ಲಿ ಸೇರಿಕೊಂಡಿರುವುದರಿಂದ ಅವರ ಅಭಿವೃದ್ಧಿ ಮತ್ತು ಏಳಿಗೆಗಳಿಗೆಲ್ಲಾ ಬಹಳ ಕುಂಠಿತವಾಗಿರುತ್ತವೆ. ಆದುದರಿಂದ ನಾವು ಈ ದಿವಸ ಕನ್ನಡ ದೇಶವಾದಂಥ ಈ ಮೈಸೂರಿಗೆ ಬಂದು ಸೇರಿಕೊಳ್ಳುತ್ತೇವೆಂದು ಕೇಳುತ್ತಿದ್ದಾರೆ ಅವರು ಬಹಳ ಹಿಂದುಳಿದಿದ್ದಾರೆ, ಅವರು ನಮ್ಮೊಡನೆ ಸೇರುವುದು ಬೇಡ, ಅವರು ಹಾಗೆಯೇ ಹಿಂದೆ ಬಿದ್ದಿರಲಿ, ನಾವು ಹೀಗೆಯೇ ಮುಂದುವರಿಯೋಣ ಎಂದು ಹೇಳುವುದು ಅಷ್ಟೊಂದು ಉಚಿತವಾಗಿ ಕಾಣುವುದಿಲ್ಲ. ಈ ರಾಜ್ಯಗಳ ಪುನರ್ವಿಂಗಡಣೆಯು ಅತ್ಯಗತ್ಯವೆಂದು ನಮ್ಮ ಹಿರಿಯ ನಾಯಕರಾದ ನೆಹ್ರೂಅವರೇ ಹೇಳಿದ್ದಾರೆ. ಹೀಗೆ ದೇಶವನ್ನು ಪುನರ್ವಿಂಗಡಣೆ ಮಾಡುವಾಗ ನಾವು ಆಡಳಿತ ದೃಷ್ಟಿಗಿಂತಲೂ ಅಧಿಕವಾಗಿ ಭಾಷೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಲೇಬೇಕು. ಈ ದೃಷ್ಟಿಯಿಂದಲೂ ಸಹ ನಮ್ಮ ಅಕ್ಕಪಕ್ಕದ ದೇಶದಲ್ಲಿ ಬೇರೆ ಭಾಷೆಯ ಜನರೊಂದಿಗೆ ಸೇರಿರತಕ್ಕಂಥ ನಮ್ಮ ಅಣ್ಣತಮ್ಮಂದಿರುಗಳು ಈ ದಿವಸ ನಮ್ಮ ಜೊತೆಗೆ ಬಂದು ಸೇರಿಕೊಳ್ಳುತ್ತೇವೆಂದರೆ ನಾವು ಅದಕ್ಕೆ ಬೇಡ ಎಂದು ಹೇಳುವುದು ಖಂಡಿತ ಸರಿಯಾದದ್ದಲ್ಲ. 'ಕರೆದು ಹೆಣ್ಣು ಕೊಟ್ಟರೆ ಅಳಿಯನಿಗೆ ಮಲರೋಗ ಬಂತು' ಎನ್ನುವ ಹಾಗೆ—ನಾವೂ ನೀವೂ ಅಣ್ಣತಮ್ಮಂದಿರುಗಳು, ನಿಮ್ಮನ್ನು ಅಗಲಿ ನಾವು ನೂರಾರು ವರ್ಷಗಳಾಯಿತು, ನಾವು ಬಹಳ ಹಿಂದುಳಿದಿದ್ದೇವೆ, ನಾವು ಕಷ್ಟದಲ್ಲಿದ್ದೇವೆ, ನಾವು ನಿಮ್ಮೊಡನೆ ಸೇರಲು ನಿಮ್ಮ ಸಹಕಾರ ನೀಡಿ' ಎಂದು ಕೇಳಿದರೆ ನಾವು ಬೇಡ ಎಂದು ಹೇಳುವುದು ಸರಿಯಾದದ್ದಲ್ಲ. ಅವರು ನಮ್ಮೊಡನೆ ಬಂದು ಸೇರುವುದರಿಂದ ಬಹಳ ಅನುಕೂಲವಿದೆ. ಆಡಳಿತಕ್ಕೇನೂ ತೊಂದರೆಯಾಗುವುದಿಲ್ಲ. ಆದರೆ ಕೆಲವು ಮಾನ್ಯ ಸದಸ್ಯರು ಮಾತನಾಡುತ್ತ ಹಳ್ಳಿಹಳ್ಳಿಗೂ ಹೋಗಿ, ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳು ನಮ್ಮ ದೇಶಕ್ಕೆ ಸೇರುವುದು ಬೇಕೇ ಅಥವ ನಿಮಗೆ ಬೇಡವೇ ಎಂದು ಜನರನ್ನು ಕೇಳಿ ಅವರ ರೆಫರಂಡಂ ತೆಗೆದುಕೊಳ್ಳಬೇಕು ಎಂದು ಹೇಳಿದರು. ಆದರೆ ಇಂಥ ಒಂದು ಪ್ರಶ್ನೆಯನ್ನು ನಾವು ಅವರಾರನ್ನೂ ಕೇಳದೆ ಹಾಗೆಯೇ ನಡೆಸಿದರೂ ಇದರಿಂದ ಜನಗಳಿಗೆ ಯಾವ ತೊಂದರೆಯೂ ಆಗುವುದಿಲ್ಲ. ಆದರೆ ಹಾಗೆ ಮಾತನಾಡಿದ ಮಾನ್ಯ ಸದಸ್ಯರುಗಳಿಗೆಲ್ಲಾ ನಾನೊಂದು ಪ್ರಶ್ನೆ ಹಾಕುತ್ತೇನೆ—ಏನೆಂದರೆ ಮೊನ್ನೆತಾನೆ ನಾವು ಇದೇ ಸಭೆಯಲ್ಲಿ ಕುಳಿತು ಆ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬಿಲ್ಲನ್ನು ದೇಶದ ಜನರ ಅಭಿಮತ ಪಡೆಯದೇನೇ ಪಾಸ್ ಮಾಡಿರುತ್ತೇವೆ. ಇದರಿಂದ ಅವರ ತಲೆಯಮೇಲೆ ಬೀಳುವ ತೆರಿಗೆ ಹೊರೆ ಇನ್ನೂ ಜಾಸ್ತಿಯಾದಂತಾಯಿತು. ಹೀಗಿದ್ದರೂ ಯಾರು ದೇಶಾದ್ಯಂತವೂ ಹಳ್ಳಿ ಹಳ್ಳಿಗೂ ಹೋಗಿ ಜನರನ್ನು ಇದು ನಿಮಗೆ ಬೇಕೇ ಅಥವಾ ಬೇಡವೇ ಎಂದು ಕೇಳಿ ಬಂದು ಅನಂತರ ಅದಕ್ಕೆ ಬೆಂಬಲ ನೀಡಿದ್ದೀರಿ? ಎಂದು ಕೇಳುತ್ತೇನೆ. ಹಾಗೆ ನಾವು ಆ ದಿವಸ ಆ ಮಸೂದೆಯನ್ನು ದೇಶದಲ್ಲಿರತಕ್ಕಂಥ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಹಾಗೇನೆ ಏತಕ್ಕಾಗಿ ಪಾಸ್‌ಮಾಡಿದೆವೆಂದರೆ ನಿಜವಾಗಿಯೂ ಆ ಮಸೂದೆಗೆ ದೇಶದ ಹಿತದೃಷ್ಟಿಯಿಂದ ಬೆಂಬಲ ನೀಡಬೇಕಾದದ್ದು ಉಚಿತವಾಗಿರುತ್ತದೆಯೆಂದು ತಿಳಿದುಬಂದಕಾರಣ ಅದನ್ನು ನಾವು ಆ ದಿವಸ ಹಾಗೆ ಪಾಸ್ ಮಾಡಿದೆವು. ಅದನ್ನು ಜಾರಿಗೂ ತಂದೆವು. ಆದುದರಿಂದ ದೇಶಕ್ಕೆ ಯಾವುದು ಪ್ರಾಮುಖ್ಯವಾಗಿ ಆಗಬೇಕೋ ಯಾವುದರಿಂದ ದೇಶಕ್ಕೆ ಏಳಿಗೆ ಆಗುತ್ತದೆಯೋ ಅಂಥ ವಿಷಯಗಳಲ್ಲಿ ಇದೂ ಕೂಡ ಒಂದಾಗಿರುವುದರಿಂದ ನಾವು ಆ ರೀತಿ ಜನರ ರೆಫರಂಡಂ ಏನೂ ತೆಗೆದುಕೊಳ್ಳಬೇಕಾಗಿಲ್ಲವೆಂದು ಹೇಳುತ್ತೇನೆ. ಹಾಗೂ ಒಂದುವೇಳೆ ತೆಗೆದುಕೊಂಡರೆ ದೇಶಾದ್ಯಂತವೂ ಇರತಕ್ಕ ಜನರಲ್ಲಿ 100ಕ್ಕೆ 75 ಮಂದಿ ಇದನ್ನು ಬೇಡ ಎಂದು ಹೇಳುವುದಿಲ್ಲವೆಂದು ನಾನು ದೃಢವಾಗಿ ಹೇಳುತ್ತೇನೆ. ಕೆಲವು ಸದಸ್ಯರು ಭಾಷಣಮಾಡುತ್ತ ನಮಗೆ ದೇಶವೇನೂ ದೊಡ್ಡದಾಗುವುದು ಬೇಕಾಗಿಲ್ಲ ಎಂದು ಹೇಳಿದ್ದಾರೆ. ಇದೊಂದು ಬಹಳ ಆಶ್ಚರ್ಯಕರವಾದ ಅಭಿಪ್ರಾಯವಾಗಿದೆ. ಸಾಮಾನ್ಯವಾಗಿ ಜನರ ಮನೋಭಿಪ್ರಾಯ ಹೇಗಿರುತ್ತೆಂದರೆ—ಒಬ್ಬ ಮನುಷ್ಯನು ತಾನು ಒಂದು ಸಮಿತಿಗೆ ಒಬ್ಬ ಸಾಮಾನ್ಯ ಸದಸ್ಯನಾಗಿ ಬಿಟ್ಟರೆ, ಆತನು ನನಗೆ ಮತ್ತೇನೂ ಬೇಡ ಇಷ್ಟೇ ಸಾಕು ಎಂದು ಎಂದಿಗೂ ಹೇಳುವುದಿಲ್ಲ. ಹಾಗೆ ಯಾವಾಗ ಒಬ್ಬ ಮನುಷ್ಯ ಒಂದು ಸಲ ಒಂದು ಸಂಸ್ಥೆಗೆ ಸದಸ್ಯನಾಗಿಬಿಡುತ್ತಾನೋ ಆಗ ಆತನಿಗೆ ನಾನು ಮುಂದಕ್ಕೆ ಜಿಲ್ಲಾಬೋರ್ಡಿಗೆ ಸದಸ್ಯನಾಗಬೇಕು, ಅಸೆಂಬ್ಲಿ ಸದಸ್ಯನಾಗಲು ಚುನಾವಣೆಗೆ ನಿಲ್ಲಬೇಕು, ಪಾರ್ಲಿಮೆಂಟಿಗೂ ನಿಂತು ಚುನಾವಣೆ ಹೊಂದಬೇಕು ಎಂದು ಆಶೋತ್ತರಗಳಿರುವುದು ಸ್ವಾಭಾವಿಕ. ವಿಚಾರಗಳು ಹೀಗಿರುವಾಗ ನಮ್ಮ ಮಾನ್ಯ ಸದಸ್ಯರುಗಳು ಕೆಲವರು ನಮಗೆ ಈಗ ದೇಶ ಎಷ್ಟಿದೆಯೋ ಅಷ್ಟೇ ಸಾಕು, ಅದು ಹೆಚ್ಚಾಗುವುದೇ ನಮಗೆ ಬೇಡ ಎಂದು ಹೇಳುತ್ತಿರುವುದರ ಅರ್ಥವೇ ನನಗೆ ಆಗುತ್ತಿಲ್ಲ. ದೇಶ ವಿಶಾಲವಾಗಬೇಕು, ಭಾರತದಲ್ಲಿ ಒಂದು ಜಾತ್ಯತೀತ ರಾಷ್ಟ್ರವನ್ನು ಕಟ್ಟಬೇಕು, ಸೋಷಿಯಲಿಸ್ಟಿಕ್ ಪ್ಯಾಟರನ್ ವ್ಯವಸ್ಥೆಯನ್ನೂ ಜಾರಿಗೆ ತರಬೇಕು ಎಂದು ದೇಶಾದ್ಯಂತವೂ ಹೇಳುತ್ತಿರುವಾಗ ನಾವಿಲ್ಲಿ ಹೀಗೆ ಹೇಳುವುದು ಯಾವ ತತ್ವದ ಆಧಾರವೋ ನಾನಂತೂ ಕಾಣೆ. ಈಗಾಗಲೇ ಶ್ರೀ ಟಿ. ಸಿ. ಬಸಪ್ಪನವರು ಹೇಳಿರುವ ಹಾಗೆ ನಮ್ಮ ಮೈಸೂರು ದೇಶ ಎಲ್ಲ ವಿಚಾರಗಳಲ್ಲಿಯೂ ಸ್ವಪರಿಪೂರ್ಣತೆಯನ್ನು ಪಡೆದಿದೆಯೇನು? ದೇಶದಲ್ಲಿರತಕ್ಕಂಥ ಜನರೆಲ್ಲರೂ ಸ್ವಪರಿಪೂರ್ಣತೆಯನ್ನು ಅನ್ನ, ಬಟ್ಟೆ, ವಿದ್ಯಾ ಇತ್ಯಾದಿ ವಿಷಯಗಳಲ್ಲೆಲ್ಲಾ ಪಡೆದಿರುತ್ತಾರೇನು? ಇಲ್ಲಿಗೆ ನೂರಾರು ವರ್ಷಗಳಿಂದಲೂ ಹರಿಜನರು ಎಲ್ಲಾ ವಿಚಾರಗಳಲ್ಲಿಯೂ ಹಿಂದುಳಿದಿದ್ದಾರೆ, ಇವರ ಅಭಿವೃದ್ಧಿಯಾಗದ ವಿನಾ ದೇಶಕ್ಕೆ ಏಳಿಗೆಯಿಲ್ಲ. ಇವರು ಉದ್ಧಾರವಾದರೆ ಆಗ ರಾಷ್ಟ್ರವೂ ಉದ್ಧಾರವಾಯಿತೆಂದು ಹೇಳಬಹುದು. ಇತರರು ನಮ್ಮ ದೇಶಕ್ಕೆ

ಬಂದರೆ ನಾವು ಅವರ ಅಭಿವೃದ್ಧಿಯನ್ನೂ ಕೂಡ ಕೈ ಬಿಡಲು ಸಾಧ್ಯವಿಲ್ಲ. ಹೀಗಿರುವಾಗ ನಾವು ಈ ದೊಡ್ಡ ದೊಡ್ಡ ಭಾವನೆಗಳನ್ನೆಲ್ಲಾ ಬದಿಗೊತ್ತಿ 'ನಮ್ಮ ದೇಶ ಬಹಳ ಮುಂದುವರಿದಿದೆ ; ನಮ್ಮ ದೇಶದಲ್ಲಿ ರಸ್ತೆಗಳೆಲ್ಲಾ ಬಹಳ ಚೆನ್ನಾಗಿವೆ; ಆಸ್ಪತ್ರೆಗಳು ಜಾಸ್ತಿಯಾಗಿರುತ್ತವೆ, ಹೆಚ್ಚಿನ ಸಂಖ್ಯೆಯಲ್ಲಿ ಪಾಠಶಾಲೆಗಳಿರುತ್ತವೆ' ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಈಗಾಗಲೇ ಇಂಡಿಯಾ ' ಸರ್ಕಾರದವರು ಅಖಂಡ ಭಾರತದ ಏಳಿಗೆಗಾಗಿ ಕೈಗೊಂಡಿರುವ ಯೋಜನೆಯಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆ ಮುಗಿದು ದ್ವಿತೀಯ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವುದರಲ್ಲಿದೆ. ನಮಗೆ ಆಹಾರದ ಕುಗ್ಗಾಮವಿದ್ದ ಕಾಲದಲ್ಲಿ ಅನ್ಯ ದೇಶದವರೆಲ್ಲಾ ನಮಗೆ ಆಹಾರದ ಸರಬರಾಜು ಮಾಡಲಿಲ್ಲವೇನು ? ಆ ದಿವಸ ಹಿಂದುಳಿದ ದೇಶದ ಪಾಡು ಹಿಂದುಳಿದ ದೇಶಕ್ಕಾಗಲಿ, ಮುಂದುವರಿದ ದೇಶದ ಪಾಡು ಮುಂದುವರಿದ ದೇಶಕ್ಕಾಗಲಿ ಎಂದು ಹೇಳಿದ್ದರೆ ಆದಿವಸ ಯಾರಯಾರ ಪಾಡು ಏನೇನಾಗುತ್ತಿತ್ತು ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಂಡು ಮಾತನಾಡುವುದು ಬಹಳ ಒಳ್ಳೆಯದೆಂದು ಹೇಳುತ್ತೇನೆ, ಆದರೆ ನಾನಂತೂ ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಗಿಬಂದಿಲ್ಲ. ಹೋಗಿದಿಂದಿರತಕ್ಕವರು ಹೇಳಿದ್ದನ್ನು ಕೇಳಿದ್ದೇನೆ. ಆ ದೇಶಗಳಲ್ಲಿ ಪ್ರತಿಯೊಂದು ಪಂಗಡದವರೂ ಮುಂದೆ ಬರುವುದಕ್ಕೆ ಕಾರಣ ಅಲ್ಲಿಯ ಆಡಳಿತ ವಿಚಕ್ಷಣೆಯೇ ಮೂಲವೆಂದು ಹೇಳುತ್ತಿದ್ದಾರೆ. ಅಲ್ಲಿ ಕೂಲಿಯವರಿಗೂ ಸಹ ಇಷ್ಟೇ ಕೂಲಿ ಕೊಡಬೇಕು, ಇಷ್ಟೇ ಕೆಲಸ ಮಾಡಿಸಿಕೊಳ್ಳಬೇಕು ಎನ್ನತಕ್ಕ ಬಗ್ಗೆ ಎಲ್ಲದಕ್ಕೂ ಕಾನೂನುಗಳನ್ನ ಮಾಡಿದ್ದಾರಂತೆ. ಆದರೆ, ನಾವು ಮೊನ್ನೆತಾನೆ ಇಲ್ಲಿ ಒಂದು ಟೆನೆಸಿ ಆಕ್ಟನ್ನು ಜಾರಿಗೆ ತಂದಿದ್ದೇವೆ. ಹೀಗೆ ಜಗತ್ತಿನಲ್ಲಿರುವ ಪ್ರತಿಯೊಂದು ರಾಷ್ಟ್ರವೂ ಆ ದೇಶದಲ್ಲಿರತಕ್ಕಂಥ ಸರ್ವರ ಏಳಿಗೆಗೋಸ್ಕರವಾಗಿ ಶ್ರಮಿಸುತ್ತಿರುವಂಥ ಕಾಲದಲ್ಲಿ 'ಯಾರು ಹೇಗಾದರೂ ಇರಲಿ, ನಾವು ಮಾತ್ರ ಸುಖವಾಗಿದ್ದರೆಸಾಕು ' ಎಂದು ಹೇಳತಕ್ಕ ಜನರು ಇನ್ನೂ ನಮ್ಮ ದೇಶದಲ್ಲಿದ್ದಾರಲ್ಲಾ ಎನ್ನುವುದು ಇದರಿಂದ ವೇದ್ಯವಾಗುತ್ತದೆ. ಆದರೆ, ಇಂಥ ಭಾವನೆ ಎಷ್ಟು ಬೇಗ ತೊಲಗಿದರೆ ದೇಶಕ್ಕೆ ಅಷ್ಟೂ ಒಳ್ಳೆಯದಾಗುತ್ತದೆ. ಈ ರೀತಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆ ಏನು ಗೊತ್ತಾಗುತ್ತದೆಂದರೆ, ಜನ ಹಿತದೃಷ್ಟಿಯನ್ನು ಗಮನಿಸದೆ, ವಿಶಾಲ ಭಾವನೆಯಿಂದ ವರ್ತಿಸಲು ಮನಸ್ಸಿಲ್ಲದೆ, ನಾವೆಲ್ಲರೂ ಭಾರತದ ಪುತ್ರರು, ಭಾರತೀಯರು ಎನ್ನುವ ಅಭಿಮಾನವನ್ನೆಲ್ಲಾ ತೊರೆದು ಮಾತನಾಡಿದ್ದಾರೆಂಬುದು ಎದ್ದು ಕಾಣಿಸುತ್ತಿದೆಯೇ ಹೊರತು ಅವರೆಲ್ಲ ದರಿದ್ರರು ಎಂದು ಹೇಳಿರುವುದು ಅರ್ಥವಿಲ್ಲದ ಮಾತು. ಅವರೂ ಕೂಡ ನಮ್ಮ ಹಾಗೆಯೇ ಮುಂದುವರಿಯಬೇಕಾದ್ದು ದೇಶದ ಹಿತದೃಷ್ಟಿಯಲ್ಲಿ ತೀರಾ ಅಗತ್ಯ. ಅಕ್ಕಪಕ್ಕದ ಪ್ರಾಂತ್ಯಗಳವರ ಏಳಿಗೆಗೆ ಗಮನಕೊಡದಿರುವುದು ಸರಿಯಲ್ಲ.

ಸ್ವಾಮಿ, ಸರದಾರ್ ವಲ್ಲಭಾಯ್‌ಪಟೇಲರು 562 ಚಿಕ್ಕ ಚಿಕ್ಕ ಸಂಸ್ಥಾನಗಳನ್ನೆಲ್ಲಾ ವಿಲೀನೀಕರಣ ಮಾಡಿದ್ದಾರೆ. ಯಾರಾದರೂ ದೇಶವನ್ನು ಹಾಗೆ ವಿಲೀನೀಕರಣ ಮಾಡದೆ ಇಟ್ಟಿರುವುದಕ್ಕಾಗುತ್ತದೆಯೇ? ನಾವು ನೀವು ಎಲ್ಲರೂ ಕೂಡ, ಜಾತಿ, ಕುಲ, ಗೋತ್ರ ವ್ಯತ್ಯಾಸವಿಲ್ಲದೆ ದೇಶಾಭಿವೃದ್ಧಿ ಮಾಡಬೇಕು ಎಂದು ಒಂದೇ ಮನೋಭಾವ ಬೆಳೆಸಿಕೊಂಡು ಇರಬೇಕಾದರೆ ಪಕ್ಕದಲ್ಲಿ ಬೇರೆ ಪ್ರಾಂತ್ಯದಲ್ಲಿರುವ ಮಕ್ಕಳೇ ಬೇರೆ ಎಂದು ಹೇಳುವುದು ಯಾವ ನ್ಯಾಯ ? ಸಾಧಾರಣವಾಗಿ ದೇಶ ಸ್ವತಂತ್ರವಾದಮೇಲೆ ದೇಶ ವಿಂಗಡನೆಯಾಗುವುದು ಅಗತ್ಯ.

[MR. DEPUTY SPEAKER in the Chair.]

ಕೇಂದ್ರ ಸರ್ಕಾರದವರು ಫಸಲಾಲಿ ಸಮಿತಿಯವರನ್ನು ನೇಮಿಸಿ ಆಡಳಿತ ದೃಷ್ಟಿಯಿಂದ ದೇಶದ ಮರು ವಿಂಗಡನೆ ಏರ್ಪಡಬೇಕಾದುದು ಅಗತ್ಯವೆಂದು ಹೇಳಿದ್ದಾರೆ. ದೇಶ ಪುನರ್ವಿಂಗಡನೆಯ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಹೇಳುವುದರಲ್ಲಿ ತಿರುಳಿಲ್ಲವೆಂದು ನನ್ನ ಭಾವನೆ. ಏಕೆಂದರೆ ನಾವು ಯಾವಾಗಲೂ ಸಂಶಯ ಪಡಬಾರದು. ದೇಶ ದೊಡ್ಡದು. ಭರತಖಂಡ ಬಹಳ ದೊಡ್ಡ ದೇಶ. ದೊಡ್ಡ ಜನಾಂಗ. ಪಂಡಿತ್ ಜವಹರ್‌ಲಾಲ್ ನೆಹರೂ ಅವರು ಪ್ರಪಂಚದಲ್ಲೇ ವಂದನಾರ್ಹರು. ಇಂಡಿಯಾ ದೇಶದ ಮೂಲೆ ಮೂಲೆಯಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯೂ ಕೂಡ ಮುಂದುವರಿಯಬೇಕು, ದೇಶ ಅಭಿವೃದ್ಧಿಯಾಗಬೇಕು ಎಂದಿರುವಾಗ ಈಗ ಏತಕ್ಕೆ ಚಿಕ್ಕದಾರಿಯಲ್ಲಿ ಹೋಗಬೇಕಾಗಿದೆ ? ಪಕ್ಕದಲ್ಲಿರುವ ಪ್ರಾಂತದ ಜನರು ಬರಬೇಕಾಗಿಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲವೆಂದು ನಾನು ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೈಸೂರು ದೇಶದಲ್ಲಿ ಎಷ್ಟು ಆಸ್ಪತ್ರೆಗಳು, ಎಷ್ಟು ರಸ್ತೆಗಳು, ಎಷ್ಟು ಸಂಚಾರ ಸೌಕರ್ಯಗಳು ಮತ್ತು ಎಷ್ಟು ವಿದ್ಯಾಭ್ಯಾಸದ ಅನುಕೂಲತೆಗಳಿವೆ, ಎಂಬುದನ್ನು ನೋಡಿ. 100ಕ್ಕೆ 75 ಜನರು ಗ್ರಾಮಾಂತ ಪ್ರದೇಶದಲ್ಲಿ ವಾಸಮಾಡುತ್ತಿದ್ದಾರೆ. ಯಾವ ಯಾವ ಕಾಲೇಜುಗಳನ್ನು ಹಳ್ಳಿಗಳಿಗೆ ಏರ್ಪಾಡು ಮಾಡಿದ್ದೀರಿ? ಆಸ್ಪತ್ರೆಗಳು ಮತ್ತು ಕಾಲೇಜುಗಳೆಲ್ಲಾ ಪಟ್ಟಣಗಳಲ್ಲಿವೆ. ಪಟ್ಟಣಗಳಲ್ಲಿರುವವರು ಸುಖ ಮತ್ತು ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಆದರೆ 100ಕ್ಕೆ 75 ಜನರಿರುವ ಹಳ್ಳಿಗಾಡಿನಲ್ಲಿ ಸ್ಕೂಲ್ ಕೊಡಬೇಕಾದರೆ ದುಡ್ಡು ಕೊಡಿರಿ, ಇಲ್ಲದಿದ್ದರೆ ಸ್ಕೂಲ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ. ಪಟ್ಟಣಗಳಲ್ಲಿ ಕಾಲೇಜುಗಳನ್ನು ಕೊಡುವುದಕ್ಕೆ ಆಗುತ್ತದೆ. ಕಟ್ಟಡಗಳು ಆಗುತ್ತವೆ. ಸ್ಕೂಲುಗಳಿಗೆ lecturers ಬರುತ್ತಾರೆ. ಗ್ರಾಮದಲ್ಲಿರುವ ದೇಶದ ಮುಕ್ಕಾಲು ಭಾಗದ ಜನಗಳನ್ನು ನಿರ್ಲಕ್ಷ್ಯದಿಂದ ಕಾಣಲಿಲ್ಲವೇ ? ಕಾರಣಾಂತರದಿಂದ ಅದು ಆಗಿರಬಹುದು. ಇವೊತ್ತಿನ ದಿವಸ ಗ್ರಾಮಾಂತರದಲ್ಲಿರುವ ಜನಗಳಿಗೂ ಕೂಡ ಸೌಲಭ್ಯಗಳನ್ನು ಒದಗಿಸಬೇಕಾಗಿ ಬರುತ್ತದೆ. ಕಾರಣಾಂತರದಿಂದ ಈ ರೀತಿ ಆಗಿದ್ದರೆ, ಅದನ್ನೇ ದೊಡ್ಡ ಕಾರಣವೆಂದು ಇಟ್ಟುಕೊಳ್ಳಕೂಡದು. ಮದರಾಸ್, ಬೊಂಬಾಯಿ, ಹೈದರಾಬಾದ್‌ನಲ್ಲಿರುವ ಕನ್ನಡ ಮಾತನಾಡುವ ಜನಗಳನ್ನು ಆ ಸರ್ಕಾರಗಳು ನಿರ್ಲಕ್ಷ್ಯಮಾಡುವುದು ಸ್ವಾಭಾವಿಕ. ಅಲ್ಲಿರತಕ್ಕ ಜನಗಳು ಎಷ್ಟೋ ಕಷ್ಟಪಟ್ಟಿದ್ದಾರೆ. ಇವೊತ್ತಿನ ದಿವಸ ಮೈಸೂರು ಬಿಟ್ಟು ಹೊರಗೆ ಹೋದರೆ ಯಾವ ಜಾತಿಯವನೇ ಆಗಿರಲಿ ಆತನು ಕನ್ನಡ ಮಾತನಾಡಿದರೆ ಅವನ ಜೊತೆಯಲ್ಲಿ ಎಲ್ಲಾ ಸಮಾಚಾರಗಳನ್ನೂ ಮಾತನಾಡುತ್ತೇವೆ. ನನಗೆ ಗೊತ್ತಿಲ್ಲದೇ ಇರುವ ತಮಿಳು, ಇಂಗ್ಲಿಷ್, ಫ್ರೆಂಚ್ ಭಾಷೆ ಮಾತನಾಡುವವನ ಸಹವಾಸವನ್ನಾಗಲಿ, ಅವನ ಜೊತೆಗೆ ಮಾತನಾಡುವುದಕ್ಕಾಗಲಿ ಹೋಗುವುದಿಲ್ಲ. ನಮ್ಮ ಭಾಷೆಯನ್ನು ಮಾತನಾಡುವವರು ಎಲ್ಲಿಂದ ಬಂದರೂ ಏನು ವ್ಯಾಪಾರ ಮಾಡುತ್ತೀರಿ ಮುಂತಾದ ವಿಚಾರಗಳನ್ನು ಮಾತನಾಡುತ್ತೇವೆ. ಇವೊತ್ತಿನ ದಿವಸ ಪಕ್ಕದ ಪ್ರಾಂತಗಳಲ್ಲಿರುವ ಜನಗಳಿಗೆ ಕನ್ನಡ ಸ್ಕೂಲುಗಳಿಲ್ಲ. ಅವರು ಮನೆಯಲ್ಲಿ

(ಶ್ರೀ ಟಿ. ಹನುಮಯ್ಯ.)

ಮಾತನಾಡುವುದು ಕನ್ನಡ. ಆದರೆ ಸ್ಕೂಲುಗಳಲ್ಲಿ ಹೇಳಿಕೊಡುವುದು ಮರಾಠಿ, ಹಿಂದಿ ಇರುವುದರಿಂದ ಕನ್ನಡ ಭಾಷೆ ತುಂಡು ತುಂಡಾಗಿ ಚೂರು ಚೂರಾಗಿ ಕನ್ನಡ ಭಾಷೆ ಹಿಂದೆ ಎಷ್ಟು ವೈಭವದಿಂದ ಇತ್ತೋ ಅದು ಇವೊತ್ತಿನ ದಿವಸ ಹೋಗಿ ಬಹಳ ಹೀನಸ್ಥಿತಿಗೆ ಬಂದಿದೆ. ಕೋಟ್ಯಂತರ ಜನಗಳು ಕಾರಣಾಂತರದಿಂದ ಯುದ್ಧ ಮಾಡಿ ರಾಜ್ಯ ಕಳೆದುಕೊಂಡು ಬೇರೆಕಡೆ ಹೋಗಿರುವುದರಿಂದ ಅವರಿಗೆ ಈ ತರಹ ತೊಂದರೆಯಾಗಿದೆ. ಆದ್ದರಿಂದ ನಾವೆಲ್ಲರೂ ಕೂಡ ಅಕ್ಕಪಕ್ಕದ ಪ್ರಾಂತದ ಕನ್ನಡ ಜನಗಳು ನಮ್ಮ ದೇಶಕ್ಕೆ ಬಂದು ಸೇರುವುದರಲ್ಲಿ ಯಾವ ಭಿನ್ನಾಭಿಪ್ರಾಯವನ್ನೂ ಪಡಕೂಡದು. ನಾವೆಲ್ಲರೂ ಅವರನ್ನು ಜೊತೆಗೆ ಸೇರಿಸತಕ್ಕದ್ದು ಬಹಳ ಒಳ್ಳೆಯದು ಎಂದು ನನಗೆನ್ನಿಸುತ್ತದೆ. ಅನೇಕ ಮಾನ್ಯ ಸದಸ್ಯರು ನಮ್ಮ ದೇಶದಲ್ಲಿ ಒಂದು ಕೋಟಿ ಜನ ಇದ್ದಾರೆ, ಅವರದು ಒಂದು ಕೋಟಿ ಜನ ಆಗಬಹುದು, ಆದ್ದರಿಂದ ಎರಡು ಕನ್ನಡ ಪ್ರಾಂತ್ಯಗಳನ್ನು ಮಾಡಿದರೆ ಆಗುವುದಿಲ್ಲ ಎಂದು ಹೇಳಿದರು. ಕನ್ನಡ ಮಾತನಾಡತಕ್ಕ ಜನಗಳು ಎಲ್ಲಾ ಒಂದು ಸಂಸಾರ, ಒಂದುಮನೆ, ಒಂದುದೇಶ, ಒಂದು ಅಡಳಿತದಲ್ಲಿ ಇರೋಣ ಎಂದು ಹೇಳಿದರೆ, ಬೇಡ ಅವರೇ ಒಂದು ಪ್ರಾಂತ್ಯ ಮಾಡಿಕೊಳ್ಳಲಿ, ನಮ್ಮದೇ ಒಂದು ಪ್ರಾಂತ್ಯವಾಗಲಿ, ಅವರದು ಒಂದುಕೋಟಿ ಜನಸಂಖ್ಯೆ ನಮ್ಮದು ಒಂದು ಕೋಟಿ ಜನಸಂಖ್ಯೆಯಾಗುತ್ತದೆ ಎಂದು ಹೇಳುವುದನ್ನು ನೋಡಿದರೆ, ಗಂಡಹೆಂಡರನ್ನು ಬೇರೆ ಮಾಡಿದರೆ ಸುಖವಾಗುತ್ತದೆ ಎಂದು ಹೇಳಿದ ಹಾಗಾಗುತ್ತದೆ. ಅವರು ನಮ್ಮ ಹತ್ತಿರದಲ್ಲಿ 'ಒಂದೇ ಪ್ರಾಂತ್ಯದಲ್ಲಿರೋಣ, ನಮ್ಮಲ್ಲಿ ಏನು ವೈಶಿಷ್ಟ್ಯ ಇದೆಯೋ ಅದನ್ನು ಇನ್ನೂ ಹೆಚ್ಚಿಗೆ ಮಾಡೋಣ' ಎಂದು ಹಾತೊರೆಯುತ್ತಿದ್ದಾರೆ. ನಮ್ಮ ಜೊತೆಯಲ್ಲಿ ಬರುವವರನ್ನು ಬೇಡ ಎಂದು ಹೇಳುವುದು ಸರಿಯಲ್ಲ. ಇದರ ಜೊತೆಗೆ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ಹೈದರಾಬಾದಿನ ನಾನಲ್ ನಗರದಲ್ಲಿ ಕೂಡ ದೇಶವಿಂಗಡನೆ ಆಗತಕ್ಕದ್ದು ಬಹಳ ಅಗತ್ಯ ಎಂದು ಹೇಳಿದ್ದಾರೆ. ಇದು ಬಹಳ ಅಗತ್ಯವೆಂದು ನನಗನ್ನಿಸುತ್ತದೆ. ಅನೇಕ ಮಾನ್ಯ ಸದಸ್ಯರು 'ಕರ್ನಾಟಕ ಪ್ರದೇಶವೆಲ್ಲಾ ಯಾವ ಒಂದು ವಿಚಾರದಲ್ಲಿಯೂ ಕೂಡ ಮುಂದುವರಿದಿಲ್ಲ, ಇಂಥ undeveloped areasಗಳಿಗೆ ಸರ್ಕಾರದವರು ಏನು ಮಾಡುತ್ತಾರೆ' ಎಂದು ಕೇಳಿದರು. ಇವೊತ್ತಿನ ದಿವಸದಲ್ಲಿ ಮೈಸೂರು ದೇಶದ ಎಲ್ಲಾ ಭಾಗಗಳೂ ಒಂದೇ ರೀತಿಯಾಗಿ ಒಂದೇ ಸಮನಾಗಿ ಅಭಿವೃದ್ಧಿಯಾಗಿವೆಯೇ? ಒಂದುಕಡೆ ಜಾಸ್ತಿ ಹಣ ಸಹಾಯ ಮಾಡಿದರೆ ಇನ್ನೊಂದುಕಡೆ ಕಡಿಮೆ ಮಾಡುತ್ತಾರೆ. ಇನ್ನೊಂದುಕಡೆ ದುಡ್ಡೇ ಕೊಡುವುದಿಲ್ಲ. ಆಡಳಿತ ದೃಷ್ಟಿಯಿಂದ ಲೋಪ ದೋಷಗಳು ಆಗುತ್ತವೆಯೋ ಇಲ್ಲವೇ ಎಂದು ಹೇಳುವುದಕ್ಕಾಗುವುದಿಲ್ಲ. ಜೊತೆಗೆ ಕೋಟ್ಯಾಂತರ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು undeveloped areasನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಕೊಡುತ್ತಾ ಇರುವಾಗ್ಗೆ ನಮಗೆ ಏಕೆ ಹೆದರಿಕೆ? ಬೇರೆ ಪ್ರಾಂತ್ಯಗಳು ನಮ್ಮ ದೇಶಕ್ಕೆ ಬಂದಾಗ್ಗೆ ನಮಗೆ ಬಹಳ ದುಡ್ಡು ನಷ್ಟವಾಗುತ್ತದೆ, ನಮ್ಮಲ್ಲಿರತಕ್ಕ ದುಡ್ಡನ್ನು ಅವರಿಗೆ ಖರ್ಚುಮಾಡಬೇಕಾಗುತ್ತದೆ ಎಂದು ಹೇಳಿದರೆ ನನಗಾದರೂ ಅರ್ಥವಾಗುವುದಿಲ್ಲ. ಏಕೆಂದರೆ ದುಡ್ಡು ಒಂದುಕಡೆ ಸೇರುತ್ತಾ ಇದ್ದರೆ ಇನ್ನೊಂದುಕಡೆ ಕಡಿಮೆಯಾಗುತ್ತದೆ. ನೀರು ದಿಣ್ಣೆಗೆ ಹೋಗುವುದಿಲ್ಲ. ಯಾವಾಗಲೂ ಕೆಳಗೆ ಹೋಗುತ್ತದೆ. ಅದೇ ರೀತಿಯಾಗಿ ಎಲ್ಲವನ್ನೂ ಸಮನಾಗಿ ಮಾಡಬೇಕಾದರೆ ಎಲ್ಲಾ undeveloped areas ಕೂಡ ಅಭಿವೃದ್ಧಿ ಸ್ಥಿತಿಗೆ ತರಬೇಕು. ಆದ್ದರಿಂದ ಮೈಸೂರು ಮುಂದುವರಿದ ದೇಶವೆಂದು ಒಪ್ಪಿಕೊಂಡರೂಕೂಡ, ಮೈಸೂರು ದೇಶದ ಎಲ್ಲಾ ಭಾಗಗಳೂ ಒಂದೇ ಸಮನಾಗಿ ಅಭಿವೃದ್ಧಿಯಾಗಿವೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಜನರು ಹೆಚ್ಚಿನ ಆಸಕ್ತಿ ವಹಿಸಿ ಅನೇಕ ಅಭಿವೃದ್ಧಿ ಕೆಲಸ ನಡೆದಿವೆ. ಕೆಲವುಕಡೆ ನಡೆದಿಲ್ಲ. ಆದ್ದರಿಂದ ಇವೊತ್ತು ನಮ್ಮ ಕಡೆಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆದಿಲ್ಲ ಎಂದು ಅದನ್ನೇ ಆಧಾರ ಇಟ್ಟುಕೊಂಡು ನಾವು ಹಿಂದುಳಿದಿದ್ದೇವೆ ಎಂದು ಹೇಳುವುದು ಅಷ್ಟು ಸೂಕ್ತವಲ್ಲವೆಂದು ನಾನು ಹೇಳಬೇಕಾಗಿದೆ. ಆದಕಾರಣ ಮುಖ್ಯವಾಗಿ ನಾವೆಲ್ಲರೂ ವಿಶಾಲ ಹೃದಯದಿಂದ ಅಥವಾ ದೊಡ್ಡ ಧ್ಯೇಯ ಸಾಧನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ದೇಶದ ಹಿತದೃಷ್ಟಿಯಿಂದ ಕೆಲಸ ಮಾಡಬೇಕು. ಖಂಡಿತವಾಗಿಯೂ ಇದರಲ್ಲಿ ಯಾವ ಧಕ್ಕೆಯೂ ಬರುವುದಿಲ್ಲ. ಅನೇಕ ಮಾನ್ಯ ಸದಸ್ಯರು ಬಹಳ ಕೂಲಂಕಷವಾಗಿ ಮತ್ತು ಬಹಳ ಕುತೂಹಲದಿಂದ ವಿಚಾರಮಾಡಿದ್ದಾರೆ. ಒಬ್ಬರು ಪರವಾಗಿಯೂ ಮತ್ತೊಬ್ಬರು ವಿರೋಧವಾಗಿಯೂ ಮಾತನಾಡಿದ್ದಾರೆ. ಆದರೆ ನಾವೆಲ್ಲರೂ ಕೂಡ ಭಾರತದ ಪ್ರಜೆಗಳು ಎಂಬುದನ್ನು ಮರೆಯಬಾರದು. ಇವೊತ್ತು ಐಶ್ವರ್ಯವಂತರಿದ್ದರೆ ಅವರ ಮೇಲೆ ತೆರಿಗೆ ಹಾಕಿ ಅವರ ದುಡ್ಡನ್ನು ತೆಗೆದುಕೊಳ್ಳಲು ನಾವೆಲ್ಲರೂ ಪ್ರಯತ್ನಮಾಡುವುದಿಲ್ಲವೇನು? ಅದೇ ರೀತಿಯಲ್ಲಿ ಈ ಹೊತ್ತು ನಾವೆಲ್ಲರೂ ಪಕ್ಕದ ಪ್ರಾಂತ್ಯವನ್ನು ಒಳಗೊಂಡು ದೊಡ್ಡ ಕನ್ನಡ ಪ್ರಾಂತ್ಯದಲ್ಲಿರುವುದಾದರೆ ನಮಗೆ ದುಃಖವಾಗುವುದಿಲ್ಲ. ಆದ್ದರಿಂದ, ನಾವೆಲ್ಲರೂ ಒಮ್ಮನಸ್ಸಿನಿಂದ, ವಿಶಾಲ ದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಒಂದಾಗೋಣ. 200 ವರ್ಷಗಳ ಹಿಂದೆ ನಮ್ಮಿಂದ ಹರಿದು ಹಂಚಿಹೋಗಿರತಕ್ಕ ಭಾಗಗಳು ಮತ್ತೆ ಬಂದು ಒಟ್ಟುಗೂಡಿದರೆ ಅಭ್ಯಂತರವಿಲ್ಲ. ಆದ್ದರಿಂದ ಒಂದಾಗಲು ಎಲ್ಲರೂ ಸಹಕಾರ ನೀಡಬೇಕೆಂದು ಹೇಳಿ ನಾನು ಮುಗಿಸುತ್ತೇನೆ.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಅಧ್ಯಕ್ಷರೆ, ಶೇಷಾದ್ರಿ ಸಮಿತಿಯವರ ವರದಿ ಈಗ ಕೆಲವಾರು ದಿವಸಗಳಿಂದ ನಮ್ಮ ಮುಂದಿದೆ. ಅದರ ಪರವಾಗಿಯೂ ಮತ್ತು ವಿರೋಧವಾಗಿಯೂ ಅನೇಕ ಸದಸ್ಯರು ಮಾತನಾಡಿದ್ದಾರೆ. ಈ ಸಮಿತಿಯನ್ನು ನೇಮಿಸಿ ಅಂಕಿ ಅಂಶಗಳನ್ನು ಸಂಗ್ರಹಿಸಬೇಕೆಂದು ಹೇಳಿದುದರ ಉದ್ದೇಶ, ಕರ್ನಾಟಕವಾಗುವುದರಿಂದ ಸಾಧಕಬಾಧಕಗಳೇನು, ಸರ್ಕಾರ ಆಡಳಿತ ನಡೆಸಬೇಕಾದರೆ ಏನೇನು ಕಷ್ಟನಷ್ಟಗಳುಂಟಾಗುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಈ ವರದಿಯಲ್ಲಿ ತಿಳಿಸಿದೆ. ಏಕೀಕರಣವಾಗುವುದರಿಂದ ಏನೇನು ಸಾಧಕಬಾಧಕಗಳಿವೆಯೆಂಬುದನ್ನ ಎಲ್ಲಾ ದೃಷ್ಟಿಯಿಂದಲೂ ಇಲ್ಲಿ ಚರ್ಚಿಸಿದ್ದಾರೆ. ಈ ವರದಿ ಈಗ ಸಭೆಯ ಮುಂದಿದೆ.

ಯಾವ ದೃಷ್ಟಿಯಿಂದ ನೋಡಿದರೂ ಕೂಡ ಮೈಸೂರು ವಿಶಾಲವಾಗುವುದು 'ಮೈಸೂರಿನ ಹಿತದೃಷ್ಟಿಯಿಂದಲೇ ಒಳ್ಳೆಯದಲ್ಲವೆಂದು ನಿರ್ವಿವಾದವಾಗಿ ಈ ಸಮಿತಿಯ ವರದಿಯಿಂದ ಸ್ಪಷ್ಟವಾಗಿದೆ. ಆದರೂ, ಕೆಲವು ಮಾನ್ಯ ಸದಸ್ಯರು ಈ ಸಮಿತಿಯ ಅಂಕಿ ಅಂಶಗಳ ಆಧಾರದ ಮೇಲೆಯೇ ನಾವು ಒಂದು ಪ್ರಾಂತ್ಯವನ್ನು ರಚನೆ ಮಾಡುವುದಕ್ಕಾಗುವುದಿಲ್ಲ, ಇಲ್ಲಿ ಕೊಟ್ಟಿರುವುದು ಕೇವಲ ಶುಷ್ಕವಾದ ಅಂಕಿ ಅಂಶಗಳೆಂದು

ಹೇಳಿ ವಾದ ಮಾಡುತ್ತಿದ್ದಾರೆ. ಅದಕ್ಕೆ ಸೇರಿದಹಾಗೆ ಮತ್ತೊಂದು ವಾದವೇನಿದೆಯೆಂದರೆ, ಬರೀ ವರದಿಯೇ ಅಲ್ಲದೆ ಹಿಂದಿನಿಂದಲೂ ಕಾಂಗ್ರೆಸ್ ಸಂಸ್ಥೆ ಭಾಷಾವಾರು ಪ್ರಾಂತ್ಯ ರಚನಾ ತತ್ವವನ್ನು ಒಪ್ಪಿಕೊಂಡಿದೆಯೆಂಬುದನ್ನು ಕೂಡ ಇನ್ನು ಕೆಲವರು ಹೇಳಿದ್ದಾರೆ. ಈಚೆಗೆ ಅದನ್ನು ಕಾಂಗ್ರೆಸ್ಸಿನವರೇ ವಿರೋಧಿಸುತ್ತಿದ್ದಾರೆಂದು ಅವರು ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ.

ಈ ತತ್ವವನ್ನೊಪ್ಪಿಕೊಳ್ಳುವುದಕ್ಕೆ ಆಗ್ಗೆ ಏನು ಕಾರಣವಿತ್ತೋ ಗೊತ್ತಿಲ್ಲ. ಒಂದುವೇಳೆ ಭಾಷಾವಾರು ತತ್ವದಮೇಲೆ ಪ್ರಾಂತ್ಯಗಳ ವಿಂಗಡಣೆ ಮಾಡಬೇಕೆಂಬ ಉದ್ದೇಶವೇ ಕಾಂಗ್ರೆಸ್ಸಿಗೆ ಇದ್ದಿದ್ದರೆ, ಈ ಸಮಿತಿಯನ್ನೇ ನೇಮಿಸುತ್ತಿರಲಿಲ್ಲ. ಸ್ವಾತಂತ್ರ್ಯ ಬಂದ ತರುಣದಲ್ಲಿ ಇಂಡಿಯಾ ಸರ್ಕಾರದವರು ಅನೇಕ ಸಣ್ಣ ಸಣ್ಣ ಸಂಸ್ಥಾನಗಳನ್ನು ಪಕ್ಕದ ಪ್ರಾಂತ್ಯಗಳೊಡನೆ ವಿಲೀನಗೊಳಿಸಿದರು; ಆಗ ಯಾವ ಸಂಸ್ಥಾನದ ಸರ್ಕಾರದವರೂ ಪ್ರತಿಭಟಿಸಲಿಲ್ಲ; ಹಾಗೆಯೇ ಮೈಸೂರಿನ ಪಕ್ಕದ ಪ್ರಾಂತ್ಯಗಳೊಡನೆ ವಿಲೀನ ಮಾಡಿದ್ದರೆ ಏನು ಮಾಡುತ್ತಿದ್ದರು; ಟಿಪ್ಪುಸುಲ್ತಾನನ ಕರ್ನಾಟಕ ಯಾವ ರೀತಿಯಿತ್ತೋ ಅದೇ ರೀತಿ ಮಾಡಿದ್ದಲ್ಲಿ ಏನು ಮಾಡುತ್ತಿದ್ದರು ಎಂಬ ವಾದವನ್ನು ಹೇಳಿದರು. ಒಂದುವೇಳೆ ಆ ಉದ್ದೇಶ ಇಂಡಿಯಾ ಸರ್ಕಾರದವರಿಗಿದ್ದರೆ ಈ ಮೊದಲೇ ಅದನ್ನು ಮಾಡುತ್ತಿದ್ದರು. ಆ ರೀತಿಯ ಅಭಿಪ್ರಾಯವಿರಲಿಲ್ಲವೆಂಬುದು ಇದರಿಂದಲೇ ವ್ಯಕ್ತವಾಗುತ್ತದೆ. ಅದಕ್ಕಾಗಿಯೇ ಭಾಷಾವಾರು ಪ್ರಾಂತ ತತ್ವದ ಮೇಲೆ ಆಡಳಿತ ನಡೆಸಬೇಕೆಂದು ಮೊದಲು ಒಪ್ಪಿದ್ದರೂ ಈಚೆಗೆ ಆಡಳಿತವನ್ನು ಸ್ವಲ್ಪಕಾಲ ನಡೆಸಿ ಭಾಷಾವಾರು ವಿಭಜನೆ ಮಾಡುವುದರಿಂದ ಏನು ತೊಂದರೆಯಾಗುತ್ತದೆಂಬುದನ್ನು ಆಡಳಿತ ನಡೆಸತಕ್ಕ ಕಾಂಗ್ರೆಸ್ ಸಂಸ್ಥೆ ಅರಿತುಕೊಂಡು ನಾಸಿಕ್ ನಗರದಲ್ಲಿ ತಾವು ಹಿಂದೆ ಮಾಡಿದ್ದ ನಿರ್ಣಯದಿಂದ ದೂರ ಸರಿದು, ಬರೀ ಆರ್ಥಿಕ ಮತ್ತು ಆಡಳಿತ ದೃಷ್ಟಿಯಿಂದ ಹಾಗೂ ಜನಗಳ ಅಭಿಪ್ರಾಯದ ಮೇಲೆ ಮಾಡಬೇಕೆಂದು ಹೇಳಿ ಒಂದು ಸಮಿತಿಯನ್ನು ನೇಮಿಸಿ ಅದು ಕೂಲಂಕಷವಾಗಿ ಈ ಸಮಸ್ಯೆಯನ್ನು ಪರಿಶೀಲಿಸಿ ಸಲಹೆ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದಾರೆ. ಅದಕ್ಕನುಸಾರವಾಗಿ ನಮ್ಮ ಸರ್ಕಾರದವರೂ ಕೂಡ ಏಕೀಕರಣದಿಂದಾಗುವ ಸಾಧಕ ಬಾಧಕಗಳನ್ನು ತಿಳಿದುಕೊಳ್ಳುವುದಕ್ಕಾಗಿ ಒಂದು ಸಮಿತಿಯನ್ನು ಮಾಡಿದರು. ಆ ವರದಿ ಈಗ ನಮ್ಮ ಮುಂದಿದೆ. ಅದನ್ನು ಯಾವ ದೃಷ್ಟಿಯಿಂದ ಪರಿಶೀಲಿಸಿದರೂ ಅನುಕೂಲಕ್ಕಿಂತ ಪ್ರತಿಕೂಲಗಳೇ ಅಗುತ್ತವೆಂದು ತೋರುತ್ತದೆ. ಆದ್ದರಿಂದ ಅಂಕಿ ಅಂಶಗಳನ್ನು ಬಿಟ್ಟು ಕರ್ನಾಟಕ ಪ್ರಾಂತವಾಗುವುದರ ಸಾಧಕ ಬಾಧಕಗಳನ್ನು ಯೋಚನೆ ಮಾಡದೆ ಯಾವುದನ್ನೂ ಮಾಡುವುದು ಸೂಕ್ತವಲ್ಲ. ಕೆಲವು ಮಾನ್ಯ ಸ್ನೇಹಿತರು ಇನ್ನೊಂದು ವಾದವನ್ನು ನಮ್ಮ ಮುಂದಿಟ್ಟರು. ಬೊಂಬಾಯಿ ಕರ್ನಾಟಕದಲ್ಲಾಗಲಿ, ಹೈದರಾಬಾದಿನಲ್ಲಿಯಾಗಲಿ ಅಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದುಕೊಂಡು ಅನೇಕ ರೀತಿಯ ಕಿರುಕುಳಕ್ಕೊಳಗಾಗಿದ್ದಾರೆ ಎಂದು. ಆಮಾತು ನಿಜವೆಂದು ಒಪ್ಪುವುದಾದರೆ, ಅದೇ ರೀತಿ ಮೈಸೂರಿನಲ್ಲಿ ಅಲ್ಪಸಂಖ್ಯಾತರಾಗಿರುವ ತೆಲುಗರು, ತಮಿಳರು ಮತ್ತು ಇತರರೂ ಕೂಡ ಅಲ್ಲಿ ಕನ್ನಡ ಜನರು ಯಾವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೋ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದಾಗಿತ್ತು. ಆದರೆ ಮೈಸೂರಿನಲ್ಲಿ ಆ ಅಭಿಪ್ರಾಯಕ್ಕೆ ಎಡೆಯಿಲ್ಲದ ಹಾಗೆ ನಡೆದುಕೊಂಡು ಹೋಗುತ್ತಿದ್ದೇವೆ. ಆದ್ದರಿಂದ ಬೊಂಬಾಯಿ ಕನ್ನಡಿಗರು ಈ ವಾದವನ್ನು ಏಕೆ ತರುತ್ತಿದ್ದಾರೋ ಅಥವಾ ನಿಜವಾಗಿಯೂ ಅವರನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೋ, ನಮಗೆ ಗೊತ್ತಿಲ್ಲ. ನನಗನ್ನಿಸುತ್ತದೆ, ಬಹುಶಃ ಇದಕ್ಕೆಲ್ಲ ಕಾರಣ, ಮುಂಚೆ ಕಾಂಗ್ರೆಸ್ ಸಂಸ್ಥೆ ಭಾಷಾವಾರು ಪ್ರಾಂತ್ಯ ರಚನೆಯನ್ನು ಅಂಗೀಕರಿಸಿದ್ದು. ಆದರ ಮೇಲೆ ವಿಶೇಷ ಚಳವಳಿ ನಡೆಯಿತು. ಆ ಚಳವಳಿಯ ದೆಸೆಯಿಂದ ಭಾಷಾವಾರು ಪ್ರಾಂತ್ಯ ನಿರ್ಮಾಣದ ಮನೋಭಾವ ಜನರಲ್ಲಿ ಬೆಳೆದು ಬಂದು ಈಗ ಈ ಪರಿಣಾಮವಾಗಿದೆಯೆಂದು ನನಗೆ ತೋರುತ್ತದೆ. ಇಲ್ಲದಿದ್ದರೆ, ಮೈಸೂರಿನಲ್ಲಿಯೂ ಕೂಡ ಇಲ್ಲಿರುವ ಅಲ್ಪಸಂಖ್ಯಾತರಲ್ಲಿ ಇದೇ ತರಹ ಒಂದು ಅಭಿಪ್ರಾಯ ಮೂಡಬೇಕಾಗಿತ್ತು. ಮೈಸೂರಿನಲ್ಲಾಗಲಿ ಹೈದರಾಬಾದಿನಲ್ಲಾಗಲಿ ಅಂಥಾದ್ದಾಗಿಲ್ಲ. ಅಷ್ಟೇಕೆ, ಮದ್ರಾಸಿನಿಂದ ಬೇರ್ಪಟ್ಟ ಆಂಧ್ರದವರು ವಿಶಾಲಾಂಧ್ರಕ್ಕೆ ಯಾವ ರೀತಿ ಚಳವಳಿ ನಡೆಸಿದರೂ ಹೈದರಾಬಾದಿನ ತೆಲುಗು ಪ್ರಾಂತ್ಯದವರು ತಮಗೆ ಆಂಧ್ರ ಪ್ರಾಂತ್ಯಕ್ಕೆ ಸೇರಲು ಇಷ್ಟವೆಂದು ಹೇಳಿ, ತಾವೇ ಬೇರೆ ಪ್ರಾಂತ್ಯ ಮಾಡಿಕೊಳ್ಳುವುದಾಗಿ ಒಂದು Resolutionನ್ನನ್ನು ಕೂಡ ಮಾಡಿದ್ದಾರೆ. ಆದ್ದರಿಂದ ಮುಖ್ಯವಾಗಿ ಪ್ರಾಂತ್ಯ ಮನೋಭಾವ ಬೆಳೆದುಕೊಂಡು ಬರುತ್ತಿರುವುದರಿಂದ ಅಲ್ಲಿ ಆ ರೀತಿಯ ಚಳವಳಿಗೆ ಅವಕಾಶವಾಗಿದೆ. ಅಂಥ ಮನೋಭಾವ ಮೈಸೂರಿನಲ್ಲಿಲ್ಲ. ಹೀಗಿರುವಾಗ ಅಂಥ ಮನೋಭಾವ ಬೆಳೆದಿರುವ ಜನ ಮೈಸೂರಿನಲ್ಲಿ ಸೇರಿ ವಿಶಾಲ ಕರ್ನಾಟಕ ಮಾಡುವುದಾದರೆ, ಆಗ ಮೈಸೂರಿನಲ್ಲಿರುವ ತಮಿಳರು ತೆಲುಗರು ಯಾವ ಪರಿಸ್ಥಿತಿಗೆ ಇಳಿಯುತ್ತಾರೆಂಬುದನ್ನು ಸ್ವಲ್ಪ ಯೋಚಿಸಿದರೂ ಬಹಳ ನಿರಾಶೆಯುಂಟಾಗುತ್ತದೆ. ಮೊದಲನೆಯದಾಗಿ ಅಲ್ಲಿ ಅವರಿಗೆ ಕಿರುಕುಳವಿದೆಯೋ ಇಲ್ಲವೋ ಗೊತ್ತಿಲ್ಲ. ಎರಡನೆಯದಾಗಿ ಅಂಥ ಕಲುಷಿತ ಮನೋಭಾವ ಬೆಳೆದು ಬಂದಿರುವ ಆ ಜನ ಸೌಹಾರ್ದ ಮನೋಭಾವ ಭಾವವಿರುವ ಮೈಸೂರಿನ ಜನರೊಂದಿಗೆ ಬೆರೆದರೆ, ಇಲ್ಲಿಯೂ ಆ ವಿಷಮವಾತಾವರಣವುಂಟಾಗಿ ಇಲ್ಲಿನ ಅಲ್ಪಸಂಖ್ಯಾತರಿಗೆ ಕಿರುಕುಳವಾಗಬಹುದಾದ ಪರಿಸ್ಥಿತಿಯಿದೆ. ಆದ್ದರಿಂದ ಈ ರೀತಿ ಒಂದು ವಿಶಾಲ ಕರ್ನಾಟಕ ಮಾಡುವುದಾದರೆ, ಬೊಂಬಾಯಿನಲ್ಲಿರತಕ್ಕ ಅಲ್ಪಸಂಖ್ಯಾತರ ಕಷ್ಟವನ್ನು ತಪ್ಪಿಸುವುದಕ್ಕೆ ಹೋಗಿ ಮೈಸೂರಿನಲ್ಲಿರತಕ್ಕ ಅಲ್ಪಸಂಖ್ಯಾತರಿಗೆ ಕಿರುಕುಳ ತಂದಂತಾಗುತ್ತದೆ. ಅಂತೂ, ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಬದಲಾಗಿ ಬಿಗಡಾಯಿಸುವುದಕ್ಕೆ ಅವಕಾಶ ಮಾಡಿದಂತಾಗುತ್ತದೆ. ಈಗ ಸ್ವಲ್ಪ ತಿಂಗಳುಗಳ ಹಿಂದೆ ಮೈಸೂರಿಗೆ ಬಳ್ಳಾರಿಯವರು ಬಂದರು; ಆಗೇನೂ ನಾವು ಇದೇ ಧೋರಣೆಯಿಂದ ಮಾತನಾಡಲಿಲ್ಲ. ಕಾರಣವೇನೆಂದರೆ ಭಾಷೆಯಮೇಲೆ ನಾವು ಅದನ್ನು ಮಾಡಲಿಲ್ಲ. ಅಲ್ಲಿನವರೂ ಆ ರೀತಿಯ ಜನ ಅಲ್ಲ. ಅದರಿಂದಲೇ ಹೃತ್ಪೂರ್ವಕವಾಗಿ ನಾವು ಬಳ್ಳಾರಿಯ ಜನರನ್ನು ಸ್ವಾಗತಿಸಿದೆವು. ಆದ್ದರಿಂದ ಇದನ್ನು ಭಾಷೆಯ ದೃಷ್ಟಿಯಿಂದ ಮಾಡಹೊರಟರೆ ಬಹಳ ಅನಾನುಕೂಲವಾಗುತ್ತದೆ. ಆಡಳಿತ ದೃಷ್ಟಿಯಿಂದ ಹೇಳುವುದಾದರೆ, ಎರಡು ಕರ್ನಾಟಕಗಳನ್ನು ಮಾಡುವುದು ಚೆನ್ನಾಗಿರುತ್ತದೆ. ಆಡಳಿತಾನುಕೂಲತೆಯ ದೃಷ್ಟಿಯಿಂದ ಯಾವ ಯಾವ ಭಾಗಗಳನ್ನು ಮೈಸೂರಿಗೆ ಸೇರಿಸಬಹುದೋ ಅವುಗಳನ್ನು ಮಾತ್ರ ಸೇರಿಸಿದರೆ ನಿಜವಾಗಿಯೂ ಸುಗಮವಾಗಿ ನಡೆದುಕೊಂಡು ಹೋಗುತ್ತದೆ, ಅನುಕೂಲವಾದ ವಾತಾವರಣವೂ ಬರುತ್ತದೆ. ಅಂಥ ಒಂದು ಮೈಸೂರನ್ನು ನಿರ್ಮಿಸುವುದು ಇಡೀ ಭಾರತದ ದೃಷ್ಟಿಯಿಂದ ಸೂಕ್ತ

(ಶ್ರೀ ಪಿ. ಪಾಪಣ್ಣ.)

ವೆಂದು ಹೇಳುತ್ತೇನೆ. ಏಕೆಂದರೆ, ಆಂಧ್ರರಿಗೂ ಅವರ ಭಾಷೆಯ ಮೇಲೆ ಪ್ರೇಮವಿದೆ; ತಮಿಳರಿಗೂ ಅವರ ಭಾಷೆಯ ಮೇಲೆ ಪ್ರೇಮವಿದೆ. ಅವರವರು ತಮ್ಮ ತಮ್ಮ ಭಾಷಾ ವ್ಯಾಮೋಹದ ಮೇಲೆ ತಮ ತಮಗೇ ಒಂದು ಪ್ರಾಂತ್ಯ ಮಾಡಿಕೊಳ್ಳುತ್ತಿದ್ದರೆ ಸನ್ನಿವೇಶ ಏನಾಗುತ್ತದೆಂಬುದು ತಮಗೆ ಗೊತ್ತಿದೆ. ಆಂಧ್ರದಲ್ಲಿ ಏನು ಪರಿಸ್ಥಿತಿಯಿದೆಯೆಂಬುದು ತಮಗೇ ಗೊತ್ತು. ತಿರುವಾಂಕೂರು—ಕೊಚ್ಚಿನ್‌ನಲ್ಲಿ ತಮಿಳರ ಸ್ಥಿತಿ ಏನಾಗಿದೆಯೆಂಬುದನ್ನು ನೀವೇ ನೋಡಿದ್ದೀರಿ. ಬಿಹಾರಿನಲ್ಲಿ ಏನಾಗುತ್ತಿದೆಯೆಂಬುದು ಗೊತ್ತಿದೆ. ಇವೆಲ್ಲಾ ನೋಡಿದ ಮೇಲೆ ಭಾಷೆಯ ಮೇಲೆ ರಾಜ್ಯ ನಿರ್ಮಾಣ ಮಾಡುವುದರ ಸೂಕ್ತಾ ಸೂಕ್ತತೆಯನ್ನು ಯೋಚನೆ ಮಾಡಬಹುದು. ಮೈಸೂರಿನಲ್ಲಾದರೋ ಇಂದು ಭಾಷೆಯ ಗೊಂದಲವಿಲ್ಲದೆ ಸ್ನೇಹಪೂರ್ವಕವಾಗಿ ಎಲ್ಲಾ ಭಾಷೆಯವರೂ ನಡೆದುಕೊಂಡು ಹೋಗುತ್ತಾ ಇತರರಿಗೆ ಮಾರ್ಗದರ್ಶಕರಾಗಿದ್ದೇವೆ. ಆದ್ದರಿಂದ ಮೈಸೂರನ್ನು ಹೀಗೆಯೇ ಉಳಿಸಿಕೊಳ್ಳುವುದು ಲೇಸು, ಎಲ್ಲರೂ ಒಟ್ಟಿಗೆ ಸೇರುವುದು ಸರಿಯಲ್ಲವೆಂದು ನನ್ನ ಅಭಿಮತ ಸೂಚಿಸಿ ಮುಗಿಸುತ್ತೇನೆ.

5-30 P.M.

ಶ್ರೀ ಕೆ. ಕೊಟ್ರ ಬಸವನಗೌಡ (ಕೂಡ್ಲಿಗಿ).—ಅಧ್ಯಕ್ಷರೇ, ನಮ್ಮ ಮುಂದೆ ಈಗ ಚರ್ಚೆಗಾಗಿ ರಾಜ್ಯಗಳ ಪುನರ್ವಿಂಗಡಣೆಯ ಸಂಬಂಧವಾಗಿ ಬಂದಿರತಕ್ಕ ಈ ಶೇಷಾದ್ರಿ ವರದಿಯಮೇಲೆ ಮೂರು ನಾಲ್ಕು ದಿವಸಗಳಿಂದಲೂ ಚರ್ಚೆ ನಡೆಯುತ್ತಲೇ ಬಂದಿದೆ. ಈ ಶೇಷಾದ್ರಿ ಕಮಿಟಿಯನ್ನು ರಚಿಸುವುದಕ್ಕೆ ಮುನ್ನ ಹೋದ ವರ್ಷದ ಜೂನ್ ತಿಂಗಳಲ್ಲಿ ನಾವು ಒಂದು ಪಾರ್ಟಿ ಮೀಟಿಂಗನ್ನು ಕರೆದಿದ್ದೆವು. ಆಗ ಆ ಸಭೆಯಲ್ಲಿ ಕೆಲವರು ಕರ್ಣಾಟಕ ಪ್ರಾಂತ್ಯ ನಿರ್ಮಾಣದ ವಿಚಾರದಲ್ಲಿ ವಿರೋಧಾಭಿಪ್ರಾಯವನ್ನೂ ಇನ್ನು ಹಲವರು ಆಗ ತಕ್ಕದ್ದು ಅನುಕೂಲವಾದುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆಗ ಅದೇ ಸಭೆಯಲ್ಲಿ ಕೇಂದ್ರ ಸರ್ಕಾರ ರಚಿಸಿರುವ ಫಸಲಾಲಿ ಸಮಿತಿಯವರು ನಮ್ಮ ದೇಶಕ್ಕೆ ಬಂದಾಗ ನಾವು ಏನೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂಬ ಪ್ರಶ್ನೆ ಎದ್ದಿತು. ಆಗಲೂ ಕೂಡ ಕೆಲವು ಭಿನ್ನಾಭಿಪ್ರಾಯಗಳು ತಲೆದೋರಿದ್ದರಿಂದ ಆಗ ಈ ಸಮಿತಿಯನ್ನು ನೇಮಕ ಮಾಡಬೇಕಾದ ಅಗತ್ಯ ಕಂಡು ಬಂದಿತು. ಅದರಂತೆ ಏರ್ಪಾಡು ಮಾಡಿದ್ದಾರೆ. ಆದರೆ ಹಾಗೆ ಈ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನನ್ನ ಸಹೋದರರು ಹೇಳಿದಾಗಲೂ ಕೂಡ ನಾನು ನನ್ನ ಪರವಾಗಿ ಈ ಸಮಿತಿಯನ್ನು ನೇಮಿಸುವುದು ಅನಾವಶ್ಯಕ ಎಂದೇ ಹೇಳಿದ್ದೇನೆ. ಈ ದಿವಸ ನಮಗೆ ಮುಖ್ಯವಾಗಿ ಬೇಕಾಗಿರತಕ್ಕದ್ದು ಈ ಅಂಕಿ ಅಂಶಗಳಲ್ಲ. ನಮಗೆ ಬೇಕಾಗಿರುವುದು ಒಂದು ವಿಶಾಲ ದೃಷ್ಟಿ ಮತ್ತು ಒಂದು ಭಾಷಾಭಿಮಾನ. ಭಾಷಾವಾರು ರಾಜ್ಯ ನಿರ್ಮಾಣವೇ ಶಾಸ್ತ್ರೋಕ್ತವಾದದ್ದು ಎನ್ನುವುದು ನಮಗೆ ಆರ್ಷೇಯದಿಂದಲೂ ಚರಿತ್ರೆಗಳಿಂದ ಕಂಡು ಬರುತ್ತಿದೆ. ಆದರೆ ನಮಗೆ ಈ ಅಂಕಿ ಅಂಶಗಳ ಅಗತ್ಯವಿರುವುದು ಯಾವಾಗ ಅಂದರೆ ನಾವು ಯಾವುದಾದರೊಂದು ಸ್ವತ್ತನ್ನು ಖರೀದಿ ಮಾಡುವಾಗ ನಮಗೆ ಈ ಅಂಕಿ ಅಂಶಗಳ ಅಗತ್ಯವಿರುತ್ತದೆ. ಆದರೆ ಇಲ್ಲಿಯ ತನಕ ರಾಜ್ಯಗಳನ್ನು ಯಾರು ಯಾರು ಕಟ್ಟಿದ್ದಾರೋ ಅವರು ಯಾರು ಹೀಗೆ ಒಂದು ಅಂಕಿ ಅಂಶಗಳನ್ನಿಟ್ಟುಕೊಂಡು ರಾಜ್ಯಗಳನ್ನು ಕಟ್ಟಿಲ್ಲ. ಆಂಧ್ರ ರಾಜ್ಯವನ್ನೂ ಕೂಡ ಒಂದು ಭಾಷೆಯ ಅಧಾರದ ಮೇಲೆ ಕಟ್ಟಲ್ಪಟ್ಟಿತೇ ಹೊರತು ಹೀಗೆ ಒಂದು ಅಂಕಿ ಅಂಶಗಳ ಆಧಾರದ ಮೇಲೇನೂ ಅದನ್ನು ಕಟ್ಟಲಿಲ್ಲ ಅನ್ನುವುದನ್ನು ತಾವುಗಳ್ಯಾರೂ ಮರೆಯಬಾರದು. ಇದರಲ್ಲಿ ಲಾಭ ನಷ್ಟದ ಪ್ರಶ್ನೆಯೇ ಏಳುವುದಿಲ್ಲ. ಶ್ರೀ ಶೇಷಾದ್ರಿ ಸಮಿತಿಯಲ್ಲಿ ಶ್ರಮವಹಿಸಿದ ವ್ಯಕ್ತಿಗಳೆಲ್ಲಾ ದೊಡ್ಡ ಮನುಷ್ಯರಿರಬಹುದು. ಆದರೆ ಅವರು ಈ ವರದಿಯನ್ನು ತಯಾರಿಸುವ ಬಗ್ಗೆ ಒಂದು ಪಕ್ಕದ ನೋಟವನ್ನು ಮಾತ್ರ ಚಿತ್ರಿಸಿದ್ದಾರೆಯೇ ಹೊರತು ಮತ್ತೊಂದು ಪಕ್ಕದ ಚಿತ್ರವನ್ನು ಚಿತ್ರಿಸಿಲ್ಲ. ಹೀಗೆ ಮೇಲು-ಕೀಳುಗಳೆರಡನ್ನೂ ಹೋಲಿಸದೆ ಕೇವಲ ಕೀಳು ವಿಚಾರಗಳ ಪ್ರಶ್ನೆಯನ್ನು ತಗೆದುಕೊಂಡು ಮೈಸೂರನ್ನು ಇತರ ಕರ್ಣಾಟಕ ಪ್ರಾಂತ್ಯಗಳೊಡನೆ ಹೋಲಿಕೆ ಹಾಕಿ ಈ ಒಂದು ವರದಿಯನ್ನು ತಯಾರಿಸಿದ್ದಾರೆ. ಕರ್ನಾಟಕ ಪ್ರಾಂತ್ಯ ನಿರ್ಮಾಣವಾದರೆ ಕೋಟಿಗಟ್ಟಲೆ ಬಡ್ಜೆಟ್ ಖೋತಾ ಆಗುತ್ತದೆ ಎಂದು ಹೇಳಿದರೇ ಹೊರತು ಅಲ್ಲಿರತಕ್ಕಂಥ ಪ್ರಕೃತಿ ಸಾಧನ ಸಂಪತ್ತುಗಳ ವಿಚಾರಗಳನ್ನೆಲ್ಲಾ ಕೈ ಬಿಟ್ಟಿದ್ದಾರೆ. ಆ ಪ್ರದೇಶಕ್ಕೆ ಇಷ್ಟು ಖರ್ಚಾಗುತ್ತದೆ ಎಂದು ಹೇಳುವಾಗ ಅದರಿಂದ ಬರತಕ್ಕ ಉತ್ಪತ್ತಿ ಏನಿದೆ ಎನ್ನುವುದನ್ನೇಕೆ ಇವರು ತಿಳಿಸಲಿಲ್ಲ? ಈ ಕರ್ಣಾಟಕಾಭಿಮಾನಗಳ ವರದಿಯಲ್ಲಿ ಹೀಗೆ ಹೇಳಿದ್ದಾಗ್ಯೂ ಚಿಂತೆಯಿಲ್ಲ. ಆದರೆ ಇತರ ಕೆಲವು ಸರ್ಕಾರಿ ದೊಡ್ಡ ದೊಡ್ಡ ಹೆಸರುವಾಸಿಯಾದಂಥ ಅರ್ಥಿಕ ನಿಪುಣರೂ ಮತ್ತು ಸುಪ್ರಸಿದ್ಧಿ ಹೊಂದಿದ ಭೂಗರ್ಭ ಸಂಶೋಧಕರೂ ಈ ಕರ್ಣಾಕಟ ಪ್ರಾಂತ್ಯದ ಸಂಪತ್ತಿನ ವಿಚಾರದಲ್ಲಿ ಹೀಗೆ ಹೇಳಿದ್ದಾರೆ:—

Dr. Krishna Kumar, Geologist, Government of India, said :—

"A noteworthy point is that although mining is a Central subject, Industries are provincial subjects and according to Dr. Dunn, the Superintending Geologist of India, in India, as in most countries, the vast and growing mineral industry forms the foundation of all other industries. The mineral resources of Karnataka are therefore the very back bone of almost all industries that Karnataka could possibly hope to develop."

ಮತ್ತೊಬ್ಬ ಡಾಕ್ಟರ್ ಹೀಗೆ ಹೇಳಿದ್ದಾರೆ:—

"Mineral development in Karnataka provides not only the raw materials for many varieties of marketable goods, but also the machinery and tools which make possible the manufacture into saleable articles of raw materials grown from the land. If rapid industrialisation is one of India's high aims, one cannot see how India could continue to afford to neglect areas like Karnataka."

Dr. Alexandar Christie observed:

"The Dharwar District and the adjoining area contained specimens of all rocks and served as an example of the general geognotical structure of the entire peninsula of India."

"A study of the mineral map reveals that Karnataka possesses India's second largest mineral groupings, the first largest being spread over Orissa, C. P., Bihar and Bengal."

ಈ ಕೆಲವು ಕಾರಣಗಳಿಂದ ನಾವು ಈ ಪ್ರಾಂತ್ಯ
ಗಳಲ್ಲಿರತಕ್ಕಂಥ ಅನುಕೂಲತೆಗಳನ್ನು ಗಮನಿಸುವು
ದಾದರೆ ನಮ್ಮ ಇಡೀ ಭರತಖಂಡದಲ್ಲೇ ಈ ಕರ್ಣಾಟಕ
ಪ್ರಾಂತ್ಯದಲ್ಲಿ ಇರುವಷ್ಟು ಖನಿಜ ಸಂಪತ್ತು
ಮತ್ತೊಂದು ಭಾಗದಲ್ಲಿಲ್ಲವೆಂದು ಖಚಿತವಾಗಿ ಹೇಳ
ಬಹುದಾಗಿದೆ. ಇನ್ನು ಈ ಅರಣ್ಯ ಸಂಪತ್ತನ್ನು
ತೆಗೆದುಕೊಂಡರೆ ಈ ದಿವಸ ಈ ಮೈಸೂರಿನಲ್ಲಿ
ಏನೊಂದು ಅರಣ್ಯ ಸಂಪತ್ತಿದೆಯೋ ಇದಕ್ಕಿಂತಲೂ
ಅತಿಶಯವಾದಂಥ ಹೆಚ್ಚಿನ ಅರಣ್ಯ ಸಂಪತ್ತು ಉತ್ತರ
ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುತ್ತದೆ. ಈ ದಿವಸ
ಈ ಕನ್ನಡ ಭಾಗಗಳನ್ನೆಲ್ಲಾ ಮೈಸೂರಿಗೆ ಸೇರಿಸು
ವುದರಿಂದ ಸರ್ಕಾರಕ್ಕೆ ಎಂಟು ಹತ್ತು ಕೋಟಿ
ರೂಪಾಯಿಗಳ ವೆಚ್ಚ ಹೆಚ್ಚಾಗುತ್ತದೆಂದು ಕಂಡು
ಬಂದರೂ ಚಿಂತೆಯಿಲ್ಲ; ಇಷ್ಟೇಕೆ ಇನ್ನೂ 50
ಕೋಟಿ ಖರ್ಚಾದರೂ ನಾವುಗಳು ಯಾರೂ
ಅದಕ್ಕೆ ಚಿಂತೆ ಪಡಬೇಕಾಗಿಲ್ಲವೆಂದು ಹೇಳುತ್ತೇನೆ.
ಕಾರಣವೇನೆಂದರೆ ಈ ದಿವಸ ಇಡೀ ಮೈಸೂರಿನ
ಜನಸಂಖ್ಯೆ ಒಂದು ಕೋಟಿಯನ್ನು ಇನ್ನೂ
ಮುಟ್ಟಿಲ್ಲ ಮತ್ತು ಈಗ ಈ ಮೈಸೂರು ಹೊರ
ಗಡೆಯಿರತಕ್ಕ ಕರ್ಣಾಟಕ ಪ್ರಾಂತ್ಯಗಳಲ್ಲಿರತಕ್ಕಂಥ
ಭೂಗರ್ಭ ಸಂಪತ್ತನ್ನೆಲ್ಲಾ ನಾವು ರೂಢಿಸಿಕೊಂಡರೆ
ಆಗ ಸುಮಾರು 70-80 ಕೋಟಿ ರೂಪಾಯಿಗಳ
ಆದಾಯ ಬರುವುದು ಒಂದೇ ಅಲ್ಲದೆ ಕೋಟ್ಯಂತರ
ಜನರಿಗೆ ಉದ್ಯೋಗ ದೊರಕಿಸಿ ಕೊಡುವಂಥ ಅನೇಕ
ರೀತಿಯ ಕೈಗಾರಿಕಾ ಕಾರ್ಖಾನೆಗಳನ್ನು ಇಲ್ಲಿ
ಸ್ಥಾಪಿಸುವುದಕ್ಕೆ ಅನುಕೂಲವಿದೆ. ಈ ದಿವಸ
ಮೈಸೂರು ಕೈಗಾರಿಕೆಯಲ್ಲಿ ಅಷ್ಟೇನೂ ಮುಂದು
ವರಿದಿಲ್ಲ. ಈ ದಿವಸ ಕನ್ನಡಿಗರು ಸೇರಿಕೊಂಡಿರ
ತಕ್ಕಂಥ ಮದರಾಸ್ ಮತ್ತು ಬೊಂಬಾಯಿ ಪ್ರಾಂತ್ಯ
ಗಳಲ್ಲಿ ವಾಸ ಮಾಡತಕ್ಕಂಥ ಅಧಿಕ ಸಂಖ್ಯಾತ ಜನರು
ಈ ಕನ್ನಡಿಗರಿರುವ ಪ್ರದೇಶಗಳ ಅಭಿವೃದ್ಧಿಗಾಗಿ
ಶ್ರಮಿಸಿದ್ದರೆ ಅಲ್ಲಿ ಕೋಟ್ಯಂತರ ರೂಪಾಯಿಗಳ
ವರಮಾನ ಬರತಕ್ಕಂಥ ಕೈಗಾರಿಕಾ ಕಾರ್ಖಾನೆ
ಗಳನ್ನು ಸ್ಥಾಪಿಸಿ ಆ ಪ್ರದೇಶಗಳನ್ನು ಏಳಿಗ್ಗೆ ತರಲು
ಅವಕಾಶವಿತ್ತು. ಆದರೆ ಅವರು ಹೀಗೆ ಮಾಡಲಿಲ್ಲ.
ಅವರಲ್ಲಿ ಪಕ್ಷಪಾತ ಭಾವನೆಯಿಲ್ಲದಿದ್ದರೆ ಇದನ್ನೆಲ್ಲಾ
ಏಕೆ ಕೈ ಬಿಡುತ್ತಿದ್ದರು? ಒಂದೇ ಮಾತಿನಲ್ಲಿ ಹೇಳುವು
ದಾದರೆ ಈ ದಿವಸ ವೆಸ್ಟ್ ಪಂಜಾಬಿನಲ್ಲಿರುವ
ಪಾಕೀಸ್ತಾನಕ್ಕೂ ಈಸ್ಟ್ ಪಂಜಾಬಿನ ಪ್ರದೇಶಕ್ಕೂ
ಏನು ತಕರಾರುಗಳು ನಡೆಯುತ್ತಿವೆಯೋ ಹಾಗೆ ಈ
ಪ್ರಾಂತ್ಯಗಳಲ್ಲಿಯೂ ನಡೆಯುತ್ತಾ ಬಂದುದರಿಂದ ಈ
ಪ್ರದೇಶಗಳು ಅಭಿವೃದ್ಧಿಯಲ್ಲಿ ಹಿಂದೆ ಬೀಳಲು ಕಾರಣ
ವಾಯಿತು. ಉದಾಹರಣೆ ನಾನೀಗ ಒಂದು ಮಾತನ್ನು
ಹೇಳಬೇಕಾಗಿದೆ. ಶ್ರೀ ಚಕ್ರವರ್ತಿ ರಾಜಗೋಪಾಲಾ
ಚಾರ್ಯರು ಬಹಳ ದೊಡ್ಡ ಮನುಷ್ಯರು, ಅವರಲ್ಲಿ
ನನಗೂ ತುಂಬ ಗೌರವವಿದೆ. ಆದರೆ ಅಂಥ ದೊಡ್ಡ
ಮನುಷ್ಯರೂ ಕೂಡ ನಮ್ಮ ಕನ್ನಡಿಗರ ವಿಚಾರದಲ್ಲಿ
ಪಕ್ಷಪಾತ ಭಾವನೆಯನ್ನು ತೋರಿಸಿರುವಂಥ ಒಂದು
ವಿಚಾರ ನನಗೆ ಈಗಲೂ ಚೆನ್ನಾಗಿ ಜ್ಞಾಪಕದಲ್ಲಿದ್ದೇ
ಇದೆ. ಒಂದಾವರ್ತಿ ಒಂದು ಅನಾಹುತಕ್ಕೆ ತುತ್ತಾಗಿ
ಸುಮಾರು ಹತ್ತು ಸಾವಿರ ಸಂಸಾರಗಳು ನಿರಾಶ್ರಿತ
ರಾಗಿ ಹೋದರು. ಆಗ ಇವರು ಗವರ್ನರ್ ಜನರಲ್
ಆಗಿದ್ದರು. ಇವರು ಈ ಹತ್ತು ಸಾವಿರ ಜನರ ಕ್ಷೇಮ
ಲಾಭಗಳಿಗಾಗಿ ಕೇವಲ ಎರಡು ಸಾವಿರ ರೂಪಾಯಿಗಳ
ಸಹಾಯವನ್ನು ಒದಗಿಸಿ ಕೊಟ್ಟರು. ಆಗ ನಾವು ಇವ
ರನ್ನು ಖುದ್ದಾಗಿ ಕಂಡು ಮಾತನಾಡಿಕೊಂಡು ಬರಬೇ
ಕೆಂದು ಹೋದಾಗ ಇವರು ನಮಗೆ ಇಂಟರ್‌ವ್ಯೂ ಮಾಡ
ಲಿಕ್ಕೂ ಸಹ ಅವಕಾಶಕೊಡದಂತೆ ತಿರಸ್ಕಾರ ಭಾವನೆ
ಯನ್ನು ತೋರಿಸಿಬಿಟ್ಟರು. ಆಗ ಕ್ಷಾಮದ ಭೀಕರತೆ
ಬೇರೆ ಹೆಚ್ಚಾಗಿತ್ತು. ರಿಮಿಷನ್‌ಗಾಗಿ ಅರ್ಜಿಸಲ್ಲಿಸಿದೆವು
ಅದಕ್ಕೂ ಸಹ ಇವರು ಗಮನ ಕೊಡಲಿಲ್ಲ. ಆದರೆ ಆ
ತಮಿಳುನಾಡಿನಲ್ಲಿ ಒಂದಾವರ್ತಿ ಸೈಕ್ಲೋನ್ ಬಂದು
ಅಲ್ಲಿನ ಜನರಿಗೆ ತೊಂದರೆ ಬಂದಾಗ ಇದೇ ಶ್ರೀ
ರಾಜಗೋಪಾಲಾಚಾರ್ಯರು ಟ್ರಂಕಾಲ್ ಮೇಲೆ
ಟ್ರಂಕಾಲ್ ಮಾಡಿ ಕಲೆಕ್ಟರಿಗೆ ಸ್ಪೆಷಲ್ ಆರ್ಡರ್‌ಗಳನ್ನು
ಕೊಟ್ಟು ಆ ತಮಿಳರಿಗೆ ಕೋಟ್ಯಂತರ ರೂಪಾಯಿಗಳ
ಸಹಾಯವನ್ನೊದಗಿಸಿದರು. ಅವರು ಹೀಗೆ ಏತಕ್ಕಾಗಿ
ಮಾಡಿದರೆಂದರೆ ಅವರಲ್ಲಿ ದೇಶಾಭಿಮಾನಕ್ಕಿಂತಲೂ
ಆ ಭಾಷಾಭಿಮಾನ ಹೆಚ್ಚಾಗಿದ್ದುದರಿಂದ ಹಾಗೆ
ಮಾಡಿದರೆಂದು ಗೊತ್ತಾಗುತ್ತದೆ. ಹೀಗೆ ಯಾರಲ್ಲೇ
ಆಗಲಿ ಒಂದೊಂದು ಸಂಕುಚಿತ ಭಾವನೆಗಳು ಇದ್ದೇ
ಇರುತ್ತವೆಂಬುದನ್ನು ಮಾನ್ಯ ಸಭಿಕರ ಗಮನಕ್ಕೆ
ತರಲು ನಾನೀಗ ಈ ವಿಚಾರವನ್ನು ಪ್ರಸ್ತಾಪ ಮಾಡ
ಬೇಕಾಗಿ ಬಂತು. ಬ್ರಿಟಿಷರು ಈ ದೇಶಕ್ಕೆ ಬಂದ
ನಂತರ ಅವರು ಅವರ ಆಡಳಿತಕ್ಕನುಗುಣವಾಗಿ
ದೇಶವನ್ನು ವಿಭಜನೆ ಮಾಡಿದಾಗ್ಯೂ ಅವರಾ
ದರೂ ಈ ದೃಷ್ಟಿಯನ್ನು ತೋರಿದು ಅವರೇನು
ರಾಜ್ಯವಿಭಜನೆ ಮಾಡಿಲ್ಲ. ಭಾಷಾವಾರು ಆಧಾರದ
ಮೇಲೆ ಇದನ್ನು ಮಾಡಿದ್ದಾರೆ. ಈ ದಿವಸ ರಚಿತ
ವಾದಂಥ ಆ ಆಂಧ್ರನಾಡನ್ನು ಯಾವ ಆಧಾರದ
ಮೇಲೆ ಮಾಡಿದ್ದಾರೆ? ಅದನ್ನು ಕೂಡ ಈಗ ಈ ಭಾಷಾ
ಆಧಾರದ ಮೇಲೆ ರಚನೆ ಮಾಡಿದ್ದಾರೆ. ಆದರೆ ಈ
ಸಭೆಯಲ್ಲಿ ಈಗ ಯಾವ ಯಾವ ಮಾನ್ಯ ಸದಸ್ಯರು ಈ
ಭಾಷಾವಾರು ಪ್ರಾಂತ್ಯಗಳು ಬೇಡ ಎಂದು ವಾದ
ಮಾಡಿದ್ದಾರೋ ಅವರಾದರೂ ಏತಕ್ಕಾಗಿ ಇದನ್ನು
ಬೇಡವೆಂದು ಹೇಳುತ್ತಿದ್ದಾರೆಂಬ ಬಗ್ಗೆ ಅವರು ತಮ್ಮ
ಮನಸ್ಸನ್ನು ಬಿಚ್ಚಿ ಮಾತನಾಡಿಲ್ಲ. ನ್ಯಾಯವಾದಂಥ
ಕಾರಣಗಳೇನಿವೆ ಎನ್ನುವುದನ್ನೂ ಸಹ ತಿಳಿಸಿಲ್ಲ.
ಅವರೆಲ್ಲಾ ಇದನ್ನು ಹೀಗೇಕೆ ವಿರೋಧಿಸುತ್ತಿದ್ದಾ
ರೆಂದರೆ ಅವರು ಅವರ ಒಂದು ಸ್ವಾರ್ಥ ಧ್ಯೇಯಕ್ಕಾಗಿ
ಹೀಗೆ ವಿರೋಧಿಸುತ್ತಾರೆಂದು ನಾನು ನನ್ನ ಮನ
ಸ್ಸನ್ನು ಬಿಚ್ಚಿ ಝುಳಝುಳ ಹೇಳಬೇಕಾಗಿದೆ. ಅವರು
ಈ ದಿವಸ ತಮ್ಮ ಕೈಯಲ್ಲಿರುವ ಅಧಿಕಾರ ನಾಳೆ
ಈ ರಾಜ್ಯಗಳ ಪುನರ್ವಿಂಗಡಣೆಯಾದಲ್ಲಿ ಅದು ತಮ್ಮ
ಕೈ ಬಿಟ್ಟು ಹೋಗಬಹುದೆಂಬ ದೃಷ್ಟಿಯಿಂದ ಹೀಗೆ
ಇದನ್ನು ವಿರೋಧಿಸಿರುತ್ತಾರೆಂದು ಎದ್ದು ಕಾಣುತ್ತಿದೆ.
ಈ ದಿವಸ ಕೂಡ ನಮ್ಮಲ್ಲಿ ಇಂಥ ಸ್ವಾರ್ಥಪರರಾದ
ನಮ್ಮ ಅಣ್ಣ ತಮ್ಮಂದಿರುಗಳು ಇದ್ದಾರಲ್ಲಾ ಎನ್ನತಕ್ಕ
ಬಗ್ಗೆ ನಾನು ತುಂಬ ವ್ಯಥೆ ಪಡುತ್ತೇನೆ. ಹಿಂದೆ ಇಲ್ಲಿ

(ಶ್ರೀ ಕೆ. ಕೊಟ್ರ ಬಸವನಗೌಡ.)

ಬ್ರಿಟಿಷರು ಇದ್ದಾಗ ಅವರು ಇದೆಲ್ಲಾ ಬೇಡ ಎನ್ನುತ್ತಿದ್ದರು. ಅದು ಸಹಜವಾಗಿಯೇ ಇತ್ತು. ಆದರೆ ಆ ದಿವಸ ಆ ಬ್ರಿಟಿಷರು ಏನು ಹೇಳುತ್ತಿದ್ದರೋ ಅದೇ ಮಾತನ್ನು ಈ ದಿವಸ ನಮ್ಮ ಅಣ್ಣ ತಮ್ಮಂದಿರುಗಳೂ ಹೇಳುತ್ತಿದ್ದಾರಲ್ಲಾ ಎನ್ನುವುದೇ ನನಗೆ ತುಂಬ ವ್ಯಥೆಯನ್ನುಂಟುಮಾಡಿದೆ. ಈ ದಿವಸ ನಮ್ಮ ದೇಶ ಇದ್ದ ಹಾಗೆ ಇರಲಿ, ಇದು ದೊಡ್ಡದಾದರೆ ಅಭಿವೃದ್ಧಿಯಾಗಲು ಬಹಳ ಕಷ್ಟವಿದೆಯೆಂದು ನನ್ನ ಸಹೋದರರು ಕೆಲವರು ಹೇಳಿದರು. ಅದಕ್ಕೆ ನಾನು ಕೇಳುತ್ತೇನೆ—ಆ ಕೊಡಗು ದೇಶ ನಮ್ಮ ಮೈಸೂರಿಗಿಂತಲೂ ಬಹಳ ಚಿಕ್ಕದಾಗಿದೆ ಆದುದರಿಂದ ಕೊಡಗು ನಮ್ಮ ಮೈಸೂರಿಗಿಂತಲೂ ಮುಂದುವರಿದಂಥ ಒಂದು ದೇಶವಾಗಿದೆಯೇನು? ಹೀಗೆ ಚಿಕ್ಕದಾಗಿರತಕ್ಕಂಥ ಎರಡು ಮೂರು ಜಿಲ್ಲೆಗಳಷ್ಟು ವಿಸ್ತೀರ್ಣವುಳ್ಳ ಪ್ರದೇಶಗಳನ್ನೆಲ್ಲಾ ನಾವು ಅವು ಹಾಗೆಯೇ ಇರಲಿ ಎಂದು ಹೇಳಿದರೆ ಅವು ಒಂದೊಂದೂ ಸ್ವತಂತ್ರ ಪ್ರದೇಶವಾಗಿ ಬಾಳಲು ಸಾಧ್ಯವಿದೆಯೇ ಎಂದು ಕೇಳುತ್ತೇನೆ? ಹೀಗೆ ಚಿಕ್ಕ ಪುಟ್ಟ ದೇಶಗಳನ್ನೆಲ್ಲಾ ಒಂದುಮಾಡಬೇಕೆಂಬ ದೃಷ್ಟಿಯಿಂದಲೇ ಕೇಂದ್ರಸರ್ಕಾರದವರು ಪ್ರತಿಯೊಂದು ಸ್ಟೇಟಿಗೂ ವಿಶೇಷವಾಗಿ ಸಹಾಯ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರ ಧ್ಯೇಯ ಅಷ್ಟು ಉದಾರವಾಗಿರುವಾಗ, ನಾವು ಶ್ರೀಮಂತರಾಗಿದ್ದೇವೆ, ಆದ್ದರಿಂದ ನಾವು ನಮ್ಮ ಪಾಡಿಗೆ ಇರೋಣ, ಬಡವರು ಅವರ ಪಾಡಿಗೆ ಅವರು ಇರಲಿ, ಅವರ ಕ್ಷೇಮ ಚಿಂತನೆಗಳೆಲ್ಲಾ ನಮ್ಮಗೇಕೆ ಬೇಕು ಎನ್ನತಕ್ಕಂಥವರ ಜೀವನವೂ ಒಂದು ಜೀವನವೇ?

ಆದ್ದರಿಂದ ಈ ವಿಶಾಲದೃಷ್ಟಿಯಿಂದ ಕರ್ಣಾಟಕ ಪ್ರಾಂತ್ಯ ಆಗುವುದು ಒಳ್ಳೆಯದು. ದೂರದೃಷ್ಟಿಯಿಂದ ನೋಡಬೇಕೇವಿನಾ ಸಂಕುಚಿತ ಭಾವನೆಯಿಂದ ನೋಡುವುದು ತಪ್ಪು. ಹಾಗೆ ಮಾಡಿದರೆ ಮುಂದಿನ ಪೀಳಿಗೆ ನಮ್ಮನ್ನು ಶಪಿಸುವುದಲ್ಲದೆ ಅವರ ಅಧೋಗತಿಗೆ ಇದು ಕಾರಣವಾಗುತ್ತದೆ. ಕನ್ನಡ ಭಾಷೆ ಮಾತನಾಡುವ ಭಾಗಗಳನ್ನು ಎರಡು ಪ್ರಾಂತ್ಯಗಳಾಗಿ ಮಾಡಿದರೆ ತಾಯಿ ಮಗುವನ್ನು ಬೇರೆ ಮಾಡಿದ ಹಾಗಾಗುತ್ತದೆ, ಕೈಕಾಲು ಕತ್ತರಿಸಿಹಾಕಿದಂತಾಗುತ್ತದೆ. ಒಂದೇ ತಾಯಿಯನ್ನು ಎರಡು ಭಾಗವಾಗಿ ಮಾಡುವ ಸಂಕುಚಿತ ದೃಷ್ಟಿ ಹೋಗಬೇಕು. ಎಂದಾದರೂ ಕರ್ಣಾಟಕ ಪ್ರಾಂತ್ಯ ಆಗಲೇ ಬೇಕು. ಆಗಿಯೇ ಆಗುತ್ತದೆ. ಈಗ ಇರುವುದು ಕರ್ಣಾಟಕ ಪ್ರಶ್ನೆಯಲ್ಲ. ಭಾರತದೇಶದಾದ್ಯಂತ ಇರುವ ಪ್ರಾಂತ್ಯಗಳ ಪುನರ್ವಿಂಗಡನೆಯೇ ರಾಜ್ಯಗಳ ಪುನರ್ವಿಂಗಡನಾ ಸಮಿತಿಯ ಉದ್ದೇಶ. ಪ್ರಾಂತ್ಯ ಪುನರ್ವಿಂಗಡನಾ ಚಳವಳಿಯು ಇಂಡಿಯಾದೇಶದಲ್ಲೆಲ್ಲಾ ಇದೆ. ಮಹಾರಾಷ್ಟ್ರ, ಪಂಜಾಬು, ತಮಿಳು ಪ್ರಾಂತ್ಯಗಳಾಗಬೇಕೆಂದು ಹೊಡೆದಾಡುತ್ತಿದ್ದಾರೆ. ಈ ಎಲ್ಲಾ ಪ್ರಾಂತ್ಯಗಳೂ ಭಾಷೆಗಳ ಆಧಾರದ ಮೇಲೆಯೇ ಆಗಬೇಕೆಂದು ಹೊಡೆದಾಡುತ್ತಿದ್ದಾರೆ. ಕರ್ಣಾಟಕ ಭಾಗಗಳು ಮಾತ್ರ ಇದ್ದ ಹಾಗೆ ಇರಲಿ, ಬಾಕಿ ಪ್ರಾಂತ್ಯಗಳನ್ನು ಮಾಡುತ್ತೇವೆಂದರೆ ಸರಿಹೋಗುವುದಿಲ್ಲ. ಎಂದಾದರೂ ಕರ್ಣಾಟಕ ಪ್ರಾಂತ್ಯ ಆಗಲೇ ಬೇಕು. ಅದು ಆಗುವವರೆಗೂ ದೇಶದಲ್ಲಿ ಶಾಂತಿ ನೆಲಸುವುದಿಲ್ಲ. ಇಂಡಿಯಾ ಸರ್ಕಾರದಲ್ಲಿ ಪಂಡಿತ್ ನೆಹರೂ ಅವರಂಥ ಮುತ್ಸದ್ದಿಗಳಿದ್ದಾರೆ. ಆದಾಗ್ಯೂ ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ಬಹಳ ತಪ್ಪುಮಾಡುತ್ತಿದ್ದಾರೆ. ನ್ಯಾಯವಾಗಿ ಜಾಗ್ರತೆ ಭಾಷೆಯ ಆಧಾರದ ಮೇಲೆ ಪ್ರಾಂತ್ಯಗಳನ್ನು ಮಾಡಿ ಕರ್ಣಾಟಕ ಪ್ರಾಂತ್ಯ ಮಾಡುವುದು ಅತ್ಯಾವಶ್ಯಕ. ಇದನ್ನು ಮಾಡದೆ ಹೋದರೆ ನಮ್ಮ ದೇಶ ಹಾಳಾಗಿ ಹೋಗುತ್ತದೆ. ಮೈಸೂರಿನ 18ನೇ ಶತಮಾನದ ಚರಿತ್ರೆಯನ್ನು ನೋಡಿದರೆ, ಅನಂತಪುರಜಿಲ್ಲೆ, ಹಿಂದೂಪುರ, ಕಲ್ಯಾಣದುರ್ಗದ ಮುಕ್ಕಾಲು ಭಾಗ ಪ್ರದೇಶವೆಲ್ಲಾ ನಮಗೆ ಸೇರಿತ್ತು. ನೀಲಗಿರಿ ಜಿಲ್ಲೆಯೂ ಮೈಸೂರಿಗೆ ಸೇರಿತ್ತು. ಇತ್ತೀಚೆಗೆ ನಾನಾಕಾರಣದಿಂದ ಮದರಾಸಿಗೆ ಸೇರಿದಮೇಲೆ, ತಮಿಳುನಾಡು ಜನರು ಅಲ್ಲಿಗೆ ಬಂದು ನಮ್ಮ ಕೈಬಿಟ್ಟುಹೋಗಿದೆ. ಉತ್ತರದಲ್ಲಿ ಮಹಾರಾಷ್ಟ್ರ, ಪೂರ್ವದಲ್ಲಿ ಆಂಧ್ರರ ದೆಸೆಯಿಂದ ನಮ್ಮ ದೇಶ ಹಾಳಾಗಿಹೋಗಿದೆ. ನಮ್ಮ ಮಹಾನಾಯಕರಿಗೆ ಇದು ಅರ್ಥವಾಗುತ್ತಾ ಇಲ್ಲ. ಇದು ವಿಷಾದಕರವಾದ ಸಂಗತಿಯಾಗಿದೆ. ಆದ್ದರಿಂದ ಭಾಷೆಯ ಆಧಾರದ ಮೇಲೆ administrative contiguity ಆಧಾರದ ಮೇಲೆ ಕರ್ಣಾಟಕ ಪ್ರಾಂತ್ಯವನ್ನು ಮಾಡಬೇಕು. ಮುಂದಿನ ಪೀಳಿಗೆ ಶಪಿಸದಂತೆ ವಿಶಾಲದೃಷ್ಟಿಯನ್ನು ಗಮನಕ್ಕೆ ತೆಗೆದುಕೊಂಡು ಕರ್ಣಾಟಕ ಪ್ರಾಂತ್ಯ ಆಗುವುದಕ್ಕೆ ಅನುಮತಿ ಕೊಡುತ್ತೀರೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಪರಮೇಶ್ವರಪ್ಪ (ಸಿರಗುಪ್ಪೆ).—ಈಗ ಆಂಧ್ರರಾಷ್ಟ್ರ ಬಂದಿದೆ. ಇನ್ನು ಬರುವ ವರ್ಷ ಕರ್ಣಾಟಕರಾಷ್ಟ್ರ ಬರುವುದು ನ್ಯಾಯವಾಗಿದೆ. ಆದಷ್ಟು ಬೇಗ ಕರ್ಣಾಟಕಪ್ರಾಂತ್ಯ ಮಾಡಬೇಕೆಂದು ವಿನಂತಿ. ಅದುವರೆಗೆ ದುಡುಕುವುದು ಅನ್ಯಾಯ. ಆರ್ಥಿಕದೃಷ್ಟಿಯಿಂದ, ಸಾಮಾಜಿಕದೃಷ್ಟಿಯಿಂದ ಈ ರಾಜ್ಯಗಳ ಪುನರ್ವಿಂಗಡನಾ ಪ್ರಶ್ನೆಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ಆಲೋಚನೆ ಮಾಡುವುದಕ್ಕಾಗಿ ಫಸಲಾಲಿ ಕಮಿಟಿಯನ್ನು ಏರ್ಪಾಡುಮಾಡಿದ್ದಾರೆ. ಬರೀ ಭಾಷೆ ಆಧಾರದ ಮೇಲೆ ಈ ಪ್ರಶ್ನೆಯನ್ನು ವಿಮರ್ಶೆ ಮಾಡಬೇಕೆಂದು ಹೇಳಿಲ್ಲ. ಮೊದಲು ಬಳ್ಳಾರಿ ಜಿಲ್ಲೆಯ ಆರು ತಾಲ್ಲೂಕ್‌ಗಳನ್ನು ಮೈಸೂರಿಗೂ ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೂ ಸೇರಿಸಬೇಕೆಂದು ಸಲಹೆ ಮಾಡಿದರು. ಆಗ ಅಲ್ಲಿ ಗಲಾಟೆಯಾಗಿ ಮಲಬಾರ್ ಪೋಲೀಸಿನವರು ಹೋಗಿ ಶಾಂತಿಯನ್ನು ಏರ್ಪಡಿಸಬೇಕಾಯಿತು. ಈ ವಿಚಾರ ಮದರಾಸ್ ಅಸೆಂಬ್ಲಿಯಲ್ಲಿ ಚರ್ಚೆಗೆ ಬಂದು ಒಂದು ಕಮಿಟಿ ರಿಪೋರ್ಟಾಗಿ ಆ ಮೇಲೆ ಶ್ರೀ ಮಿಶ್ರಾರವರು ಅಲ್ಲಿಗೆ ಹೋಗಿ ವಿಚಾರ ಮಾಡಿ ಬಳ್ಳಾರಿಯ ಆರು ತಾಲ್ಲೂಕುಗಳನ್ನು ಮೈಸೂರಿಗೂ ಉಳಿದ ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೂ ಕೊಡುವಂತಾಯಿತು. ಕರ್ಣಾಟಕರಾಷ್ಟ್ರ ಆಗಬೇಕಾದ ಪರಿಸ್ಥಿತಿ ಈಗ ಒದಗಿದೆ ಎಂದು ತೋರುತ್ತದೆ. ಒಬ್ಬನಿಗೆ ಉಪ್ಪು ರುಚಿ, ಇನ್ನೊಬ್ಬನಿಗೆ ಕಾರ ರುಚಿ, ಮತ್ತೊಬ್ಬನಿಗೆ ಸಿಹಿ ರುಚಿ ಆಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಅವರಿಗೆ ತೋರಿದಂತೆ ಮಾತನಾಡಬಹುದು. ನೂರೈವತ್ತು ವರ್ಷಗಳ ಕಾಲ ಇಂಗ್ಲಿಷರು ರಾಜ್ಯಭಾರ ಮಾಡಿ ಕಬ್ಬನ್ನು ಹಿಂಡಿ ಸಿಪ್ಪೆ ಬಿಟ್ಟಂತೆ ನಮ್ಮನ್ನು ಬಿಟ್ಟು ಬಿಟ್ಟು ಹೋದರು. ಈಗ ನಮಗೆ ಸ್ವಾತಂತ್ರ್ಯ ಬಂದು ಎಂಟು ವರ್ಷಗಳಾದವು. ಆದರೂ ನಾವು ಇನ್ನೂ ಸಾಕಷ್ಟು ಬಲಯುತರಾಗಿಲ್ಲ; ಅಲ್ಲಿ ತಗ್ಗು ಇದೆ, ಇಲ್ಲಿ ದಿಣ್ಣೆ ಇದೆ ಎಂದು ಹೇಳುತ್ತಿದ್ದೇವೆ. ಮೈಸೂರಿನವರು ಮುಂದುವರಿದಿದ್ದಾರೆ ಎಂದು ಹೇಳುತ್ತಾರೆ. ಅದಕ್ಕೆ ಕಾರಣ ಇದೆ. ಯಾವಾಗಲೂ ರಾಜಾ ಪ್ರತ್ಯಕ್ಷ ದೇವತಂ ಎಂಬಂತೆ ಮೈಸೂರಿನಲ್ಲಿ ಹಿಂದಿನಿಂದಲೂ ರಾಜರು 'ಪ್ರಜೆಗಳನ್ನು ಪ್ರೇಮದಿಂದ ನೋಡುತ್ತಿದ್ದರಲ್ಲದೆ ಅವರ ಸೌಕರ್ಯದ ಕಡೆಗೆ ಗಮನಕೊಡುತ್ತಿ

ದ್ದರು. ಈ ಕಾರಣದಿಂದ ಮೈಸೂರಿನ ಪ್ರಜೆಗಳು ಮುಂದಕ್ಕೆ ಬಂದರು.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ತಮ್ಮನ್ನೆಲ್ಲಾ ಅಣ್ಣತಮ್ಮಂದಿರೆಂದು ನಾವಾಗಲೇ ಒಪ್ಪಿಕೊಂಡಿದ್ದೇವೆ. ಆದ್ದರಿಂದ ತಮ್ಮ ವಿಚಾರದಲ್ಲಿ ಏನೂ ತೊಂದರೆ ಇಲ್ಲ.

ಶ್ರೀ ಎಸ್. ಪರಮೇಶ್ವರಪ್ಪ.—ಹೌದು. ಒಪ್ಪಿಕೊಂಡಿದ್ದೀರಿ. ನಾವೆಲ್ಲಾ ನಿಮ್ಮ ಅಣ್ಣತಮ್ಮಂದಿರು. ಆದರೆ ಶ್ರೀ ಕೆ. ಪಟ್ಟಾಭಿರಾಮರ್‌ರವರು ಹೇಳಿದಹಾಗೆ 1799ರಲ್ಲಿ ಅಂದರೆ ಟಿಪ್ಪುಸುಲ್ತಾನ್ ಕಾಲದಲ್ಲಿ ಅವರೆಲ್ಲಾ ದೂರ ಹೋಗುವಂತಾಯಿತು. ಈಗ ಅವರು ಸಮೀಪಕ್ಕೆ ಬರುತ್ತಾರೆಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ವೇಮನ ಹೇಳಿದ ಮಾತುಗಳು ನನಗೆ ಜ್ಞಾಪಕಕ್ಕೆ ಬರುತ್ತದೆ. ಅವರು ಹೀಗೆ ಹೇಳುತ್ತಾರೆ.

> "ಚಂಪದಗಿನ ಎಟ್ಟಿ ಶತ್ರುವು ತನಚೇತ ಚಿಕ್ಕಿ
> ನೇನಿ ಕೀಡು ಚೇಯರಾದು ಪೊಸಗ ಮೇಲು
> ಜೇಸಿ ಪೊಮ್ಮನುಟೀ ಚಾಲು, ವಿಶ್ವದಾಭಿ
> ರಾಮ, ವಿನರ ವೇಮ,"

ಅಂದರೆ ಶತ್ರುಗಳಾದಂಥವರೂ ಕೂಡ ನಮ್ಮ ಸಮೀಪಕ್ಕೆ ಬಂದರೆ, ಅವರನ್ನು ಮನ್ನಣೆಕೊಟ್ಟು ಹಿಂದಕ್ಕೆ ಕಳುಹಿಸಿಕೊಡುತ್ತೇವೆ. ನಮ್ಮ ಕೈಗೆ ಸಿಕ್ಕಿದರೆ ಅವರನ್ನು ಕೊಲ್ಲಬಾರದು ಎಂದಿರುವಾಗ ನಮ್ಮ ಅಣ್ಣತಮ್ಮಂದಿರು ನಮ್ಮ ಸಮೀಪಕ್ಕೆ ಬರುತ್ತೇವೆಂದು ಹೇಳಿದರೆ, ಅವರನ್ನು ಬರುವುದು ಬೇಡ ಎಂದು ಹೇಳುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಬಳ್ಳಾರಿಯನ್ನು ಹೇಗೆ ಸ್ವಾಗತ ಮಾಡಿದ್ದೀರೋ ಅದರಂತೆಯೇ ಉಳಿದ ಕರ್ಣಾಟಕದ ಭಾಗಗಳನ್ನು ಸ್ವಾಗತಿಸಬೇಕು. ಹಿಂದಿನಿಂದಲೂ ದೊಡ್ಡದೊಡ್ಡ ಮಹನೀಯರು ಪ್ರತಿಯೊಬ್ಬರೂ ಈ ರೀತಿ ಮಾಡುತ್ತೇವೆಂದು ಹೇಳುತ್ತಾ ಬಂದಿದ್ದಾರೆ. ಅವರನ್ನು ಬರುವುದು ಬೇಡ ಎಂದು ಹೇಳುವುದು ಸರಿಯಲ್ಲ. ಭೂದೇವಿ ಹೀಗೆ ಹೇಳುತ್ತಾಳೆ,

> "ಎಟ್ಟಿ ದುಷ್ಕರ್ಮನಿನ್ನೈನ ಭರಿಂಚುಗಲನು
> ಗಾನಿ ಆಡಿತಪ್ಪಿನವಾನಿ ಮೋಯ ಜಾಲನೇ
> ಅನೆ ಭೂದೇವಿ ಬ್ರಹ್ಮವದ್ದ"

ಮಾನ್ಯ ಸದಸ್ಯರು ಆಕಡೆ ಈಕಡೆ ಮಾತನಾಡುವುದರಲ್ಲಿ ತಪ್ಪಿಲ್ಲ. ಪ್ರತಿಯೊಬ್ಬ ಕಾಂಗ್ರೆಸ್ ಸದಸ್ಯರು ಕಾಂಗ್ರೆಸ್ಸಿನಿಂದ ದೇಶಕ್ಕೆ ಸುಖವಿದೆ, ಅಹಿಂಸಾಪರಮೋ ಧರ್ಮ: ಎಂದು ಹೇಳಿ ಕಾಂಗ್ರೆಸ್ಸಿನಲ್ಲಿದ್ದವರು ನಿಜವಾಗಿಯೂ ಕಷ್ಟಪಟ್ಟು ಪ್ರಾಣವನ್ನು ಕೊಟ್ಟು ಸ್ವರಾಜ್ಯ ತಂದಿದ್ದಾರೆ. ದೊಡ್ಡ ದೊಡ್ಡ ಮಹನೀಯರು ಮಾತನಾಡಿ, ಅಲ್ಲಿ ಬಿಸಿಲು ಬರುತ್ತದೆ, ಇಲ್ಲಿ ಕೊಡೆ ಹಿಡಿಯಿರಿ ಎಂದು ಹೇಳುವುದು ಸಮಂಜಸವಾಗಿ ಕಾಣುವುದಿಲ್ಲ. ಭೂದೇವಿ ದುಷ್ಕೃತ್ಯ ಮಾಡಿದವರನ್ನು ತಾನು ಹೊರಲು ತಯಾರಾಗಿದ್ದೇನೆ, ಆದರೆ ಆಡಿದ ಮಾತಿಗೆ ತಪ್ಪುವವರು ಭಾರವಾಗುತ್ತಾರೆ ಅಂಥವರನ್ನೇ ಭೂಮಿಮೇಲೆ ಹುಟ್ಟಿಸಬಾರದು ಎಂದು ಬ್ರಹ್ಮನನ್ನು ಕೇಳಿಕೊಂಡಳಂತೆ. ಸ್ವಾತಂತ್ರ್ಯ ಬಂದ ಮೇಲೆ ನಮ್ಮ ದೇಶ ಉದ್ಧಾರವಾಗುವುದಕ್ಕೆ ಅಸ್ಪದವಿದೆ. ಪಾಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತಮಾಡುತ್ತಿದ್ದೇವೆ. ಇಂಥಾದ್ದರಲ್ಲಿ ಅಲ್ಲಿ ತಗ್ಗು ಇದೆ. ಇಲ್ಲಿ ದಿಣ್ಣೆ ಇದೆ. ನಾವು ಇದ್ದಂತೆಯೇ ಮುಂದುವರಿಸಿ ಎಂದು ಹೇಳುವುದು ಸರಿಯಲ್ಲ. ಪಂಡಿತ್ ಜವಹರ್‌ಲಾಲ್‌ರವರು ಅಮೇರಿಕಾಕ್ಕೆ ಹೋದಾಗ ಅಲ್ಲಿ President Truman ಖುದ್ದು interview ಕೊಟ್ಟರು. ನಮ್ಮ ದೇಶದಲ್ಲಿ ಅಧ್ಯಾತ್ಮಕ ಶಕ್ತಿ ಇದೆ, ಧರ್ಮ ಇದೆ. ನಾವು ಏನೇನು ಆಡಿರುತ್ತೇವೋ ಅದನ್ನು ಒಪ್ಪಿಕೊಂಡು ಅದರಂತೆ ನಡೆಯಬೇಕು. ಯಾವ ಸಮಯದಲ್ಲಿ ಏನು ಆಗಬೇಕೋ, ಅದು ಆಗಿಯೇ ತೀರುತ್ತದೆ ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಆದ್ದರಿಂದ ಮಾನ್ಯ ಸ್ನೇಹಿತರು ನಮ್ಮೊಡನೆ ಬಂದು ಸೇರಿಕೊಳ್ಳುತ್ತೇವೆಂದು ಹೇಳುವವರನ್ನು ಶತ್ರುಗಳಂತೆ ನೋಡಬಾರದು. ಒಂದುವೇಳೆ ಶತ್ರುಗಳಾದರೂ ಅವರಿಗೆ ಉಪಕಾರ ಮಾಡಬೇಕು. ಅಪಕಾರ ಮಾಡಬಾರದು. 1921ರಲ್ಲಿ ಕೇಳ್ಕರ್ ಈ ವಿಚಾರದಲ್ಲಿ award ಕೊಟ್ಟಿದ್ದಾರೆ. ಅಂತು ಬಳ್ಳಾರಿಯ ಮೂರು ತಾಲ್ಲೂಕುಗಳ ಸ್ಥಿತಿ ತ್ರಿಶಂಕು ಸ್ವರ್ಗದಲ್ಲಿ ಇದ್ದಹಾಗೆ ಇದೆ.

ಮನುಷ್ಯ ಅಲ್ಲಿ ಬೇರೆ ಇಲ್ಲ, ಇಲ್ಲಿ ಬೇರೆ ಇಲ್ಲ. ನಾವೆಲ್ಲರೂ ಹೊಂದಿಕೊಂಡು ಹೋಗಬೇಕು ಅಷ್ಟೆ. ಚಾಂಡರಿ ಕಮಿಷನ್ ಬಂದಾಗ ಬೇಕಾದರೆ ಬದಲಾವಣೆ ಮಾಡಬಹುದೆಂದು ಹೇಳಿದರು. ಅವರು ಹೇಳಿ ಮಾಡುವುದಕ್ಕಿಂತ ನಾವಾಗಿಯೇ ಸ್ವಾಗತ ನೀಡುವುದು ರಾಜನೀತಿ. ವರಮಾನದ ದೃಷ್ಟಿಯಿಂದ ನೋಡಿದರೂ ಕೂಡ ರಾಯಚೂರು ಒಂದು ಡಿಸ್ಟ್ರಿಕ್ಟು ತನ್ನ ಹತ್ತಿಯ ಬೆಳೆಯಿಂದ ನಿಮ್ಮ ಕೋಲಾರದ ಚಿನ್ನದಗಣಿಗೆ ಸಮನಾಗಿದೆಯೆನ್ನಬಹುದು ; ರಾಜಲ್ ಬಂಡ ಪ್ರಾಜೆಕ್ಟ್ ಎಂಬುದಿದೆ ; ಒಂದು ಲಕ್ಷ ಎಕರೆ ಅದರಿಂದ ತರಿ ಆಗುತ್ತದೆ; ಗುಲ್ಬರ್ಗ ಡಿಸ್ಟ್ರಿಕ್ಟಿನ ವಿಷಯದಲ್ಲಿ ಶೇಷಾದ್ರಿ ಕಮಿಟಿ ಬಹಳ ಮಟ್ಟಿಗೆ ಹೇಳಬೇಕಾದದ್ದನ್ನೆಲ್ಲಾ ಬಿಟ್ಟಿದೆ. ಅಲ್ಲಿ ಅಮೃತ್ ಮಹಲ್ ಸಿಕ್ಕುವ ಪ್ರಸಿದ್ಧವಾದ ಶಬಾಬಾದ್ ಇದೆ. ಇದರಿಂದಲೇ ಹೈದರಾಬಾದ್ ಸಂಸ್ಥಾನಕ್ಕೆ ವರ್ಷಕ್ಕೆ ಮೂರುಕೋಟಿ ಉತ್ಪತ್ತಿ ಬರುತ್ತದೆ. ಅದನ್ನಿಲ್ಲಿ ಹೇಳಿಲ್ಲ. ಸಿರಿಗುಪ್ಪ ಪ್ರಾಜೆಕ್ಟಿನಿಂದ 90,000 ಎಕರೆಗಳು ಸಾಗುವಳಿಗೆ ಬರುತ್ತವೆ. ಇದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು ತೆರಿಗೆ ಬರುವುದನ್ನು ಲೆಕ್ಕ ಹಾಕಿದರೆ ಎಷ್ಟೋ ಆದಾಯ ನಮಗೆ ಬರುತ್ತದೆ. ಬಾರ್ಸಿ, ಅಕ್ಕಲಕೋಟೆ ಮುಂತಾದ ಪ್ರದೇಶಗಳಲ್ಲಿ ಮುತ್ತಿನಂತಿರುವ ಬಿಳಿಜೋಳ ಬೆಳೆಯುತ್ತದೆ. ಎಲ್ಲಿಯೂ ಅಂಥ ಜೋಳ ಬೆಳೆಯುವುದಿಲ್ಲ. ಬಿದರೆ ಜಿಲ್ಲೆಯಲ್ಲಿ ಬೆಳೆಯುವಂಥ ಪಲಾವ್ ಅಕ್ಕಿ ಇಂಡಿಯಾದೇಶದಲ್ಲೇ ಪ್ರಸಿದ್ಧಿಯಾಗಿದೆ. ಆದ್ದರಿಂದ ನಾವು ಸಂಕುಚಿತ ಮನೋಭಾವವನ್ನು ಬಿಟ್ಟು ದೂರದೃಷ್ಟಿಯಿಂದ ಅವರನ್ನು ಸ್ವಾಗತಿಸಿ ಧೈರ್ಯದಿಂದ ಮುಂದೇನು ಬಂದರೂ ಅನುಭವಿಸೋಣ. ಆ ಪ್ರದೇಶ ಇನ್ನೂ ಮಗುವಿನಂತಿದೆ; ದೊಡ್ಡದಾಗಿಲ್ಲ. ಈ ಎಂಟು ವರ್ಷದಲ್ಲಿ ಇಷ್ಟು ಮುಂದುವರಿದಿವೆ! ಅಲ್ಲದೆ ಇಂಥ ವಿಷಯಗಳಲ್ಲಿ ಇಂಡಿಯಾ ಪ್ರಪಂಚಕ್ಕೆ ಮಾರ್ಗದರ್ಶಕವಾಗಿರಬೇಕು. ಇಂಥ ಧರ್ಮದೇಶದಲ್ಲಿ ಅಣ್ಣತಮ್ಮಂದಿರು ಗುದ್ದಾಟವಾಡುವುದು ಸರಿಯಲ್ಲ. ಸ್ವಾತಂತ್ರ್ಯಬಂದ ಹೊಸದರಲ್ಲಿ ಪಟೇಲರು ಹೇಳಿದ ಒಂದು ಮಾತನ್ನು ನೆನಪಿಗೆ ತಂದುಕೊಳ್ಳಿ. ಇಂಗ್ಲೀಷಿನವರು 150 ವರ್ಷಗಳ ಕಾಲ ಇಲ್ಲಿ ರಾಜ್ಯಭಾರ ಮಾಡಿದರೂ ಅವರು ಕೇವಲ ಇಲ್ಲ ಭೂಮಿಯ ಮೇಲಿರುವ ವಸ್ತುಗಳನ್ನು ಮಾತ್ರ ಒಯ್ದಿದ್ದಾರೆ, ಅಷ್ಟೆ. ಇನ್ನೂ ನಮ್ಮಲ್ಲಿರುವ ಖನಿಜ ಸಂಪತ್ತು ಹಾಗೆಯೇ ಇದೆ. ಭೂಮಿಯೊಳಗಿರುವುದೆಲ್ಲವನ್ನೂ ಅವರಿಗೆ ಒಯ್ಯಲಾಗಿಲ್ಲ. ಆದ್ದರಿಂದ ಇಂದು ನಾವು ಸಂಶೋಧನೆ ನಡೆಸಿ ಭೂಮಿಯೊಳಗಿರುವ ಭಂಗಾರವನ್ನು ತೆಗೆಯಲು ಪ್ರಯತ್ನಿಸೋಣ; ಇದರಿಂದ ಇಂಡಿಯಾವನ್ನು ಬಂಗಾರದಿಂದ ಕಟ್ಟಬಹುದು ಎಂದು ಹೇಳಿದ ವಲ್ಲಭಾಯ್ ಪಟೇಲರ ವಾಕ್ಯಗಳು ಸತ್ಯದಿಂದ ಕೂಡಿದಂಥವು. ಇಂಡಿಯಾ ದೇಶದಲ್ಲಿದ್ದ 562 ಸಂಸ್ಥಾನ

ಶ್ರೀ ಎಸ್. ಪರಮೇಶ್ವರಪ್ಪ.)

ಗಳನ್ನು ಒಂದು ರಕ್ತಪಾತವಿಲ್ಲದೆ ಪಟೇಲರು ಒಂದುಗೂಡಿಸಿದರು ; 50 ವರ್ಷಗಳಕಾಲ ಇಂಗ್ಲೀಷಿನವರು ಎಷ್ಟು ಕಷ್ಟಪಟ್ಟರೂ, ಯುದ್ಧಮಾಡಿದರೂ ಈ ಐಕ್ಯತೆಯನ್ನು ತರಲಾಗಿರಲಿಲ್ಲ. ಸಂಸ್ಥಾನದ ಅರಸರಿಗೆ ಕಾಂಪೆನ್ಸೇಷನ್ ಎಷ್ಟು ಬೇಕೋ ಅಷ್ಟು ಕೊಟ್ಟು ಎರಡು ವರ್ಷಗಳಕಾಲದಲ್ಲಿ ಎಲ್ಲ ರಾಜರಿಗೂ ಲಗಾಮು ಹಾಕಿದರು; ಯಾರಿಗೂ ಯಾವ ನೋವೂ ಇಲ್ಲದೆ ಮಾಡಿದರು. ಇಷ್ಟೆಲ್ಲಾ ಎಸಗಿದ ಆ ಮಹಾವ್ಯಕ್ತಿಗಳು ಹೃದಯಸ್ತಂಭನದಿಂದ ನೋವಾಗಿ ಚಿಕಿತ್ಸೆಗೆ ಬೊಂಬಾಯಿಗೆ ಏರೋಪ್ಲೇನಿನಲ್ಲಿ ಹೋದ ಸಮಯದಲ್ಲಿ ಒಂದು ವಾಕ್ಯವನ್ನು ಅಪ್ಪಣೆ ಕೊಡಿಸಿದರು. "ನಮ್ಮ ದೇಶವನ್ನು ಇನ್ನು ಯಾರೂ ಆಳುವುದಕ್ಕೆ ಅಧಿಕಾರವಿಲ್ಲ. ನಮ್ಮ ದೇಶ ಯಾರಿಂದಲೂ ನಾಶವಾಗುವುದಿಲ್ಲ. ಆದರೆ, ಅದು ನಮ್ಮ ದೇಶದ ಜನರಿಂದಲೇ ನಾಶವಾದೀತು. ಇದನ್ನು ತಪ್ಪಿಸಲು ನಾವೆಲ್ಲರೂ ಶ್ರಮಿಸಬೇಕು" ಎಂದು ಹೇಳಿದರು. ಇವೇ ಅವರ ಅಂತ್ಯ ಹಿತನುಡಿಗಳಾದುವು. ಬೊಂಬಾಯಿನಲ್ಲಿ ಸತ್ತಮೇಲೆ ಅವರ ಅಸ್ಥಿಯನ್ನು ತ್ರಿವೇಣಿ ಸಂಗಮದಲ್ಲಿ ಹಾಕುವಾಗ ಪಟೇಲರು ನುಡಿದ ಈ ವಾಕ್ಯಗಳನ್ನು ಉದ್‌ಘೋಷಿಸಿದರು. ಆ ಹಿತನುಡಿಗಳನ್ನು ನಾವು ನೆನಪಿನಲ್ಲಿಡಬೇಕು, ನಾವು ನಾವು ಗುದ್ದಾಟವಾಡುವುದು ಸರಿಯಲ್ಲ. ನಾವೆಲ್ಲರೂ ಅಣ್ಣತಮ್ಮಂದಿರು. ಹೇಗೂ ಅವರು ನಮ್ಮಲ್ಲಿಗೆ ಬಂದೇ ಬರುತ್ತಾರೆ. ಕೊನೆಗೆ ಅಖಂಡ ಕರ್ಣಾಟಕ ಆಗಿಯೇ ಆಗುತ್ತದೆ. ಬಂದಾಗ ಅವರು ನಮ್ಮನ್ನು ನೋಡಿ, 'ಶತ್ರುಗಳಂತೆ ಮಾತನಾಡಿದರು' ಎಂದು ತಿಳಿದುಕೊಳ್ಳದಿರಲಿ. ಆದ್ದರಿಂದ ಗುದ್ದಾಟ ಮಾಡುವುದು ಬೇಡ. ಸಂಪತ್ತಿನ ವಿಷಯ ತೆಗೆದುಕೊಂಡರೆ, ಅಲ್ಲಿನ ಮೂರು ತಾಲ್ಲೂಕುಗಳಲ್ಲಿ ಶೇಕಡ 75 ಜನರು income-tax ಕೊಡುವವರಾಗಿದ್ದಾರೆ; ಶೇಕಡ 75 ಜನ ಸೇಲ್ಸ್ ಟ್ಯಾಕ್ಸ್ ಕೊಡುತ್ತಾರೆ. ಇಲ್ಲಿನ ಏಳು ತಾಲ್ಲೂಕುಗಳೂ ಒಂದು ತೂಕ, ಅಲ್ಲಿನ ಮೂರು ತಾಲ್ಲೂಕುಗಳೇ ಒಂದು ತೂಕ. ಆದ್ದರಿಂದ ಆ ತಾಲ್ಲೂಕುಗಳನ್ನು ಸೇರಿಸಿಕೊಳ್ಳುವುದಕ್ಕೆ ನೀವೆಲ್ಲರೂ ಒಪ್ಪಿಗೆ ಕೊಡಬೇಕು. ನಮ್ಮ ಮಾನ್ಯ ಸ್ನೇಹಿತರಾದ ನಾರಾಯಣರೆಡ್ಡಿಯವರೇನೋ ಆವೇಶದಲ್ಲಿ ಏನೋ ಮಾತನಾಡುತ್ತಾರೆ. ಅವರನ್ನೇನೂ ನಾನು ಆಪಾದನೆ ಮಾಡುತ್ತಿಲ್ಲ. ಅವರೂ ನಮ್ಮ ಸ್ನೇಹಿತರೇ. ಅವರಿಗೂ ಗೊತ್ತಿದೆ ; ನಮ್ಮ ನಾಗಯ್ಯ ರೆಡ್ಡಿಯವರಿಗೂ ಆಂಧ್ರ ಸಂಪರ್ಕದ ಅನುಭವವಿದೆ. ಆಂಧ್ರದಲ್ಲಿರತಕ್ಕ ಗೌಡರಿಗೂ ಇಲ್ಲಿ ನಮ್ಮ ಜಿಲ್ಲೆಯಲ್ಲಿರತಕ್ಕ ಗೌಡರಿಗೂ ವ್ಯತ್ಯಾಸವಿದೆ. ಆದ್ದರಿಂದ ಅವರೊಡನೆ ಕೂಡಿರುವುದಕ್ಕೆ ಅವರೂ ಇಷ್ಟಪಡಲಾರರು. ಮಾನ್ಯ ರೆಡ್ಡಿಯವರಿಗೆ ಇಲ್ಲಿರತಕ್ಕ ಗೌರವ ಅಲ್ಲಿ (ಆಂಧ್ರದಲ್ಲಿ) ದೊರೆಯುವುದಿಲ್ಲವೆಂದು ನನಗೆ ಗೊತ್ತು. ಆದ್ದರಿಂದ ಅವರು ಇಲ್ಲಿಂದ ಅಲ್ಲಿಗೆ ಹೋಗಬೇಕೆನ್ನುವುದಾದರೆ 'ಬೇಡ' ಎಂದು ಮನವಿಮಾಡಿಕೊಂಡು ನಾನು ಈ ಭಾಷಣವನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet at Thirty Minutes past Eight of the Clock the next day.

The House adjourned at Six of the Clock for the day to meet again at Thirty Minutes past Eight of the Clock on Tuesday, the 26th April 1955.

WD 4508—GPB—550—8-10-55